ಅಧ್ಯಕ್ಷರು : ನಾವು ಇವತ್ತು ಅವರನ್ನು ಕರೆದು ಸಮಯ ನಿಗದಿ ಮಾಡುತ್ತೇವೆ. ಈಗ ಮಾನ್ಯ ಮುಖ್ಯ ಮಂತ್ರಿಯವರು ಹಲ್ಲಿನ ನೋವು ಇರುವುದರಿಂದ ವೈದ್ಯರ ಹತ್ತಿರ ಹೋಗುತ್ತಿದ್ದಾರೆ. ಅದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು.

ಶ್ರೀ ಹೆಚ್.ಡಿ. ದೇವೇಗೌಡ : ನನಗೆ ಈಗ ನಿಮ್ಮ ಭಾಷಣ ಕೇಳುವುದಕ್ಕೆ ಆಗುವುದಿಲ್ಲ. ತಾವು ಅನುಮತಿ ಕೊಟ್ಟರೆ ಹೋಗುತ್ತೇನೆ.

(2) ಕಾನೂನು ಸುವ್ಯವಸ್ಥೆ ಬಗ್ಗೆ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಕಳೆದ 3 ತಿಂಗಳಲ್ಲಿ ಜನತಾ ದಳದ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ಅನೇಕ ಕಡೆ ಗಲಾಟೆ ಮತ್ತು ದರೋಡೆ ಮತ್ತು....

ಶ್ರೀ ಕೆ.ಎನ್. ನಾಗೇಗೌಡ : ನೀವು ಇದ್ದಾಗ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಇದ್ದಾಗ ಇತ್ತು. ಆದರೆ ಎಲ್ಲೋ ಕೆಲವು ಅಷ್ಟೇ. ಇದು ಜನತಾದಳದ ಸರ್ಕಾರ ಬಂದಮೇಲೆ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇದು ಯಾವ ಪ್ರಮಾಣದಲ್ಲಿ ಆಗುತ್ತಿದೆ ಹಾಗೂ ಇದಕ್ಕೆ ತಾವು ಯಾವ ರೀತಿಯಲ್ಲಿ ಕಾನೂನು ವ್ಯವಸ್ಥೆಯನ್ನು ನಡೆಸುತ್ತಿದ್ದೀರಿ ಎನ್ನುವುದು ಬಹಳ ಮುಖ್ಯ. ವಿಶೇಷವಾಗಿ ಬೆಂಗಳೂರು ನಗರದಲ್ಲಿ ಮತ್ತು ಹೈವೇಗಳಲ್ಲಿ ಆಗತಕ್ಕಂಥ ದರೋಡೆಗಳು ಮತ್ತು...

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಲಾ ಅಂಡ್ ಆರ್ಡರ್ ಬಗ್ಗೆ ನಾವು ಕಳುಹಿಸಿಕೊಟ್ಟಿದ್ದೇವೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಿರುವುದರಿಂದ ಇದರ ಬಗ್ಗೆ ವ್ಯಾಪಕವಾದಂತಹ ಚರ್ಚೆ ಆಗಬೇಕಾಗುತ್ತದೆ. ಇದರಲ್ಲಿ ನಾವು ಎಲ್ಲರೂ ಸಹ ಭಾಗವಹಿಸಬೇಕಾಗುತ್ತದೆ. ಆದುದರಿಂದ ತಾವು ನಮಗೆ ಒಂದು ನಿಯಮದ ಕೆಳಗೆ ಅವಕಾಶ ಮಾಡಿಕೊಟ್ಟರೆ ಅದಕ್ಕೆ ನಾವೆಲ್ಲರೂ ಭಾಗವಹಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇದಕ್ಕೆ ಅವರೂ ಕೂಡ ಸಪ್ಪೋರ್ಟ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡಿ ಕೊಳ್ಳಲಿ. ಅನೇಕ ಕಡೆ ಬೆಗಂಳೂರು ನಗರದಲ್ಲೂ ಕೂಡ ರೌಡಿಗಳ ಹಾವಳಿಗಳು, ಮತ್ತು ಖೂನಿಗಳು, ಹೆದ್ದಾರಿಗಳಲ್ಲಿ ದರೋಡೆಗಳು, ಅನೇಕ ಮನೆಗಳ ಲೂಟಿ ಇವೆಲ್ಲವೂ ಕೂಡ ಕಳೆದ 3 ತಿಂಗಳಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆದಿವೆ. ಅದಕ್ಕೆ ಇವತ್ತು ಪುಷ್ಟಿ ಆಗತಕ್ಕಂಥ ರೀತಿಯಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದಂತಹ 22ನೇ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ರಸ್ತೆ ದರೋಡೆ ಎಷ್ಟು ಎಂದರೆ 13, ರಸ್ತೆ ಲೂಟಿ ಎಂದರೆ 44, ರೌಡಿಗಳ ದಾಂದಲೆ 7 ಪ್ರಕರಣ ಎನ್ನುವ ಅಂಕಿ ಸಂಖ್ಯೆಗಳನ್ನು ಕೆಲವು ಕಡೆ ಕೊಟ್ಟಿದ್ದಾರೆ. ಆದರೆ ಇನ್ನು ಕೆಲವೊಂದು ಅಂಕಿ ಸಂಖ್ಯೆಗಳು ಬಂದಿಲ್ಲ. ಅವುಗಳು ಚುನಾವಣೆಯಲ್ಲಿ ಆದಂತಹ ಘರ್ಷಣೆಗಳು, ತದನಂತರ ಆದರ ಘರ್ಷಣೆಗಳು, ಮತ್ತು ಅನೇಕ ಕಡೆ ಆದಂತಹ ಖೂನಿಗಳು ಇದರ ಬಗ್ಗೆ ಯಾವ ಮಾಹಿತಿಯೂ ಕೂಡ ಇದರಲ್ಲಿ ಇಲ್ಲ.

ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಶ್ನೆಗೆ ನೇರವಾದ ಉತ್ತರ ಇದರಲ್ಲಿ ಇದೆ. ಇದನ್ನು ನಾವು ಗಮನಿಸಿದಾಗ ಈ ಸರ್ಕಾರದ ಆಡಳಿತ ಮತ್ತು ಕಾನೂನು ವ್ಯವಸ್ಥೆ ಸರಿಯಾದ ರೀತಿಯಿಂದ ನಡೆದುಕೊಂಡು ಹೋಗುತ್ತಾ ಇಲ್ಲಾ ಎನ್ನುವಂತಾದ್ದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಅಲ್ಲದೆ, ಅನೇಕ ಜಿಲ್ಲೆಗಳಲ್ಲಿ ರಾಜಕೀಯವಾಗಿ ಮತ್ತು ರಾಜಕೀಯ ದುರುದ್ದೇಶದಿಂದ ಕೆಲವರು ಸೇಡನ್ನು ತೀರಿಸಿಕೊಳ್ಳತಕ್ಕಂಥಾದ್ದನ್ನು ಕೂಡ ಇವತ್ತು ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಹುಬ್ಬಳ್ಳಿಯಲ್ಲಿ ರಾಜು ಆಚಾರಿ ಎಂಬುವರು ಸಮಾರು 30 ವರ್ಷದ ಯುವಕ. ಈತನಿಗೂ ಅಲ್ಲಿರತಕ್ಕಂಥ ಜನತಾದಳದ ಕಾರ್ಯಕರ್ತರು ಮತ್ತು ಇವನ ಮಧ್ಯೆ ಏನೋ ಒಂದು ವೈಮನಸ್ಸು ಇತ್ತು. ಅದರ ಪರಿಣಾಮವಾಗಿ ಇವನ ಕೊಲೆಯಾಯಿತು. ಕೊಲೆ ಆದಮೇಲೆ ಯಾರು ಕೊಲೆ ಮಾಡಿದರೋ ಅವರನ್ನು ಬಂಧಿಸಬೇಕು ಎಂದು ಹೇಳಿ ಸಾಕಷ್ಟು ಹೋರಾಟವನ್ನು ಅಲ್ಲಿನ ಯುವ ಕಾಂಗ್ರೆಸ್‌ನವರು ಮತ್ತು ಅನೇಕ ಜನ ಮಾಡಿದರು,ಹಾಗೂ ಹುಬ್ಬಳ್ಳಿ ಬಂದ್ ಕೂಡ ಆಗಿದೆ. ಇದು ಅನೇಕ ಜನರಿಗೆ ಗೊತ್ತಿರುವ ವಿಚಾರ, ತಮಗೂ ಗೊತ್ತಿರಬಹುದು. ಇಷ್ಟೆಲ್ಲಾ ಆದರೂ ಕೂಡ ಇಲ್ಲಿಯವರೆಗೆ ಯಾರು ಕೊಲೆ ಮಾಡಿದ್ದಾರೋ ಅವನ್ನು ಪತ್ತೆ ಹಚ್ಚಲಿಲ್ಲ, ಹಿಡಿಯಲಿಲ್ಲ. ಅವರು ಬಂಧನಕ್ಕೆ ಕೂಡ ಒಳಗಾಗಿಲ್ಲ. ಈ ರೀತಿಯಾಗಿ ನಡೆದುಕೊಂಡು ಹೋದರೆ ಜನರಿಗೆ ಈ ಸರ್ಕಾರದಲ್ಲಿ ಏನ ವಿಶ್ವಾಸ ಮೂಡುತ್ತದೆ ಎಂದು ನಾನು ಹೋದ ಸಾರಿಯೂ ಕೂಡ ಕೇಳಿದ್ದೆ. ಅಧ್ಯಕ್ಷರೆ ಅದಕ್ಕೆ ತಾವು ಅವರು ಬಂದು 10 ದಿವಸ ಕೂಡ ಆಗಿಲ್ಲ, ಏಕೆ ಹೇಳುತ್ತೀರಿ, ಇದು ಅಷ್ಟು ಸರಿಯಲ್ಲ ಎಂದು ಹೇಳಿದಿರಿ. ಈಗ ಅವರು ಬಂದು ನೂರು ದಿವಸಗಳು ತುಂಬಿದೆ. ನೂರು ದಿವಸ ತುಂಬಿದರೂ ಕೂಡ ಅನೇಕ ಕಡೆ ಇಂತಹ ದೌರ್ಜನ್ಯಗಳು ಖೂನಿಗಳು ನಡೆದರೂ ಕೂಡ ಅವರನ್ನು ಪತ್ತೆ ಹಚ್ಚದೆ, ಹಿಡಿಯದೆ ಹಾಗೆ ಬಿಟ್ಟಿದ್ದಾರೆ. ಇವತ್ತಿನ ದಿವಸ ಅವನ ತಾಯಂದಿರಿಗೆ ಅಣ್ಣ ತಮ್ಮಂದಿರಿಗೆ ಹೆದರಿಸುತ್ತಿದ್ದಾರೆ, ನೀವು ನಮ್ಮ ಹೆಸರನ್ನು ಏಕೆ ಕೊಟ್ಟಿದ್ದೀರಿ, ನಮ್ಮ ಮೇಲೆ ಏಕೆ ಈ ರೀತಿ ವಿರುದ್ಧವಾಗಿ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟಿದ್ದೀರಿ ಎಂದು ತೊಂದರೆ ಮಾಡುತ್ತಿದ್ದಾರೆ.

ಅದಕ್ಕೆ ಸಿಓಡಿ ಎನ್‌ಕ್ವೈರಿ ಮಾಡಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದರೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದನ್ನು ಸಿಓಡಿಗೆ ತೆಗೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ. ಇದಕ್ಕೆ ಲೋಕಲ್ ಪೊಲೀಸ್ ಸಹ ಸಪೋರ್ಟ್ ಮಾಡುತ್ತಾ ಇಲ್ಲ. ಇದರ ಬಗ್ಗೆ ಎನ್‌ಕ್ವೈರಿ ಸಹ ಮಾಡುತ್ತಿಲ್ಲ. ಇದರಲ್ಲಿ ಯಾರು ಇನ್‌ವಾಲ್ವ್ ಆಗಿದ್ದಾರೆ ಅವರನ್ನು ಹಿಡಿಯುವಂತಹ ಕೆಲಸ ನಡೆಯುತ್ತಾ ಇಲ್ಲ. ಇದನ್ನು ಸಿಓಡಿಗೆ ಒಪ್ಪಿಸಬೇಕು ಎಂದು ಪದೇ ಪದೇ ಹೇಳುತ್ತಿದ್ದರೂ ಕೂಡ ಸಿಓಡಿಗೆ ರೆಫರ್ ಮಾಡಿಲ್ಲ ಮತ್ತು ತಪ್ಪಿತಸ್ಥರು ಅರೆಸ್ಟ್ ಕೂಡ ಆಗಿಲ್ಲ.

ಇವತ್ತು ಒಬ್ಬನನ್ನು ಹಿಡಿದು ತಂದು ಅವನಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಖೂನಿ ಆಗಿ ಸುಮಾರು ಒಂದು ತಿಂಗಳು ಆಗುತ್ತಿದ್ದರೂ ಕೂಡ ಇಲ್ಲಿಯವರೆಗೆ ಯಾವ ಕ್ರಮವನ್ನು ಕೂಡ ಹುಬ್ಬಳ್ಳಿಯಲ್ಲಿ ತೆಗೆದುಕೊಂಡಿಲ್ಲ ಎಂದರೆ ನಿಜವಾಗಿಯೂ ಇದು ನಾವೆಲ್ಲರೂ ವಿಚಾರ ಮಾಡತಕ್ಕಂಥಾದ್ದಾಗಿದೆ. ಮತ್ತು ಈ ಸರ್ಕಾರ ಏನು ಮಾಡುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಇದರ ವಿಷಯವಾಗಿ ಸ್ವತಃ ಮಾನ್ಯ ಸಿಂಧ್ಯಾರವರ ಹತ್ತಿನ ನಾನು ಮಾತನಾಡಿದ್ದೇನೆ. ಅಲ್ಲಿ ಆ ಯುವಕ ಏನು ಅಲ್ಲಿ ಕೊಲೆ ಆಗಿದ್ದಾನೆ, ಆ ಕೊಲೆ ಬಗ್ಗೆ ತಾವು ತನಿಖೆ ಮಾಡಬೇಕು, ತಪ್ಪಿತಸ್ಥರಿಗೆ ಶಿಕ್ಷೆ ಕೊಡಬೇಕು ಎಂದು ಹೇಳಿದ್ದೇನೆ. ಅಲ್ಲಿ ಯಾರು ಈ ಕೊಲೆಗೆ ಸಂಬಂಧಪಟ್ಟಂತೆ ಸಿಓಡಿ ಎನ್‌ಕ್ವೈಯರಿ ಮಾಡಿರಿ ಎಂದು

ಕೆಲವು ಯುವಕರು ಪ್ರಯತ್ನ ಪಟ್ಟರು ಆ ಯುವಕರ ಮೇಲೆ ಪೊಲೀಸ್ ನವರು ಕೇಸ್ ಹಾಕಿದರು ಪೊಲೀಸರು ಕೇಸ್ ಹಾಕಿ ಅವರನ್ನು ಸುಮಾರು 5-6 ದಿವಸಗಳ ಕಾಲ ಪೊಲೀಸ್ ಕಸ್ಟಡಿಯಲ್ಲಿ ಇಟ್ಟುಕೊಂಡರು. ಕೊನೆಗೆ ಅವರು ಸೆಷನ್ ಕೋರ್ಟ್ ಮುಂದೆ ಕೇಸ್ ಹಾಕಿದರು.

ಇವರೆಲ್ಲರೂ ಹುಬ್ಬಳ್ಳಿಯಲ್ಲಿ ನಡೆದಂತಹ ಘಟನೆಯ ಬಗ್ಗೆ ಸಿಓಡಿ ಎನ್‌ಕ್ವೈಯರಿ ಕೇಳುತ್ತಿದ್ದರು. ಅನಿಲ್ ಕುಮಾರ್ ಪ್ರಕಾಶ್ ಸಹದೇವಪ್ಪ, ವೀರಭದ್ರಪ್ಪ ಸಂಗಪ್ಪ, ವೀರಣ್ಣ ಗೌಡ ಪಾಟೀಲ್, ರಾಮದಾಸ್ ರೇವಣ್ಣಕರ್, ಬಷೀರ್ ಅಹಮದ್, ರಾಮಣ್ಣ ಶಂಕ್ರಪ್ಪ, ಅವರ ಮೇಲೆ ಕೇಸ್ ಹಾಕಿದರು. ಅವರಿಗೆ ತೊಂದರೆ ಕೊಟ್ಟಿದ್ದಕ್ಕಾಗಿ ಸೆಷನ್ ಕೋರ್ಟ್‌ನಲ್ಲಿ ಕೇಸ್ ಹಾಕಿದರು ಸೆಷನ್ ಕೋರ್ಟ್‌ನಲ್ಲಿ ಬಹಳ ಸ್ಪಷ್ಟವಾಗಿ ಜಡ್ಜ್‌ಮೆಂಟನ್ನು ಮಾಡಿದ್ದಾರೆ.

(ಅಧ್ಯಕ್ಷರ ಪೀಠವನ್ನು ಉಪಾಧ್ಯಕ್ಷರು ಅಲಂಕರಿಸಿದರು)

"Describing the Respondents in the Security Proceedings as accused is totally wrong. Proceedings have been conducted as if it is investigated. When offence is committed and when the accused who have committed the offences have been produced before the judicial Magistrate. As per the provisions of Section 167 Cr. P.C., the Accused would present to judicial custody by the Judicial Magistrate, the said procedure seems to have been applied to the Security Proceedings which is totally illegal and without jurisdiction. It is only after a final order or interim order under Section 116 Cr. P.C., if he refuses to execute Bond, in such contingency, the Magistrate has to obtain reason. During the preliminary stages of enquiry, the Magistrate has no right to detain aperson and send him for Magistrial custody.

The very conduct of the Magistrate in remanding to magisterial custody is totally illegal and contrary to the spirit of Security Proceedings under Sections 107 and 111 Cr. P.C., It could only be said that in the instant case, there has been gross abuse and violation of human rights of the petitioner and fundamental rights guaranteed unde article 21 of the Constitution of India. As could be seen from the records for the past three days, the petitioners are kept in custody without any legal basis. Therefore in the circumstances, I am of the view that whatever proceedings initiated and action taken by the Sub-Divisional Magistrate, is wholly illegal and the entire proceedings are liable to be set aside. Revision allowed. Proceeding initiated under Section 107.Cr. P.C., against the petitioners is set aside. It is directed that the petitioners be set at liberty.. forthwith.

ಅಂದರೆ ಅಸಿಸ್ಟೆಂಟ್ ಕಮೀಷನರ್ ಕಾನೂನು ಬಾಹಿರವಾಗಿ ಸುಮಾರು 5 ದಿವಸಗಳ ಕಾಲ ಏನು ಇವರುಗಳನ್ನು ಜ್ಯೂಡಿಷಿಯಲ್ ಕಸ್ಟಡಿಯಲ್ಲಿಟ್ಟಿದ್ದರು ಅದು ತಪ್ಪು ಎಂದು ತಮ್ಮ ಆರ್ಡರ್‌ನಲ್ಲಿ ಸೆಷನ್ ಜಡ್ಜು ಸ್ಪಷ್ಟವಾಗಿ ಹೇಳಿದ್ದಾರೆ.

ಇದರಿಂದಾಗಿ ಎಷ್ಟರಮಟ್ಟಿಗೆ ರಾಜಕೀಯ ದೃಷ್ಟಿಯಿಂದ ಹೆರಾಸ್‌ಮೆಂಟ್ ಮಾಡಿದ್ದಾರೆ ಎನ್ನತಕ್ಕದ್ದು ಸ್ಪಷ್ಟವಾಗಿದೆ. ಸೆಷನ್ ಕೋರ್ಟ್‌ನವರು ಈ ನಿರ್ಧಾರವನ್ನು ತೆಗೆದುಕೊಂಡು ಪುನಃ ಸಿಓಡಿ ಎನ್‌ಕ್ವೈಯರಿ ಮಾಡಿ ಎಂದು ಕೇಳಿದರೂ ಕೂಡ ಸಿಓಡಿ ಎನ್ ಕ್ವೈಯರಿ ಮಾಡಿಲ್ಲ. ಆಕ್ಯೂಸ್ಡ್ ಅನ್ನು ಹಿಡಿದು ಶಿಕ್ಷೆ ಕೊಡುವುದನ್ನಾಗಲಿ ಅಥವಾ ಜೈಲಿಗೆ ಹಾಕುವುದನ್ನಾಗಲೀ ಮಾಡದೆ ಯಾರು ಸಿಓಡಿ ಎನ್ ಕ್ವಯರಿ ಕೇಳುತ್ತಿದ್ದರೋ ಅವರನ್ನು ಜೈಲಿಗೆ ಹಾಕಿದ್ದಾರೆ. ಇದು ಒಂದು ಪ್ರಕರಣವಾದರೆ ಎರಡನೆಯದಾಗಿ ಪ್ರಜಾವಾಣಿಯಲ್ಲಿ ವರದಿಯಾಗಿರುವಂತೆ ಕುಣಿಗಲ್‌ನಲ್ಲಿ 18ನೇ ತಾರೀಖು ಸಚಿವರ ಪುತ್ರನಿಂದ ಮತಪತ್ರ ಕಸಿದ ಪ್ರಸಂಗ ನಡೆಯಿತು. ಬ್ಯಾಲೆಟ್ ಪೇಪರ್ ತೆಗೆದುಕೊಂಡು ಓಡಿ ಹೋಗಿದ್ದರ ಬಗ್ಗೆ ಪೋಲೀಸಿನವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಸರ್ಕಾರವೇ ಈ ರೀತಿ ಮಾಡಿದರೆ ಇನ್ನು ಸಾಮಾನ್ಯ ಜನರ ಗತಿ ಏನು ಎಂಬುದರ ಬಗ್ಗೆ ತಾವು ದಯಮಾಡಿ ಹೇಳಿ. ಯೂಮನ್ ರೈಟ್ಸ್‌ವೈಲೇಟ್ ಮಾಡಿದ್ದಾರೆ. ಇಲ್ಲೂ ಕೂಡ ಸಿಓಡಿ ಎನ್‌ಕ್ವಯರಿ ಮಾಡಲು ತಾವು ತಯಾರು ಇಲ್ಲ. ಅಕ್ಯೂಸ್‌ಗಳನ್ನು ಎಸ್.ಜೆ.ಪಿ.ಯವರು ಹಿಡಿದಿದ್ದಾರೆ, ಮತ್ತು ಪೊಲೀಸರಿಗೆ ಕೊಟ್ಟಿದ್ದಾರೆ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದೀರಿ. ತುಮಕೂರಿನಲ್ಲಿ ಮಂತ್ರಿಗಳು ಯಾರು ಇದ್ದಾರೆ, ಅವರ ಮಗ ಮಾಡಿದ್ದಾರೆಂದು ಇದೆ. ಇದು ಸರಿಯೋ ತಪ್ಪೋ ತಾವು ಹೇಳಬೇಕು, ಮಂತ್ರಿಗಳು ಇದನ್ನು ಪತ್ರಿಕೆಯಲ್ಲಿ ಇದನ್ನು ಡಿನೈ ಮಾಡಿದ್ದಾರೆ. ಆ ಪ್ರಶ್ನೆ ಬೇರೆ. ಅಲ್ಲಿ ಬ್ಯಾಲೆಟ್ ಪೇಪರ್ ಕಳುವಾಗಿದೆಯೋ ಇಲ್ಲವೋ, ಪೇಪರ್ ವರದಿ ಸರಿಯೋ ತಪ್ಪೋ ಇತ್ಯಾದಿ ವಿಷಯಗಳನ್ನು ತಾವು ಸದನಕ್ಕೆ ತಿಳಿಸಬೇಕು. ಈ ಎಲ್ಲಾ ವಿಷಯಗಳು ಪತ್ರಿಕೆಯಲ್ಲಿ ವರದಿಯಾಗಿದೆ.

ಈ ರೀತಿ ಯಾರ ಬಳಿ ಅಧಿಕಾರ ಇದೆಯೋ ಅವರೇ ಈ ರೀತಿಯಾದರೆ ಸಾರ್ವಜನಿಕರಿಗೆ ಸಂಶಯ ಬರುವುದಿಲ್ಲವೇ? ಈ ಎರಡು ಸ್ಪಷ್ಟವಾದ ಉದಾಹರಣೆಗಳು. ಇದರ ಬಗ್ಗೆ ನಾವು ಅನೇಕ ಸಾರಿ ದೂರವಾಣಿ ಮಾಡಿದರೂ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಮೂರನೆಯದಾಗಿ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಜನತಾದಳ ಕಾರ್ಯಕರ್ತರಿಗೆ ಪೊಲೀಸರು ಚಿತ್ರಹಿಂಸೆ ನೀಡಿದ್ದಾರೆಂದು ಸ್ವತಃ ನಿಮ್ಮ ಕ್ಯಾಬಿನೇಟ್ ಸಚಿವರೇ ದೂರು ನೀಡಿದ್ದಾರೆ. ಜನತಾದಳದ ಕಾರ್ಯಕರ್ತರನ್ನು ಕರೆದುಕೊಂಡು ಹೋಗಿ ಕೈಕಾಲು ಮುರಿದು ಕಳುಹಿಸಿದ್ದಾರೆ. ಸಂಬಂಧಪಟ್ಟ ಎಸ್ ಪಿಯನ್ನು ಸಸ್ಪೆಂಡ್ ಮಾಡಬೇಕೆಂದು ಕೇಳಿದ್ದಾರೆ. ಒಬ್ಬ ಸರ್ಕಾರದಲ್ಲಿರುವ ಮಂತ್ರಿಯವರಿಗೆ ಈ ಸ್ಥಿತಿಯಾದರೆ ಇನ್ನು ಸಾಮಾನ್ಯ ಜನರ ಸ್ಥಿತಿ ಏನು ಎಂಬುದರ ಬಗ್ಗೆ ಯೋಚನೆ ಮಾಡಿ.

ಶ್ರೀ ಹೆಚ್.ಎನ್. ನಂಜೇಗೌಡ : ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಯವರು ಕೂಡ ಇದ್ದಾರೆ. ಸರ್ಕಾರ ನಡೆಸಿಕೊಂಡು ಹೋಗುವ ಮಂತ್ರಿಗಳೇ ಹೀಗೆ ದೂರು ಕೊಟ್ಟರು ಎಂದ ಮೇಲೆ ಸರ್ಕಾರದ ಯೋಗ್ಯತೆ ಏನು? ಸಚಿವರಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಕೊಟ್ಟಿದ್ದೀರೋ ಇಲ್ಲವೋ, ಆ ಪ್ರಶ್ನೆ ಬೇರೆ. ಆದರೆ ಮಂತ್ರಿಗಳೇ ಈ ರೀತಿ ಹೇಳಿದರೆ ಇನ್ನು ಸರ್ಕಾರ ಯಾವುದು? What is happening? The Minister is the Government. He should have sent the Home Miniser to suspend this fellow for the offence. ಇದು ಶಿಷ್ಟಾಚಾರವೇ? ನಾನು ಇಂದು ಬೆಳಿಗ್ಗೆ ಪತ್ರಿಕೆಯಲ್ಲಿ ಓದಿ ತಲೆ ತಗ್ಗಿಸಿದರೆ, ದಯಮಾಡಿ ಮುಂದೆ ಈ ರೀತಿಯಾಗಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಪೋಲೀಸ್ ಅಧಿಕಾರಿಗಳ ಎದುರುಗಡೆಯೇ ಒಂದು ಪ್ರೆಸ್ ಕಾನ್ಫರೆನ್ಸ್ ಮಾಡಿ ಅವರು ಹೇಳಿದ್ದಾರೆ. ಬಳ್ಳಾರಿ ಜಿಲ್ಲೆಯ ಪೋಲೀಸ್ ಅಧಿಕಾರಿ ಗಗನ್‌ದೀಪ್‌ರವರ ಸಮ್ಮುಖದಲ್ಲೇ ಪೋಲೀಸ್ ಅಧಿಕಾರಿಗಳು ನಡೆಸಿದ ಈ ಬರ್ಬರ ಕೃತ್ಯವನ್ನು ನೀವು ಇಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಸ್ವತಃ ರಾಜ್ಯ ಸರ್ಕಾರದ ಸಣ್ಣ ಕೈಗಾರಿಕಾ ಸಚಿವರಾದ ಶ್ರೀ ಎನ್. ಎಂ. ನಬಿಯವರು ವಿವರಿಸಿದ್ದರು. ಇದಕ್ಕಿಂತ ಜಾಸ್ತಿ ಏನ ಬೇಕು ಮಾನ್ಯ ಅಧ್ಯಕ್ಷರೇ, ಯಾರು ಮಂತ್ರಿಗಳಾಗಿದ್ದಾರೆ ಅವರ ಮತಕ್ಷೇತ್ರದಲ್ಲೇ ಇದು ನಡೆದಿದೆ.ಅವರ ಮತಕ್ಷೇತ್ರದಲ್ಲಿಯೇ ಈ ರೀತಿಯಾಗಿ ನಡೆಯಬೇಕಾದರೆ ಬೇರೆ ಕಡೆ ಹೇಗೆ ನಡೆದಿದೆ? ಏನು ವ್ಯವಸ್ಥೆ ಇದೆ ಎನ್ನತಕ್ಕಂಥದನ್ನು ತಾವು ಯೋಚನೆ ಮಾಡಿ. ಇನ್ನೊಂದು ಕಡೆ ಕುಣಿಗಲ್‌ನಲ್ಲಿ, ಅಲ್ಲೂ ಕೂಡ ಮಂತ್ರಿಗಳಿದ್ದಾರೆ ಅವರ ಮಗನೆ ಆ ರೀತಿ ಮಾಡಿದ್ದಾನೆ ಎಂಬ ದೂರು ಬಂದಿದೆ. ಶ್ರೀ ನಬಿಯವರು, ತಮ್ಮ ಕಾರ್ಯಕರ್ತರನ್ನು ಬೂಟಿನಿಂದ ಒದ್ದರು, ಕಾಲು ಮುರಿದರು, ಕೈಮುರಿದರು ಎಂಬ ಈ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ. ನಾನು ಹೇಳತಕ್ಕದ್ದು ಯಾವಾಗ ನಿಮ್ಮ ಮತಕ್ಷೇತ್ರದಲ್ಲಿ ಪೋಲೀಸರ ಮೇಲೆ ನಿಮಗೆ ಹಿಡಿತ ಇಲ್ಲ, ನಿಮ್ಮ ಜನರ್ನು ನೋಡಿಕೊಳ್ಳತಕ್ಕಂಥ ಶಕ್ತಿ ನಿಮ್ಮಗಿಲ್ಲ, ನಿಮ್ಮ ಜಿಲ್ಲೆಗೆ ಉಸ್ತುವಾರಿ ಸಚಿವರುಗಳಾಗಿ ಅದನ್ನು ಸರಿಯಾದ ರೀತಿಯಿಂದ, ಜನರ ಕಾನೂನನ್ನು ಸುವ್ಯವಸ್ಥಿತವಾಗಿ ಇಡಬೇಕು ಎಂಬುದು ನಿಮಗೆ ಬರುತ್ತಿಲ್ಲ ಅಂದರೆ ಬೇರೆಯವರಿಗೆ ಏನು ರಕ್ಷಣೆ ಕೊಡುತ್ತೀರಿ? ಏನು ಸಹಾಯ ಮಾಡುತ್ತೀರಿ? ಬೇರೆಯವರ ಕಷ್ಟಗಳಲ್ಲಿ, ತೊಂದರೆಗಳಲ್ಲಿ ನೀವು ಎಷ್ಟರ ಮಟ್ಟಿಗೆ ಸಹಾಯಕರಾಗುತ್ತೀರಿ ಎನ್ನುವುದನ್ನು ಅವರು ಹೇಳಬೇಕು. ಇವತ್ತು ನಾವು ಸುಮ್ಮನೆ ಅಲಿಗೇಷನ್ ಮಾಡಬೇಕು ಎಂದು ಮಾಡುತ್ತಿಲ್ಲ. ಇವೆಲ್ಲವೂ ಕೂಡ ನಿಮ್ಮಿಂದಲೇ ಸೃಷ್ಟಿ ಆದವುಗಳು. ಎಲ್ಲೆಲ್ಲಿ ನಿಮ್ಮ ಮಂತ್ರಿಗಳಿದ್ದಾರೆ, ಎಲ್ಲೆಲ್ಲಿ ನಿಮ್ಮ ಶಾಸಕರುಗಳು ಇದ್ದಾರೆ, ಅಲ್ಲಿಯೇ ನೀವು ಈ ರೀತಿ ಮಾಡಿದರೆ ಬೇರೆ ವಿರೋಧಪಕ್ಷದವರಿದ್ದಾರಲ್ಲ ಅವರ ಗತಿ ಏನು? ಅವರ ಕಾರ್ಯಕರ್ತರ ಗತಿ ಏನು? ಆ ಪಕ್ಷದವರ ಗತಿ ಏನಾಗಬೇಕು? ಇವತ್ತು ನಾನು ಉದಾಹರಣೆಗೆ ಹೇಳುತ್ತೇನೆ ಅಧ್ಯಕ್ಷರೇ, ನನ್ನ ಒಂದೇ ಮತಕ್ಷೇತ್ರದಲ್ಲಿ 15ನೇ ತಾರೀಖು ಪೋಲೀಂಗ್ ಇತ್ತು. ಪೇಪರ್‌ನಲ್ಲೂ ಬಂದಿದೆ, ತಮಗೂ ಕೂಡ ಗೊತ್ತಿದೆ. ಅಲ್ಲಿ ಜಿಲ್ಲಾ ಪರಿಷತ್ತು.. ಕಾಂಗ್ರೆಸ್, ಜನತಾದಳ, ಕ್ಯಾಬಿನೆಟ್ ಭಾಗವಹಿಸಿ, ಹೋಗಿ, ಎಲ್ಲಾ ಬ್ಯಾಲೆಟ್ ಪೇಪರ್‌ಗಳನ್ನು ತೆಗೆಸಿ ಬಿಟ್ಟು ತಾಲ್ಲೂಕು ಪಂಚಾಯತಿಗೆ ಒಂದು ನೂರು ಓಟು, ಮತ್ತು ಜಿಲ್ಲಾಪರಿಷತ್ತಿಗೆ ನೂರು ಓಟು ಹಾಕಿಕೊಂಡರು. ಹಾಕಿಕೊಂಡು ಆದಮೇಲೆ ಪೋಲೀಸರಿಗೆ ಫೋನ್ ಮಾಡಿಸಿಬಿಟ್ಟು ಹೋಗಿ ರಿಪೋರ್ಟ್ ತರಿಸಿಕೊಂಡು ಕ್ಯಾನ್ಸಲ್ ಮಾಡಿ ಪುನಃ 18ನೇ ತಾರೀಖು ಅದು ರೀಪೋಲಿಂಗ್ ಆಯಿತು. ಅದಕ್ಕೆ ಕುಮ್ಮಕ್ಕು ಕೊಡತಕ್ಕಂಥವರು ಯಾರು? ನಾನು ಹೇಳುತ್ತಿದ್ದೇನೆ, ಇದನ್ನು ನೇರವಾಗಿ ಇಲ್ಲಿನ ಮಂತ್ರಿಗಳು, ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಅಥವಾ ಗೃಹ ಮಂತ್ರಿಗಳು ಕೊಡುತ್ತಾರೆಂದು ಹೇಳುವುದಿಲ್ಲ. ಅಲ್ಲಿ ಸ್ಥಳೀಯ ಕಾರ್ಯಕರ್ತರು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕಾದರೆ ನಿಮ್ಮಲ್ಲಿ ಯಾರದ್ದಾದರೂ ಆಶೀರ್ವಾದ ಇಲ್ಲದೆ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇಲ್ಲದಿದ್ದರೆ ಅವರಿಗೆ ಈ ಧೈರ್ಯ ಹೇಗೆ ಬರುತ್ತದೆ. ನೀವು ಅಭ್ಯರ್ಥಿಯಾಗಿ ಬ್ಯಾಲೆಟ್ ಪೇಪರನ್ನು ತೆಗೆದುಕೊಂಡು ಕುಳಿತಿದ್ದನ್ನು...

ಒಬ್ಬ ಮಾನ್ಯ ಸದಸ್ಯರು : ಸ್ವಾಮಿ ನಿಮ್ಮ ಅಧಿಕಾರಿಗಳು ಆ ಕೆಲಸ ಮಾಡುತ್ತಾ ಇರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಒಂದು ಕಡೆ ಅಲ್ಲ ಅನೇಕ ಕಡೆ ಆಗಿದೆ. ನಾನು ಹೇಳುತ್ತಿದ್ದೇನೆ. ನಮ್ಮವರನ್ನಾದರೂ ಮಾಡಿ ಅಥವಾ

ಬೇರೆಯವರನ್ನಾದರೂ ಮಾಡಿ ನಾನು ಅದನ್ನು ಹೇಳುತ್ತಿಲ್ಲ. ನಮ್ಮಿಬ್ಬರನ್ನು ಮತ್ತೆ ಬೇರೆಯವರಿಬ್ಬರನ್ನು ಮಾಡಿ. ಏಕೆಂದರೆ ಈ ದೇಶದ ಬಡವರಿಗೆ ರಕ್ಷಣೆ ಸಿಗಬೇಕು, ಕಾನೂನು ವ್ಯವಸ್ಥೆ ಇದೆ ಅಂಥ ಅಂದರೆ, ರಾಜಕೀಯದಲ್ಲಿ ನಾವು ಬರುತ್ತೇವೆ, ಹೋಗುತ್ತೇವೆ, ಅವರಿಗೆ ನಾವು ಫ್ರೀಡಂ ಕೊಟ್ಟರೆ ಯಾರಿಗೆ ಬೇಕು ಅವರಿಗೆ ಓಟು ಹಾಕುತ್ತಾರೆ. ಅದನ್ನು ಬಿಟ್ಟು ನಮ್ಮ ರಾಜ್ಯದ ಮತಗಟ್ಟೆಗೆ ಹೋಗಿ ಮತಗಟ್ಟೆಯ ಪೇಪರ್‌ಗಳನ್ನು ತೆಗೆದುಕೊಂಡು, ಗುದ್ದಿಕೊಂಡು ನೀವೇ ಹಾಕಿಕೊಳ್ಳುತ್ತೀರಿ. ಮತ್ತು ನೀವೇನು ಮಾಡಿದಿರಿ ಅಂದರೆ, ಸ್ವಾಮಿ ನಾವು ಆಡಳಿತದಲ್ಲಿ ಇಂಟರ್‌ಫಿಯರ್ ಮಾಡಲ್ಲ ಯಾವ ಅಧಿಕಾರಿಗಳನ್ನು ಮಾರ್ಚವರೆಗೆ ತೆಗೆಯುವುದಿಲ್ಲ ಎಂದು ಹೇಳಿ ತಾವು ಏನು ಮಾಡಿದಿರಿ? ಎಲ್ಲದಕ್ಕಿಂತ ಮೊದಲು ಅಧಿಕಾರಿಗಳನ್ನು ಎಲ್ಲಿ ಟ್ರಾನ್ಸ್‌ಫರ್ ಮಾಡಿದಿರಿ ಎಂದರೆ ನನ್ನ ಮತಕ್ಷೇತ್ರದಲ್ಲಿ, ಗುರುಮಠ್ ಕಲ್ ಮತಕ್ಷೇತ್ರದಿಂದ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಯಾರು ಯಾರು ಇದ್ದರು ಅವರನ್ನು ಅಲ್ಲಿಂದ ತೆಗೆದು ಹಾಕಿದರು, ಏಕೆ ನೀವು ಹೇಳುವುದು ಒಂದು ನಡೆದುಕೊಳ್ಳುವುದು ಒಂದು. ಮತ್ತದೆ ರೀತಿ ಹೇಳುವುದು, ನಾವು ಎಲ್ಲೂ ಕೂಡ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ, ನಾನು ಇದನ್ನು ಟಾಲ್‌ರೇಟ್ ಮಾಡುವುದಿಲ್ಲ..

ಉಪಸಭಾಧ್ಯಕ್ಷರು : ನೀವು, ನೀವು ಎಂದು ಹೇಳಬೇಡಿ ಅವರು ಎಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರಕ್ಕೆ ತಮ್ಮ ಮೂಲಕವಾಗಿ ಹೇಳುತ್ತಿದ್ದೇನೆ. ಇವೆಲ್ಲವೂ ಕೂಡ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿಯ ಚುನಾವಣೆಯಲ್ಲಿ ಈ ಘಟನೆ ನಡೆದಿದೆ ಎಂದರೆ ಅಲ್ಲಿಯ ಒಳ್ಳೆಯ ಅಧಿಕಾರಿಗಳನ್ನು ತೆಗೆದು ನಿಮಗೆ ಬೇಕಾದವರನ್ನು ಹಾಕಿಕೊಂಡು ಈ ರೀತಿಯಾಗಿ ಮಾಡಬೇಕು ಎಂಬ ದೃಷ್ಟಿಯಿಂದ ಇದನ್ನು ಮಾಡಿದಿರಿ. ನಿಮ್ಮ ಆಪಾದನೆಯನ್ನು ನಾನು ನೇರವಾಗಿ ಹೇಳುತ್ತೇನೆ. ಇಲ್ಲದಿದ್ದರೆ ಈ ಪ್ರಶ್ನೆಯೇ ಬರುತ್ತಾ ಇರಲಿಲ್ಲ ಮತ್ತು ರಾತ್ರಿ 12 ಗಂಟೆಗೆ ಹೋಗಿ ಆ ಅಧಿಕಾರಿಗಳನ್ನು ಎಬ್ಬಿಸುವುದು, ಅವರಿಗೆ ಬೇಕಾದವರನ್ನು ಬಿಟ್ಟುಬಿಡಬೇಕು, ಬೇಡವಾದವರನ್ನು ಒಂದೆರಡು ದಿವಸ ಒಳಗಡೆ ಹಾಕುವುದು. ಈಗ ಉದಾಹರಣೆಗೆ ಸೇಡಂ ತಾಲ್ಲೂಕಿನಲ್ಲಿ ಕೋಡ್ಲ ಎಂಬ ಒಂದು ಗ್ರಾಮ ಇದೆ. ಅಲ್ಲಿ ಏನಾಗಿದೆ ಎಂದರೆ ಒಬ್ಬ ಜಿಲ್ಲಾಪರಿಷತ್ ನ ಮುದ್ರಂ ಎನ್ನುವ ಒಬ್ಬ ಅಭ್ಯರ್ಥಿ ಆತನು ಚುನಾವಣೆಗೆ 5-6 ದಿವಸ ಇದ್ದಾಗ ಜೋರು ಮಾಡಿದ ಎಂದು ಹೇಳಿ ಅವನನ್ನು ಮತ್ತು ಅವನ ಜೊತೆಯಲ್ಲಿರತಕ್ಕವರನ್ನು ಶುಕ್ರವಾರ ಅರೆಸ್ಟ್ ಮಾಡಿ ಸೋಮವಾರ ಬಿಟ್ಟರು. ಅಂದರೆ ಎರಡು ದಿವಸಗಳ ಕಾಲ ಒಳಗಡೆ ಹಾಕಿದ್ದರು. ಇಲ್ಲಿ ಮತಗಟ್ಟೆಯಲ್ಲಿ ಬೋಗಸ್ ಹಾಗೂ ಓಟನ್ನು ಮಾಡುವವರಿಗೆ ಯಾರು ಓಟು ರಿಗ್ಗಿಂಗ್ ಮಾಡಿದ ಅವನಿಗೆ ತಕ್ಷಣ ರಾತ್ರಿ 12 ಗಂಟೆಗೆ ಬಿಡುಗಡೆ ಆಯಿತು. ನಾನು ಏಕೆ ಈ ಮಾತನ್ನು ಹೇಳುತ್ತಿದದೇನೆ ಎಂದರೆ ಯಾರಾದರೂ ಕುಮ್ಮಕ್ಕು ಕೊಡದೆ ಆ ಸ್ಥಳದಲ್ಲಿ ಇರತಕ್ಕಂಥವರಿಗೆ ಆ ಶಕ್ತಿ ಬರುವುದಿಲ್ಲ.

ಇದೊಂದೆ ಕಡೆ ಅಲ್ಲ ಎಲ್ಲಾ ಕಡೆಯೂ ಈ ರೀತಿ ನಡೆದಿದೆ, ಹುಬ್ಬಳ್ಳಿಯದು ಅದೇ ರೀತಿ ಆಯಿತು, ಕುಣಿಗಲ್‌ದು ಅದೇ ರೀತಿ ಆಯಿತು ಮತ್ತು ಸೇಡಂನಲ್ಲೂ ಅದೇ ರೀತಿ ಆಯಿತು ಇದು ತಮಗೆಲ್ಲಾ ಗೊತ್ತಿದೆ. ಇನ್ನೊಂದು ವಿಚಾರ ಮಾನ್ಯ ಅಧ್ಯಕ್ಷರೇ, ನಮ್ಮ ಶ್ರೀಮಾನ್ ಕಾಶಪ್ಪನವರ ಮತಕ್ಷೇತ್ರದಲ್ಲಿ 12ನೇ ತಾರೀಖು 1.30ಕ್ಕೆ ಪಾಪ ಅವರು ಪ್ರಚಾರಕ್ಕೆ ಹೋಗುವಾಗ ಕೆಲವು ಜನತಾದಳದ ಕಾರ್ಯಕರ್ತರು ಸಾಕಷ್ಟು ಸಂಖ್ಯೆಯಲ್ಲಿ ಹತ್ತಾರು ಜೀಪಿನಲ್ಲಿ ಬಂದು ಅವರನ್ನು ಕೆಳಗೆ ಉರುಳಿಸಿ ಸಿಕ್ಕಾಪಟ್ಟೆ ಒಡೆದರು. ಆ ಸಂಬಂಧವಾಗಿ ಅವರು ಪೊಲೀಸರಿಗೆ ದೂರು ಕೊಟ್ಟಿದ್ದರು ಇದುವರೆಗೆ ಯಾರನ್ನೂ ಬಂಧಿಸಲಿಲ್ಲ. ಇವತ್ತು ಕಣ್ಣಿಗೆ ಒಡೆದಿದ್ದಾರೆ, ಮೈಮೇಲೆ

ಒಡೆದಿದ್ದಾರೆ, ಬೇಕಾದರೆ ಅವರ ಬಟ್ಟೆಯನ್ನು ತೆಗೆದು ನೋಡಿ ಮೈತುಂಬಾ ಗಾಯ. ಈ ರೀತಿಯಾಗಿ ಒಂದು ಕಡೆ ಶಾಸಕರಿಗೆ, ಇನ್ನೊಂದು ಕಡೆ ಕಾರ್ಯಕರ್ತನಿಗೆ, ಹೀಗೆ ನಮ್ಮ ಸರ್ಕಾರ ಬಂದಿದೆ ಬೇಕಾದಷ್ಟು ಮಾಡಬಹುದು ಎನ್ನತಕ್ಕಂಥ ಫ್ರೀ ಲೈಸೆನ್ಸ್‌ನ್ನು ಎಲ್ಲರಿಗೂ ಕೊಟ್ಟು ಇವತ್ತಿನ ದಿವಸ ಈ ಕಾನೂನಿನ ವ್ಯವಸ್ಥೆಯನ್ನು ಹದಗೆಡಿಸುತ್ತಿದ್ದೀರಿ, ಇದು ನಿಜವಾಗಲೂ ನಮ್ಮೆಲ್ಲರಿಗೂ ತಲೆ ತಗ್ಗಿಸುವಂತಹ ಒಂದು ಶೋಚನೀಯ ವಿಷಯವಾಗಿದೆ. ಏಕೆ ಈ ರೀತಿಯಾಗಿ ದಿನೇ ದಿನೇ ಬೆಳೆಯುತ್ತಿದೆ ಎಂಬುದರ ಬಗ್ಗೆ ನಾವೆಲ್ಲರೂ ಕೂಡ ಚಿಂತನೆ ಮಾಡಬೇಕು. ನಾವು ಪ್ರಾರಂಭದಲ್ಲಿ ಹೇಳಿದಾಗ ನೀವು ಏನು ಮಾಡಿದಿರಿ ಎಂದರೆ, ಇದು ಹೀಗೆ ನಡೆಯುತ್ತಿದೆ ಎಲ್ಲರೂ ಕೂಡ ಮಾಡುತ್ತಿದ್ದಾರೆ, ಹಿಂದಿನಿಂದ ಬಂದಿದೆ, ಇದು ನಮ್ಮ ಕಾಲದಲ್ಲಿ ಆಗಿದೆ ಎನ್ನತಕ್ಕಂಥ ಸ್ವಲ್ಪ ಮಾರ್ಜಿ ಮಾತುಗಳನ್ನು ತಾವು ಹೇಳುತ್ತಿದ್ದೀರಿ. ನಮಗೆ ಅಧಿಕಾರಕ್ಕೆ ಬಂದಮೇಲೆ ಇದನ್ನ ಚಲಾಯಿಸಬೇಕು ಎನ್ನತಕ್ಕಂಥ ಕೆಲವು ಕಾರ್ಯಕರ್ತರು ತಮ್ಮಲ್ಲಿ ಬಂದಿದ್ದಾರೆ. ಅವರು ನಿಮ್ಮ ಪ್ರೋತ್ಸಾಹವನ್ನು ಪಡೆದುಕೊಂಡು ಈ ಅನ್ಯಾಯಗಳು, ದಬ್ಬಾಳಿಕೆಗಳು, ಅತ್ಯಾಚಾರಗಳು ಎಲ್ಲಾ ಕಡೆ ಮಾಡುತ್ತಿದ್ದಾರೆ. ಮತ್ತು ಇನ್ನೊಂದು ವಿಷಯ ತಮಗೆ ಗೊತ್ತಿದೆ, ದಿನಾ ದಿನೇ ಪೇಪರ್‌ನಲ್ಲಿ ತಾವು ನೋಡಿದ್ದೀರಿ, ಓದಿದ್ದೀರಿ, ಸರ್ಕಾರಕ್ಕೂ ಕೂಡ ಗೊತ್ತಿದೆ ಗೊತ್ತಿದ್ದರೂ ಕೂಡ ಇದರ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಅನೇಕ ಸಾರಿ ಹೇಳಿದಿರಿ ಮತ್ತು ಎಲ್ಲಿ ರೌಡಿಸಂ ನಡೆಯುತ್ತಿದೆ ಅಥವಾ ಎಲ್ಲಿ ದರೋಡೆ ನಡೆಯುತ್ತಿದೆ ಅಥವಾ ದಬ್ಬಾಳಿಕೆ ನಡೆಯುತ್ತಿದೆ ಅಂತಹ ಎಲ್ಲಾ ಕಡೆಯೂ ಕಂಡಲ್ಲಿ ಗುಂಡಿಕ್ಕಿ ಎಂದು ನಾವು ಆದೇಶವನ್ನು ಕೊಟ್ಟಿದ್ದೇವೆ ಎಂದು ಹೇಳಿದಿರಿ, ಎಲ್ಲಿ ಗುಂಡಿಕ್ಕಿದರೋ? ಎಲ್ಲಿ ಜನ ಸತ್ತರೋ? ಇನ್ನೂ ಗೊತ್ತಿಲ್ಲ. ಅದು ಆರ್ಡರ್ ಕೊಟ್ಟಮೇಲೂ ಕೂಡ ಧಾರವಾಡದಲ್ಲಿ 2-3 ಕಡೆ ಆಯಿತು, ಧಾರವಾಡದಲ್ಲಿ ಮೊದಲೂ 22ನೇ ತಾರೀಖಿನಂದು ಆದಮೇಲೆ ನನಗನ್ನಿಸಿದ ಮಟ್ಟಿಗೆ ಪುನಃ 25ನೇ ತಾರೀಖು ಆಯಿತು, ಹುಮನಾಬಾದ್ ನಲ್ಲಿ ಆಯಿತು, ಪುನಃ ಗುಲ್ಬರ್ಗಾದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಸಂಗನಗೌಡರ ಮನೆಗೆ ನುಗ್ಗಿ ಮತ್ತು ನೌಕರನಿಗೆ ಒಡೆದಿದ್ದಾರೆ. ಇನ್ನದರೂ ಕೂಡ ನಾವು ಸುಮ್ಮನೆ ಕೈಕಟ್ಟಿಕೊಂಡು ಕುಳಿತರೆ ಇದು ಹೇಗೆ ಆಗುತ್ತದೆ?

5.10 ಪಿ.ಎಂ.

ಅದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿಯಬೇಕಾಗುತ್ತದೆ.ಅಥವಾ ಆಡಳಿತವನ್ನು ಚುರುಕುಗೊಳಿಸಬೇಕಾಗುತ್ತದೆ. ಪೊಲೀಸ್ ಅಧಿಕಾರಿಗಳನ್ನು ಹೆಚ್ಚಾಗಿ ಹಾಕಿದ್ದೇವೆ. ನ್ಯಾಷನಲ್ ಹೈವೇ ಪೆಟ್ರೋಲಿಂಗ್ ಮಾಡಿಸುತ್ತದ್ದೇವೆ ಮತ್ತು ಅನೇಕ ಬಸ್ಸುಗಳಿಗೆ ಕೂಡ ಸ್ಪೆಷಲ್ ಪೊಲೀಸ್ ಕಳುಹಿಸುತ್ತಿದ್ದೇವೆ ಎಂದು ನೀವು ಹೇಳಿದರೂ ಕೂಡ ಈ ಘಟನೆಗಳು ಏಕೆ ನಡೆದಿವೆ? ಏಕೆ ಕಂಟಿನ್ಯೂ ಆಗುತ್ತಿವೆ? ಇದರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ನಾನು ಇಲ್ಲಿ ಇಷ್ಟು ಮಾತನಾಡಿ ಏನೂ ಪ್ರಯೋಜನ ಇಲ್ಲ. ಒಂದು ಸದನ ಸಮಿತಿ ರಚನೆ ಮಾಡಿ ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಏಕೆ ಈ ರೀತಿ ಘಟನೆಗಳು ನಡೆದಿವೆ? ಯಾರಿಗೋಸ್ಕರ ಈ ಜನ ಇಂತಹ ಒಂದು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕಂಡು ಈ ರೀತಿ ವರ್ತನೆ ಮಾಡುತ್ತಿದ್ದಾರೆ? ಇದಕ್ಕೆ ಕಾರಣ ಏನು? ಎನ್ನತಕ್ಕದ್ದರ ಬಗ್ಗೆ ಒಂದು ಸವಿಸ್ತಾರವಾದ ಎನ್‌ಕ್ವೈರಿ ನಡೆಯಲಿ. ಸುಮ್ಮನೆ ಈ ಜುಡಿಷಿಯಲ್ ಪ್ರೋಬ್ ಬೇಡ. ಅದರಿಂದೇನೂ ಆಗುವುದಿಲ್ಲ. ಎರಡು ವರ್ಷದ ಮೇಲೆ ಅದರ ಮಹತ್ವ ಹೊರಟು ಹೋಗುತ್ತದೆ. ಆದ್ದರಿಂದ ನೀವು ಒಂದು ಸದನ ಸಮಿತಿ ಮಾಡಿದರೆ ಒಳ್ಳೆಯದು. ಯಾವ ಯಾವ ಭಾಗದಲ್ಲಿ ಯಾವ ಯಾವ ಕಾರಣಕ್ಕೆ ಇಂತಹ ಮರ್ಡರ್ಸ್ ಆಗಲಿ ಡಕಾಯಿತಿಗಳಾಗಲೀ ನಡೆದಿದೆ? ಅದಕ್ಕೆ ಯಾರು ಕಾರಣಕ್ಕೆ ಇಂತಹ ಮರ್ಡರ್ಸ್ ಆಗಲೀ ಡಕಾಯಿತಿಗಳಾಗಲೀ

ನಡೆದಿವೆ? ಅದಕ್ಕೆ ಯಾರು ಕಾರಣಕರ್ತರು? ಅಧಿಕಾರಿಗಳು ಕಾರಣಕರ್ತರೇ? ಅಥವಾ ಅಲ್ಲಿರತಕ್ಕ ಲೋಕಲ್ ಲೀಡರ್ಸ್ ಪ್ರೋತ್ಸಾಹ ಏನಾದರೂ ಇದೆಯೇ? ಎಂಬುದನ್ನು ಸದನ ಸಮಿತಿ ಕಂಡುಹಿಡಿಯಲಿ. ಅವರು ನಮ್ಮ ಪಕ್ಷದವರು ಇರಬಹುದು. ನಿಮ್ಮ ಪಕ್ಷದವರು ಇರಬಹುದು. ಇನ್ನೊಂದು ಪಕ್ಷದವರು ಇರಬಹುದು. ಇದಕ್ಕೆ ಕಾರಣ ಏನು ಎನ್ನತಕ್ಕದ್ದನ್ನು ಸದನ ಸಮಿತಿ ರಚಿಸಲಿ. ಇದರಿಂದ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ. ಎರಡನೆಯದಾಗಿ, ಸಿಂಧ್ಯಾರವರು ಸ್ವತಃ ಸುಬ್ರಮಣ್ಯಪುರ ಪೋಲೀಸ್ ಸ್ಟೇಷನ್‌ಗೆ ಹೋದಾಗ ಜನ ಅವರಿಗೆ ಒಂದು ಪ್ರಶ್ನೆ ಕೇಳಬೇಕೆಂದು ಅವರು ಹೋದಾಗ ಅವರಿಗೆ ಒಂದು ಪ್ರಶ್ನೆ ಕೇಳಿದ್ದಾರೆ. ನೀವು ಬಂದು ಮೂರು ತಿಂಗಳು ಆಯಿತು. ಈ ಮೂರು ತಿಂಗಳಿನಲ್ಲಿ ಸಾಕಷ್ಟು ಗಲಾಟೆಗಳು ಮತ್ತು ಅನ್ಯಾಯಗಳು ಇಲ್ಲಿ ನಡೆದಿವೆ ಮತ್ತು ಪೋಲೀಸರು ನಾವು ಏನು ದೂರನ್ನು ಕೊಟ್ಟರೂ ತೆಗೆದುಕೊಳ್ಳುವುದಿಲ್ಲ. ಅವರು ಆ ಏರಿಯಾದಲ್ಲಿರುವ ದುಷ್ಕರ್ಮಿಗಳು. ಗೂಂಡಾಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ. ಅವರ ಮೇಲೆ ನೀವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನತಕ್ಕ ಮಾತನ್ನು ಗೃಹ ಮಂತ್ರಿಗಳಿಗೆ ಕೇಳಿದ್ದಾರೆ. ನಾನು ಆದಷ್ಟು ಬಿಗಿ ಬಂದೋಬಸ್ತು ಮಾಡುತ್ತೇನೆ. ಹೆಚ್ಚಿನ ಪೋಲೀಸ್ ಅಲ್ಲಿ ಹಾಕುತ್ತೇನೆ ಎನ್ನತಕ್ಕ ಮಾತನ್ನು ಮಾನ್ಯ ಗೃಹ ಮಂತ್ರಿಗಳು ಉತ್ತರ ಹಳ್ಳಿ ಏರಿಯಾದಲ್ಲಿರುವ ಸುಬ್ರಮಣ್ಯಪುರ ಪೋಲೀಸ್ ಸ್ಟೇಷನ್‌ನಲ್ಲಿ ಹೇಳಿದ್ದಾರೆ. ಅಂದರೆ ಜನರು ಕೂಡ ಇವತ್ತು ಜಾಗೃತರಾಗಿದ್ದಾರೆ.. ಸ್ವತಃ ಜನರು ಈ ಪ್ರಶ್ನೆಗಳನ್ನು ಕೇಳಿದಾಗ, ಅವರಿಗೆ ಯಾವ ಪಾರ್ಟಿ ಇಲ್ಲ, ಪಂಗಡ ಇಲ್ಲ, ಜನರಿಗೆ ಬೇಕಾಗಿರುವುದು ಶಾಂತಿ ನೆಮ್ಮದಿ ಸುಖವಾಗಿ ಇರಬೇಕು ಎನ್ನತಕ್ಕಾಂಥಾದ್ದೇ ಜನರ ಮುಖ್ಯ ಗುರಿ. ಜನರ ಸುಖ ಸಮೃದ್ಧಿ ನಾವು ಕೆಡಿಸಿದ ಮೇಲೆ ರಾಜ್ಯದಲ್ಲಿ ಸರ್ಕಾರ ಏಕೆ ಬೇಕು? ಪಕ್ಷಗಳು ಏಕೆ ಬೇಕು? ಯಾರಿಗೋಸ್ಕರ ನಾವು ಆಳುವುದು? ನಿಮಗೆ ಒಳ್ಳೆಯ ಆಡಳಿತ ಕೊಡುವುದಕ್ಕಾಗಲಿಲ್ಲ ಎಂದರೆ, ಒಳ್ಳೆಯ ಸರ್ಕಾರ ನಿಮಗೆ ಕೊಡುವುದಕ್ಕಾಗಲಿಲ್ಲ, ಜನರ ರಕ್ಷಣೆ ಮಾಡುವುದಕ್ಕಾಗಲಿಲ್ಲ, ಎಂದರೆ ನೀವು ಆ ಸ್ಥಾನದಲ್ಲಿ ಇರಬಾರದು. ನಿಮ್ಮ ಕೈಯ್ಯಲ್ಲಿ ಆಗುವುದಿಲ್ಲ ಎಂದು ಹೇಳಿ ಬಿಟ್ಟುಹೋಗಿ. ಬೇರೆಯವರು ಆಡಳಿತ ನಡೆಸುತ್ತಾರೆ. ಅಥವಾ ನಿಮ್ಮಲ್ಲೇ ಬೇರೆಯವರನ್ನು ಮಾಡಿ. ನಾನು ಈ ಮಾತನ್ನು ಬಹಳನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ. ಇದು ಒಂದು ಘಟನೆ ಸುಬ್ರಮಣ್ಯಪುರಂನಲ್ಲಿ ಆಗಿರುವುಂಥದ್ದು. ನಮ್ಮ ರಾಣಿಬೆನ್ನೂರು ಮತ್ತು ಹಾವೇರಿ ಮಧ್ಯೆ ಡ್ರೈವರ್ ಕ್ಲೀನಿರ್ ಲೂಟಿ ಮಾಡಿದ್ದಾರೆ. ಅದಕ್ಕಿಂತ ಮುಂಚೆ ಧಾರವಾಡದ ಅಳ್ನಾವರ್‌ನಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ದಿನಾಂಕ 15.2.95ರಂದು ದೋಚಿಕೊಂಡು ಹೋದರು. ಇದಾದ ಮೇಲೆ ಪುನಃ ಪೋಲೀಸರು ಸರಿಯಾಗಿ ಕ್ರಮ ತೆಗೆದುಕೊಂಡಿಲ್ಲ. ಅಥವಾ ಪೆಟ್ರೋಲಿಂಗ್ ಸರಿಯಾಗಿ ಇರಲಾರದ ಕಾರಣ ರಾಣಿ ಬೆನ್ನೂರು ಮತ್ತು ಹಾವೇರಿ ಮಧ್ಯೆ 14ನೇ ತಾರೀಖು ಲೂಟಿ ಆಯಿತು. ಅಲ್ಲಿ ಡ್ರೈವರ್ ಮತ್ತು ಕ್ಲೀನರ್‌ನ್ನು ಕಟ್ಟಿ ಅವರಲ್ಲಿರತಕ್ಕ ದುಡ್ಡನ್ನು ಲೂಟಿ ಮಾಡಿಕೊಂಡು ಹೋದರು. ಇವೆಲ್ಲಾ ನಿಮಗೆ ಗೊತ್ತಿದ್ದೂ ಕೂಡ ನೀವು ಆ ಕಡೆ ಲಕ್ಷ್ಯ ಕೊಡದೇ ಹೋದರೆ ನಾವು ಏನು ಹೇಳೋಣ. ನಿರ್ಲಕ್ಷ್ಯ ಮಾಡುತ್ತಾರೆ. ಎಂದು ಹೇಳೋಣವೇ? ಅಥವಾ ನಿಮ್ಮ ಗಮನ ಆ ಕಡೆ ಇಲ್ಲವೆಂದು ಹೇಳೋಣವೇ ಅಥವಾ ಇಂತಹದ್ದು ಎಲ್ಲಾ ಕೂಡ ಕ್ಷುಲ್ಲಕ ಎಂದು ನೀವು ತಿಳಿದುಕೊಂಡು. ಆ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ನಾವು ಭಾವಿಸಬೇಕೇ ಎನ್ನತಕ್ಕದ್ದನ್ನು ತಾವು ಸ್ಪಷ್ಟಪಡಿಸಬೇಕು. ಆಮೇಲೆ ದಿನಾಂಕ 23.2.95ರಲ್ಲಿ ವಿಜಯನಗರದಲ್ಲಿ 50 ಗೂಂಡಾಗಳು ಹೋಗಿ ಗಲಾಟೆ ಮಾಡಿ ದುಖಾನುಗಳನ್ನು ಲೂಟಿ ಮಾಡಿ. ಅನೇಕ ಮನೆಗಳಿಂದ ಹೊಕ್ಕು ಅಲ್ಲೂ ಕೂಡ ಲೂಟಿ ಮಾಡಿಕೊಂಡು ಹೋದರು. ಎಲ್ಲಾ ಜನರು ಹೇಳಿದ ಮೇಲೆ ಕಂಪ್ಲೇಟ್ ಕೊಟ್ಟ ಮೇಲೆ ಅಲ್ಲಿನ ಸಬ್‌ಇನ್ಸ್‌ಪೆಕ್ಟರ್‌ರನ್ನು ಮರು ದಿವಸ ಸಸ್ಪೆಂಡ್ ಮಾಡಿದರು. ಈ ರೀತಿ ಅನೇಕ ಗಲಾಟೆಗಳು ಬೇರೆ ಕಡೆ ಆಗಿವೆ. ಪೋಲೀಸ್ ಕಮೀಷನರ್ ರವರು ಕೂಡ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಾವು ಸುಮಾರು ಇನ್ನೂರಕ್ಕಿಂತಲೂ

ಹೆಚ್ಚು ಗೂಂಡಾಗಳನ್ನು ಅರೆಸ್ಟ್ ಮಾಡಿದ್ದೇವೆ. ಈಗ ಕಾನೂನು ವ್ಯವಸ್ಥೆ ಚೆನ್ನಾಗಿದೆ. ಎಲ್ಲಾ ಕಡೆ ಬಿಗಿ ಬಂದೋಬಸ್ತು ಇದೆ. ಎಲ್ಲೂ ಕೂಡ ಇಂತಹ ಗಲಾಟೆ ಮಾಡಲಿಕ್ಕೆ ಬಿಡುವುದಿಲ್ಲ ಎಂಬುದನ್ನು ಪೋಲೀಸ್ ಕಮೀಷನರ್ ಹೇಳಿದ್ದಾರೆ. ಆದರೆ ಇದಾದ ಮೇಲೆ ಪುನಃ ವಿಜಯನಗರದಲ್ಲಿ 50 ಜನ ರೌಡಿಗಳು ಕಾನೂನು ತಮ್ಮ ಕೈಯಲ್ಲಿ ತೆಗೆದುಕೊಂಡು ಎಲ್ಲಾ ದುಖಾನುಗಳನ್ನು ಚಚ್ಚಿ, ಮನೆಗಳು ಒಡೆದು ಅನೇಕ ರೀತಿಯಲ್ಲಿ ಅಲ್ಲಿರತಕ್ಕ ಜನರಿಗೆ ಹಿಂಸೆ ಕೊಟ್ಟರು. ಇದೆಲ್ಲಾ ಕೂಡ ಎಲ್ಲಿ ನಡೆಯುತ್ತಿದೆ? ಬೆಂಗಳೂರಿನಲ್ಲಿ ಎಲ್ಲಿ ಮುಖ್ಯಮಂತ್ರಿಗಳು ಇರುತ್ತಾರೋ ಎಲ್ಲಿ ಹೋಮ್ ಮಿನಿಸ್ಟರ್ ಇರುತ್ತಾರೋ ಎಲ್ಲಿ ಡಿ.ಜಿ.ಪಿ. ಇರುತ್ತಾರೋ ಎಲ್ಲಿ ಹೋಮ್ ಸೆಕ್ರೆಟರಿ ಇರುತ್ತಾರೋ ಇವರೆಲ್ಲರೂ ಇರತಕ್ಕ ಬೆಂಗಳೂರಿನಲ್ಲೇ ಇಂತಹ ಘಟನೆಗಳು ನಡೆದಿವೆ ಇಲ್ಲೇ ಇಂತಹ ಘಟನೆಗಳು ನಡೆದ ಮೇಲೆ ಇನ್ನು ಬೇರೆ ಕಡೆ ಇಂಟೀರಿಯರ್ ಪ್ಲೇಸಸ್‌ನಲ್ಲಿ, ಎಲ್ಲಿ ಇನ್ನೂ ಪೋಲೀಸ್ ವ್ಯವಸ್ಥೆ ಇಲ್ಲ, ಎಲ್ಲಿ ಇನ್ನೂ ಪೋಲೀಸ್ ಠಾಣೆಗಳಲ್ಲಿ ಎಲ್ಲಿ ಇನ್ನೂ ಪೋಲೀಸರ ಕಿಮ್ಮತ್ತು ಇಲ್ಲ ಅಂತಹ ಕಡೆ ಏನು ನಡೆಯುತ್ತದೆ ಎನ್ನತಕ್ಕಂಥದ್ದನ್ನು ಹೇಗೆ ಹೇಳುವುದು.

ಶ್ರೀ ಎಂ. ನಾರಾಯಣ ಸ್ವಾಮಿ : ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೇ, ಅವರು ಸಬ್‌ಮಿಷನ್ ಮಾಡುತ್ತಿದ್ದಾರೆ. ಅದು ಅರ್‌ಗ್ಯೂಮೆಂಟ್ ಟೈಪ್ ಆಗುತ್ತದೆ. ಸೂಕ್ಷ್ಮವಾಗಿ ಹೇಳಿ, ತಮ್ಮ ಮನವೊಲಿಸತಕ್ಕ ಕಾರ್ಯವನ್ನು ಮಾನ್ಯ ಖರ್ಗೆಯವರು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಬರೇ ಸರ್ಕಾರದ ಬಗ್ಗೇನೇ ಮಾತನಾಡುವುದು ಸರಿಯಲ್ಲವೆಂದು ನನ್ನ ಭಾವನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರದ ಬಗ್ಗೆ ಮಾತನಾಡಲಿಕ್ಕೇನೇ ನಾನು ಬಂದಿದ್ದೇನೆ. ನಿಮ್ಮ ಸರ್ಕಾರ ಸರಿಯಲ್ಲವೆಂದು ಹೇಳಲಿಕ್ಕೇ ನಾನು ಬಂದಿದ್ದುದು.

ಶ್ರೀ ಎಂ. ನಾರಾಯಣ ಸ್ವಾಮಿ : ನೀವು ಅದನ್ನು ಚರ್ಚೆ ಮಾಡಿ ಬೇಡ ಎಂದು ಹೇಳುವುದಿಲ್ಲ. ಆದರೆ ಅದು ಸಬ್‌ಮಿಷನ್ ರೀತಿ ಬೇಡ ಎಂದು ಹೇಳಿದೆ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾಗಿ ಬೆಂಗಳೂರು ನಗರದಲ್ಲಿ ಇಂತಹ ಘಟನೆಗಳು ನಡೆದಿದೆ. ಬೆಂಗಳೂರು ಸಿಟಿ ತಮಗೆ ಗೊತ್ತಿದೆ. ಇದೊಂದು ಕಾಸ್ಮೋಪಾಲಿಟನ್ ಸಿಟಿ. ಬೆಂಗಳೂರಿನಲ್ಲಿ ಶಾಂತಿ ಮತ್ತು ಕಾನೂನು ವ್ಯವಸ್ಥೆ ಸರಿ ಇದೆ ಎನ್ನತಕ್ಕ ಅಭಿಪ್ರಾಯ ಇಡೀ ನಮ್ಮ ರಾಜ್ಯದಲ್ಲಿ ದೇಶದಲ್ಲಿ ಹೊರಗಿನ ರಾಜ್ಯಗಳಲ್ಲಿ, ಹೊರ ದೇಶದಲ್ಲೂ ಕೂಡ ಬೆಂಗಳೂರು ಬಗ್ಗೆ ಒಂದು ವಿಶೇಷವಾದ ಗೌರವ ಮತ್ತು ವಿಶಿಷ್ಟ ಸ್ಥಾನ ಇದೆ. ಆದರೆ ಇವತ್ತಿನ ದಿವಸ ದಿನೇ ದಿನೇ ಈ ರೀತಿಯಾಗಿ ಕಾನೂನು ವ್ಯವಸ್ಥೆ ಹದಗೆಟ್ಟರೆ ರೌಡಿಗಳ ಕೈಯ್ಯಲ್ಲಿ ಕಾನೂನು ಕೊಟ್ಟರೆ, ಅವರೇ ರಾಜ್ಯಗಳನ್ನು ಕಾನೂನನ್ನು ನೋಡಿಕೊಳ್ಳುವುದಾದರೆ ನಾವು ಏಕೆ ಇರಬೇಕು? ಅದಕ್ಕಾಗಿ ಇದರ ಬಗ್ಗೆ ನಾನು ಈಗಾಗಲೇ ಹೇಳಿದಂತೆ ಸವಿಸ್ತಾರವಾದ ಎನ್‌ಕ್ವೈರಿ ಮಾಡಿಸಬೇಕಾದರೆ, ಒಂದು ಸದನದ ಸಮತಿಯನ್ನು ರಚನೆ ಮಾಡಬೇಕಾದ ಅವಶ್ಯಕತೆ ಇದೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಪ್ರಾಮುಖ್ಯವಾದ ವಿಷಯ ಏನೆಂದರೆ ಬಾರ್ಡರ್ ಏರಿಯಾ ಆದ ಹುಮ್ನಾಬಾದ್‌ನಲ್ಲಿ ಏನಾಗಿದೆ ಎಂಬ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಅನೇಕ ಸಾರಿ ಏನಾಗುತ್ತದೆ ಎಂದರೆ, ಮಹಾರಾಷ್ಟ್ರ ಮತ್ತು ಆಂಧ್ರ ಗಡಿ ಭಾಗದಲ್ಲಿರತಕ್ಕ ಕೆಲವು ಡಕಾಯಿತರುಗಳು ಯಾವಾಗ ಅಮಾವಾಸ್ಯೆ ಇರುತ್ತದೋ ಅಥವಾ ಜನಕ್ಕೆ ಹಬ್ಬಗಳು ಇರುತ್ತವೋ ಎಲ್ಲಿ ಪೋಲೀಸರು ಸರಿಯಾದ ರೀತಿಯಿಂದ ಗುಸ್ತು ಮಾಡುವುದಿಲ್ಲವೋ ಅಂತಹ ಸಮಯದಲ್ಲಿ ಬಂದು ಸಾಕಷ್ಟು ಲೂಟಿ ಮಾಡತಕ್ಕದ್ದು ಕೂಡ ಇದೆ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಇವತ್ತೇ ಅಲ್ಲ, ಈ

ರೀತಿ ನಡೆಯುತ್ತಿರುವುದು. ಹೊರಗಡೆಯಿಂದ ಬಂದು ಈ ರೀತಿ ಮಾಡುತ್ತಿದ್ದಾರೆ ಎಂದು ಗೊತ್ತಿದ್ದೂ ಕೂಡ ಏಕೆ ನೀವು ಅವರಿಗೆ ಈ ರೀತಿ ಅವಕಾಶ ಮಾಡಿಕೊಟ್ಟಿದ್ದೀರಿ. ನೀವು ಏಕೆ ಮುನ್ನೆಚ್ಚರಿಕೆ ಕ್ರಮ ವಹಿಸಲಿಲ್ಲ ಎನ್ನತಕ್ಕ ಪ್ರಶ್ನೆ ಇವತ್ತು ನಮ್ಮ ಮುಂದೆ ಇದೆ.

ಇನ್ನೊಂದು ವಿಷಾದಕರವಾದ ಸಂಗತಿ ಏನೆಂದರೆ ಒಂದು ಕಡೆ ರೌಡಿಗಳನ್ನು ಮಟ್ಟ ಹಾಕುತ್ತಿದ್ದೇವೆಂದು ಹೇಳಿದರೆ, ಇನ್ನೊಂದು ಕಡೆ ದಿನಾಂಕ 23.2.1995ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ ಸ್ತ್ರೀ ವೇಷ ಧರಿಸಿಕೊಂಡು ಲಾರಿ ದರೋಡೆ ಮಾಡಿದ್ದಾರೆ. ಯಾವ ಯಾವ ರೀತಿಯಲ್ಲಿ ಜನರಿಗೆ ತೊಂದರೆ ಕೊಡುತ್ತಿದ್ದಾರೆ ಅದನ್ನು ಇವೊತ್ತಿನ ದಿವಸ ನಾವು ನೋಡುತ್ತಿದ್ದೇವೆ. ಮತ್ತು ಎಲ್ಲಾ ರೀತಿಯಿಂದ ಹೀಗೆ ಕಿರುಕುಳ ಕೊಡುತ್ತಿರುವಾಗ ನಾವು ಕೈ ಕಟ್ಟಿಕೊಂಡು ಕುಳಿತರೆ ಖಂಡಿತವಾಗಿ ಇದರಿಂದ ಈ ರಾಜ್ಯದ ಜನತೆಗೆ ನ್ಯಾಯುವನ್ನು ಕೊಡಿಸುವುದಕ್ಕೆ ಆಗುವುದಿಲ್ಲ. ಈಗಾಗಲೇ ಜನ ಇವರ ಆಡಳಿತದ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಜಿಲ್ಲಾ ಪರಿಷತ್‌ನಲ್ಲಿ ಗೆದ್ದಿದ್ದೇವೆ, ಮಂಡಲ್ ಪಂಚಾಯತ್‌ನಲ್ಲಿ ಗೆದ್ದಿದ್ದೇವೆ, ಲೂಟಿಯಾಗುತ್ತಿದ್ದರೂ, ದರೋಡೆ ನಡೆಯುತ್ತಿದ್ದರೂ ಜನ ನಮ್ಮನ್ನು ಗೆಲ್ಲಿಸಿದ್ದಾರೆಂದು ಅವರು ಹೇಳಬಹುದು. ಆದರೆ ಗ್ರಾಂಡ್ ರಿಯಾಲಿಟಿ ಏನಾಗಿದೆ ಎಂದರೆ ದರೋಡೆಗಳು ನಡೆದಿವೆ. ಖೂನಿಗಳು ನಡೆಯುತ್ತಿವೆ. ಮತ್ತು ಎಲೆಕ್ಷನ್‌ನಲ್ಲಿ ಎಷ್ಟರ ಮಟ್ಟಿಗೆ ತಮ್ಮ ಮಜಲ್ ಪವರ್ ಉಪಯೋಗ ಮಾಡಿಕೊಂಡು ಅನೇಕ ಬೂಥ್‌ಗಳನ್ನು ಕ್ಯಾಪ್ಚರ್ ಮಾಡಿರತಕ್ಕದ್ದು ಸ್ಪಷ್ಟವಾಗಿ ಗೊತ್ತಾಗಿದೆ. ಮತ್ತು ಕಾನೂನಿನ ವ್ಯವಸ್ಥೆ ಸರಿ ಇಲ್ಲ, ಕುಸಿದು ಬಿದ್ದಿದೆ ಎನ್ನತಕ್ಕಂಥದ್ದು ಇದರಿಂದ ಇಂಗಿತವಾಗಿರುತ್ತದೆ. ಆದಕ್ಕಾಗಿ ನಾನು ಕಳಕಳಿಯಿಂದ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ ಈ ಸದನದ ಒಂದು ಸಮಿತಿಯನ್ನು ಮಾಡಬೇಕು. ಏತಕ್ಕೆಂದರೆ ಕೆಲವೊಂದು ಮಾಹಿತಿಗಳನ್ನು ಸದನದ ಸಮಿತಿಯ ಮುಂದೆ ಸವಿಸ್ತಾರವಾಗಿ ಕೊಡುವುದಕ್ಕಾಗುತ್ತದೆ. ಇನ್ನು ಅನೇಕ ಘಟನೆಗಳು ಚಿಂತಾಮಣಿಯಲ್ಲಿ, ಕೋಲಾರದಲ್ಲಿ ಮಾಲೂರಿನಲ್ಲಿ ಆಗಿದ್ದು, ಇನ್ನೂ ಅನೇಕ ಕಡೆ ಇಂತಹ ಘಟನೆಗಳು ನಡೆದಿದೆ. ಆ ಘಟನೆಗಳ ಬಗ್ಗೆ ಕೂಡ ಸವಿಸ್ತಾರವಾದ ಮಾಹಿತಿಯನ್ನು ಕೊಡಬೇಕಾದರೆ ಒಂದು ಸದನದ ಸಮಿತಿಯನ್ನು ತಾವು ಮಾಡಬೇಕು. ಆ ಸದನದ ಸಮಿತಿಯ ಮುಂದೆ ನಾವು ಕೊಡುತ್ತೇವೆ. ಅದಕ್ಕಾಗಿ ದಯವಿಟ್ಟು ತಾವು ಇದನ್ನು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಸಭಾಪತಿಗಳೇ, ನಮ್ಮ ನಾಯಕರಾದಂತಹ ಮಾನ್ಯ ಶ್ರೀ ಮಲ್ಲಿಕಾರ್ಜುನಜೀರವರು ಈ ನಿಲುವಳಿ ಸೂಚನೆಯುನ್ನು ಏತಕ್ಕೆ ಸ್ವೀಕಾರ ಮಾಡಬೇಕು ಎಂಬ ಬಗ್ಗೆ ಪ್ರಸ್ತಾವನೆಯನ್ನು ಮಾಡಿದ್ದಾರೆ. ಇದು ಚರ್ಚೆಗೆ ಯೋಗ್ಯವಾದಂತಹ ವಿಚಾರ ಏತಕ್ಕೆಂದರೆ ನಿನ್ನೆ ಸನ್ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಮತ್ತೊಂದು ಕಡೆ ದೇಶದ ಬಂಡವಾಳದಾರರಿಂದ ಹಾಗೂ ವಿದೇಶದ ಬಂಡವಾಳದಾರರಿಂದ ಸಾಕಷ್ಟು ಬಂಡವಾಳವನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಸನ್ಮಾಯ ಮುಖ್ಯಮಂತ್ರಿಗಳು ಕೂಡ ದಾವೂಸ್‌ಗೆ ಹೋಗಿ ನಮ್ಮ ಕರ್ನಾಟಕ ರಾಜ್ಯದ ಒಂದು ಕೈಗಾರಿಕೆ ಪರಿಸರದ ವಿಚಾರದಲ್ಲಿ ವಿಶೇಷವಾಗಿ ಹೊರ ದೇಶದ ಬಂಡವಾಳವನ್ನು ಆಕರ್ಷಣೆ ಮಾಡಲಿಕ್ಕೆ ಸಾಕಷ್ಟು ಪ್ರಯತ್ನಗಳನ್ನು ಕೂಡ ಮಾಡಿದ್ದಾರೆ. ಮತ್ತು ಉಪಮುಖ್ಯಮಂತ್ರಿಗಳು ಕೂಡ ಸಿಂಗಾಪೂರ್‌ಗೆ ಹೋಗಿ ಅಲ್ಲಿಯ ನೆರೆಹೊರೆಯ ದೇಶಗಳಿಗೆ ಹೋಗಿ ಸಾಕಷ್ಟು ಬಂಡವಾಳ ಕೈಗಾರಿಕೆಯಲ್ಲಿ, ಪ್ರವಾಸೋದ್ಯಮದಲ್ಲಿ, ವಿದ್ಯುತ್ ಕ್ಷೇತ್ರದಲ್ಲಿ ಆಗಬೇಕೆಂದು ಹೇಳಿ ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಕೈಗಾರಿಕೆಗಳ ಬೆಳವಣಿಗೆ ಪ್ರವಾಸೋದ್ಯಮದ ಬೆಳವಣಿಗೆ ವಿದ್ಯುಚ್ಛಕ್ತಿ ಬೆಳವಣಿಗೆ ಇವೆಲ್ಲಾ ಆಗಬೇಕಾದರೆ, ಅದಕ್ಕೆ ಮುಖ್ಯವಾದ ತಳಹದಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವುದು ಇರಬೇಕೆಂದರೆ ಅದು ಕಾನೂನಿನ ಸುವ್ಯವಸ್ಥೆ. ಇಡೀ ದೇಶದಲ್ಲೇ ಕಾನೂನಿನ ಸುವ್ಯವಸ್ಥೆ ಅದು ಇಂಡಸ್ಟ್ರೀಯಲ್ ಪೀಸ್ ಆಗಿರಬಹುದು.

ಅಥವಾ ಇನ್ನಿತರ ವ್ಯವಸ್ಥೆ ಇರಬಹುದು ಅದು ಸುಭದ್ರತೆ ಕರ್ನಾಟಕದಲ್ಲಿ ಇದೆ ಎಂಬ ಒಂದು ಸ್ಥಿರವಾದ ಭಾವನೆ, ವಿದೇಶಿ ಬಂಡವಾಳಗಾರರಲ್ಲಿ ನಮ್ಮ ದೇಶದ ಬಂಡವಾಳಗಾರರಲ್ಲಿ ಮೂಲಭೂತವಾಗಿ ನೆಲೆಯೂರಿರುವ ಕಾರಣದಿಂದಲೇ ಇವೊತ್ತು ಉತ್ತಮವಾದಂಥ ಒಂದು ಪರಿಸರ, ಉತ್ತಮವಾದಂಥ ಒಂದು ವಾತಾವರಣ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣ ಆಗಬೇಕಾಗಿದೆ. ಒಂದು ಕಡೆ ಮಾನ್ಯ ಉಪಮುಖ್ಯಮಂತ್ರಿಗಳು ಸಿಂಗಾಪೂರದಲ್ಲಿ ಹೇಳಿದ ಹೇಳಿಕೆ ಬಿ.ಬಿ.ಸಿ. ನಲ್ಲಿ ಬಂದಿದೆ.

ಬಹಳ ಸಂತೋಷ ಇವೊತ್ತು ಈ ರಾಷ್ಟ್ರದ ಕೈಗಾರಿಕೆಯ ಉದಾರೀಕರಣವನ್ನು ನಾವು ಸ್ವೀಕಾರ ಮಾಡಿದ್ದೇವೆ. ಮತ್ತು ಹಿಂದೆ ಏನು ಒಂದು ಆದ್ಯತೆಯಿಂದ ವಿದೇಶಿ ಬಂಡವಾಳ ಇಲ್ಲಿ ಹಾಕಲಿಕ್ಕೆ ಏನು ಒಂದು ಪರಿಸ್ಥಿತಿ ಇತ್ತೋ, ಆ ಸ್ಟೆಬಿಲಿಟಿ ನಾವು ಇನ್ನೂ ಕೂಡ ಕಂಟಿನ್ಯೂ ಮಾಡಿದ್ದೇವೆ. ಎಂಬ ಹೇಳಿಕೆ ಕೊಟ್ಟಿದ್ದೀರಿ. ಅದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಕೈಗೊಂಡಿರುವ ಎಲ್ಲಾ ಧೋರಣೆಗಳಿಗೆ ನಮ್ಮ ಸ್ವಾಗತ ಇದೆ. ಆದರೆ ಇವೊತ್ತು ನೆಲ ಕುಸಿಯುತ್ತಿದೆ. ಯಾವ ಸ್ಥಿರವಾದ, ಸುಭದ್ರವಾದ ಕಾನೂನಿನ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇದೆ ಅದು ಶಿಥಿಲವಾದಾಗ ಏನು ಪ್ರಯತ್ನ ತಾವು ಹೋಗಿ ಮಾಡಿದರೂ ಕೂಡ ಅಥವಾ ಮಾನ್ಯ ಮುಖ್ಯಮಂತ್ರಿಗಳು ಮಾಡಿದರೂ ಕೂಡ ಅದು ಬಹುಶಃ ಶಾಶ್ವತವಾಗಿ ಇಲ್ಲಿ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಕಾನೂನಿನ ವ್ಯವಸ್ಥೆ ಇದ್ದರೆ ಮಾತ್ರ ಇವೊತ್ತು ರಾಜ್ಯಪಾಲರ ಭಾಷಣದಲ್ಲಿ ಏನು ಆಶ್ರಯಗಳನ್ನು ವ್ಯಕ್ತ ಪಡಿಸಿದ್ದೀರಿ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲು ತಾವು ಅಪೇಕ್ಷೆ ಪಟ್ಟಿದ್ದೀರಿ ಅದು ಯಾವುದೂ ಕೂಡ ನಡೆಯುವುದಿಲ್ಲ.ಆದುದರಿಂದ ಇದರ ಒಂದು ಆದ್ಯತೆಯನ್ನು ಮನಗಂಡು ನಾವು ಇವೊತ್ತು ನಮ್ಮ ಪಕ್ಷದಲ್ಲಿ ನಿರ್ಣಯ ಮಾಡಿಕೊಂಡು ನಮ್ಮ ನಾಯಕರು ತಂದಂಥ ಈ ಕಾನೂನಿನ ವ್ಯವಸ್ಥೆಯ ಬಗ್ಗೆ ನಿಲುವಳಿ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಇದು ಒಂದು ಕಾರಣ ಸಾಕು. ತಾವು ಯಾವ ರೀತಿಯಲ್ಲಿ ಈ ವಿಚಾರವನ್ನು ಸಂಪೂರ್ಣವಾಗಿ ಸಮಗ್ರವಾಗಿ ಚರ್ಚೆಗೆ ಅವಕಾಶ ಕೊಟ್ಟಾಗ ಮಾತ್ರ ಅದು ಚರ್ಚೆಯಾಗಿ, ಈ ಬಗ್ಗೆ ಒಂದು ನಿರ್ಣಯ ಹೊರಬರಲು ಸಾಧ್ಯವಾಗುತ್ತದೆ. ಇದರಿಂದ ರಾಜ್ಯದ ಜನರಿಗೆ ಈ ರಾಷ್ಟ್ರದ ಜನರಿಗೆ ಇವೊತ್ತು ಈ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ಶಾಂತಿ ನೆಮ್ಮದಿ, ಒಂದು ಒಳ್ಳೆಯ ವಾತಾವರಣ ಉಂಟು ಮಾಡಿ. ಕಾನೂನಿನ ಸುವ್ಯವಸ್ಥೆಯ ವಾತಾವರಣ ಇದರ ಒಂದು ವಿಶ್ವಾಸ ಎಲ್ಲರಲ್ಲಿ ಕೂಡ ಹುಟ್ಟಿದಾಗ ಮಾತ್ರ ನೀವು ಹಾಕಿದಂತಹ ಯೋಜನೆಗಳು ಫಲಕಾರಿಯಾಗುತ್ತವೆ. ಆ ಯೋಜನೆಗಳನ್ನು ನೀವು ಮುಂದುವರೆಸಿಕೊಂಡು ಹೋಗಬಹುದು. ಜಿಲ್ಲಾಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳಲ್ಲಿ ತಮ್ಮ ಪಕ್ಷ ಗೆದ್ದಿದೆ. ನೀವು ರಾಜಕೀಯವಾಗಿ ಏನು ಗಳಿಸಿದ್ದೀರಿ ಇದನ್ನು ಉಳಿಸಿಕೊಳ್ಳಬೇಕಾದರೆ, ಕಾನೂನಿನ ಸುವ್ಯವಸ್ಥೆಯ ಬಗ್ಗೆ ತಾವು ಆದ್ಯತೆಯ ಗಮನವನ್ನು ಕೊಡದಿದ್ದರೆ,

ಇದೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಯಾವುದೂ ಉಳಿಯುವುದಿಲ್ಲ. ಎಷ್ಟೇ ಬಂಡವಾಳ ತಾವು ಹೊರದೇಶದಿಂದ ತನ್ನಿ, ನಮ್ಮ ಯೋಜನೆಗಳಿಂದ ತನ್ನಿ, ಕೇಂದ್ರ ಸರ್ಕಾರದಿಂದ ತನ್ನಿ ಯಾವುದೂ ಕೂಡ ಸಾರ್ಥಕ ಆಗುವುದಿಲ್ಲ, ಈ ಒಂದು ಕಾರಣದಿಂದ ಇವೊತ್ತು ಇದನ್ನು ಅಲೋ ಮಾಡಬೇಕು. ಇದರ ಬಗ್ಗೆ ದೀರ್ಘವಾದ ಚರ್ಚೆ ಕೂಡ ಆಗಬೇಕಾಗಿದೆ. ಈ ವಿಶ್ವಾಸ ಈ ಸದನದ ಮೂಲಕ ಹೋಗಬೇಕು. ಮುಖ್ಯವಾಗಿ ರಾಜಕೀಯ ಸುಭದ್ರತೆ ಇರಬಹುದು, ಆರ್ಥಿಕ ಸುಭದ್ರತೆ ಇರಬಹುದು. ಕೈಗಾರಿಕೆ ಸುಭದ್ರತೆ ಇರಬಹುದು ಇದೆಲ್ಲಾ ನೆಲ ಕೊಚ್ಚಿಹೋಗದೇ ಇರಲು ಯಾವುದು ತಳಹದಿ ಎಂದರೆ ಕಾನೂನಿ ಸುವ್ಯವಸ್ಥೆ. ಇತರೆ ವಿವರಗಳನ್ನು ಮಾನ್ಯ ಖರ್ಗೆಜಿಯವರು ಸದನದ ಮುಂದ ಇಟ್ಟಿದ್ದಾರೆ.

ತಾವು ಒಂದು ಹೇಳಬಹುದು ಏನೆಂದರೆ ನಾವು ಒಂದು ನೂರು ದಿವಸ ಆಯಿತು. ಕೆಲವು ವಾರ ಆಯಿತು, ಕೆಳವು ತಿಂಗಳು ಆಯಿತು ನಾವು ಇನ್ನೂ ಕೂಡಸುಧಾರಿಸಿಕೊಂಡು ನಮ್ಮ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ ಎಂಬ ನಿಮ್ಮ ಮಾತನ್ನು ನಾವು ಒಪ್ಪುತ್ತೇವೆ. ಕೆಲವು ಸಾರಿ ಈ ಟೀಕೆಯನ್ನು ಮಾಡತಕ್ಕಂಥ ರೀತಿಯಲ್ಲಿ ಕೂಡ ಇತಿ ಮಿತಿ ಇದೆ ಎಂಬುದು ನಮಗೆ ತಿಳಿದಿದೆ ಆದರೆ ಒಂದು ಮಾತನ್ನು ನೀವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಆದೇನೆಂದರೆ ಯಾವ ರೀತಿಯಲ್ಲಿ ಕೈಗಾರಿಕೆ ಒಂದು ಸುಭದ್ರತೆ ಸ್ಟೆಬಿಲಿಟಿ ಏನು ಇತ್ತು ಆ ಸ್ಟೆಬಿಲಿಟಿಯನ್ನು ಕಂಟಿನ್ಯೂ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದೇ ರೀತಿಯಲ್ಲಿ ಕಾನೂನಿನ ಸುವ್ಯವಸ್ಥೆಯನ್ನು ಇವೊತ್ತು ಶಿಥಿಲಗೊಳಿಸದೆ, ಅಭದ್ರಗೊಳಿಸದೆ, ಆ ಸುಭದ್ರತೆಯನ್ನು ಮುಂದುವರೆಸಿಕೊಂಡು ಹೋದಬೇಕು ಎಂಬ ಒಂದು ಸಂದೇಹ ಮನವರಿಕೆ ಕೂಡ ತಮ್ಮಲ್ಲಿ ಆಗದೇ ಇದ್ದಂಥ ಕೊರತೆಯನ್ನು ಮಾತ್ರ ನಾವು ಇವೊತ್ತು ಎತ್ತಿ ತೋರಿಸಬೇಕಾಗುತ್ತದೆ. ಅನೇಕ ಸಚಿವರು ಅನುಭವಸ್ಥರು ಇದ್ದು. ಸಾಕಷ್ಟು ಕೆಲಸ ಮಾಡಿದ್ದಾರೆ, ಅನುಭವ ಇದೆ. ಪಾರ್ಲಿಮೆಂಟ್‌ನಲ್ಲಿ ಕೆಲಸ ಮಾಡಿದ್ದಾರೆ ಇಲ್ಲಿ ಕೆಲಸ ಮಾಡಿದ್ದಾರೆ , ಬಹುಶಃ ನಿಮ್ಮಲ್ಲಿ ಅನುಭವಕ್ಕೆ ಕೊರತೆ ಇಲ್ಲ.

ಅನುಭವಕ್ಕೆ ಕೊರತೆ ಇಲ್ಲದೇ ಇದ್ದಾಗ ಅಧಿಕಾರದ ಚುಕ್ಕಾಣಿಯನ್ನು ಹಿಡಿದಂಥ ಸನ್ಮಾನ್ಯ ಮುಖ್ಯ ಮಂತ್ರಿಗಳಾಗಲೀ ಅಥವಾ ಉಪ ಮುಖ್ಯ ಮಂತ್ರಿಗಳಾಗಲೀ ಅಥವಾ ಅನೇಕ ಹಿರಿಯ ಸಚಿವರುಗಳು ತಾವು ಎದುರುಗಡೆ ಕುರ್ಚಿಯಲ್ಲಿ ಏನು ಕುಳಿತಿದ್ದೀರಿ, ಇದರ ಬಗ್ಗೆ ತಾವು ಗಮನ ಕೊಟ್ಟಿಲ್ಲ. ಇದರ ಬಗ್ಗೆ ಎಲ್ಲಿ ಎಡವಿದ್ದೀರಿ ಎಂಬುದನ್ನು ನೋಡುತ್ತಿಲ್ಲ. ಲಾ ಆಂಡ್ ಆರ್ಡರ್ ಸಿಚ್ಯುಯೇಷನ್ ಬಗ್ಗೆ ತಾವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು.

It has a spiralling effect, cascading effect.

ಒಂದು ಹೆಜ್ಜೆ ತಾವು ತಪ್ಪಿದರೆ, ಅದು ಪಾತಾಳಕ್ಕೆ ಬೀಳುವುದು. ಇದರಲ್ಲಿ ಅಡೆ ತಡೆ ಯಾವುದು ಉಳಿಯುವುದಿಲ್ಲ. ಅದು ಬಹಳ ಸ್ಲೀಪ್ ಆಗಿ ಹೋಗುತ್ತದೆ ಎಂಬುದನ್ನು ತಾವು ಮರೆಯಬಾರದು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಸದಸ್ಯರಾದ ಶ್ರೀ ಮೊಯಿಲಿಯವರ ಮಾತನ್ನು ಸಂಪೂರ್ಣ ಒಪ್ಪುತ್ತೇನೆ. ಆದರೆ ಅವರು ಹೇಳುವಾಗ ಸ್ವಲ್ಪ ವಿಚಾರಪಕ್ಷ ಅಂದರೆ ವಿಚಾರಕ್ಕೋಸ್ಕರ ನಾನು ಹೇಳುವುದು. ಕಾನೂನಿನ ವ್ಯವಸ್ಥೆ ಚೆನ್ನಾಗಿದೆ ಎಂದೂ ಯಾರೂ ಬಂಡವಾಳ ಹಾಕುವುದಿಲ್ಲ. ಚೆನ್ನಾಗಿ ಬಂಡವಾಳ ಹಾಕಿ ಜನ ಸಮೃದ್ಧರಾದಾಗ ಮಾತ್ರ ಕಾನೂನಿನ ವ್ಯವಸ್ಥೆ ತಾನಾಗಿ ಸರಿಹೋಗುತ್ತದೆ. This is the experience of the world ಎಲ್ಲಿ ಅಭದ್ರತೆ ಇರುತ್ತದೆ ಎಂದರೆ, ಬಡತನ, ನಿರುದ್ಯೋಗ, ವಾಸ್ತವಿಕವಾಗಿ ಕರ್ನಾಟಕದಲ್ಲಿ ಇರತಕ್ಕಂಥ ಬಹಳ ಮಟ್ಟಿನ ವಯೊಲೆನ್ಸ್‌ಗೆ ನಮ್ಮ ರಾಜ್ಯದಲ್ಲಿ ಇರತಕ್ಕಂಥ ಜನ ಕಾರಣರಲ್ಲ. ಎಲ್.ಟಿ.ಟಿ.ಇ. ನಿಂದ ಬಂದವರು, ಪೀಪಲ್ಸ್‌ವಾರ್ ಗ್ರೂಪ್‌ನಿಂದ ಬಂದವರು. ಆ ಕಡೆ ಮಾನ್ಯ ಖರ್ಗೆಯವರು ಹೇಳುತ್ತಿದ್ದುದ್ದನ್ನು ನಾನು ಕೇಳುತ್ತಿದ್ದೆ. ಬಾರ್ಡರ್ ಏರಿಯಾದಿಂದ, ಮಹಾರಾಷ್ಟ್ರದಿಂದ ಬಂದಂಥವರಿಂದ ಎಂದು. ಆ ಜನಗಳಿಂದ ವಯೊಲೆನ್ಸ್ ನಮ್ಮ ರಾಜ್ಯದಲ್ಲಿ ಆಗುತ್ತಿದೆಯೇ ಹೊರತು ನಮ್ಮ ರಾಜ್ಯದಲ್ಲಿ ಜನರನ್ನು ಕೊಂದು ವಿಚಿತ್ರವಾಗಿ ಹಿಂಸೆ ಮಾಡುವ ಜನ ಕರ್ನಾಟಕದಲ್ಲಿ ಇಲ್ಲವೇ ಇಲ್ಲ. most of those violence, may be during your time or our time.

ಇದರೊಳಗೆ ನಾನು ಒಂದು ಮಾತನ್ನು ಒಪ್ಪುತ್ತೇನೆ. ನಿಮ್ಮ ಕಾಲದಲ್ಲಿ ಆಗಿದುದ್ದು, ಅದಕ್ಕೋಸ್ಕರ ನಮ್ಮ ಕಾಲದಲ್ಲಿ ಏಕೆ ಆಗಬಾರದು ಎಂದು ನಾವು ಹೇಳುವುದಿಲ್ಲ.

ಇಂತಹ ಸುಧಾರಣೆಗಳಿಗೆ ಪಕ್ಷಭೇದ ಮರೆತು ನಾವು ನೀವು ಜನಗಳನ್ನು ರಕ್ಷಣೆ ಮಾಡುವುದಕ್ಕೆ ಏನು ಬೇಕೋ ಅದನ್ನು ನಾವು ಮಾಡಬೇಕು. ಮಾಡುವಾಗ ಆರ್ಥಿಕ ಸುಭದ್ರತೆಯ ಆಧಾರದ ಮೇಲೆ ಯಾವಾಗಲೂ ಸಮಾಜಕ್ಕೆ ಸಮಾಧಾನ. ಅಭದ್ರತೆ ಎಂದರೆ ಸರ್ಕಾರಗಳು ಹೋಗುವುದು ಸರ್ಕಾರಗಳು ಬರುವುದು ಅಭದ್ರತೆ ಇಲ್ಲ. What political destabilisation is Japan, is based on the very solid economic base; what political destablisation in France is based on the solid economic base. There is no violence. But we have violence here.

ಆದ್ದರಿಂದ ನೀವು ಹೇಳುವುದನ್ನು ಇಷ್ಟು ಎಚ್ಚರಿಕೆಯಿಂದ ಏಕೆ ಕೇಳುತ್ತಿದ್ದೇನೆ ಎಂದರೆ, ಇದಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿದು ಅದಕ್ಕೋಸ್ಕರ ನಾವು ಇವೊತ್ತು ವಿದೇಶಿ ಬಂಡವಾಳ ಬರಲಿ unemployment is the root cause of almost all these violence . This is what I submit.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುವುದರಲ್ಲಿ ಅರ್ಥವಿದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ ಎಲ್ಲಿಯವರೆಗೆ ಈ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವುದಿಲ್ಲ ಮತ್ತು ನಿರುದ್ಯೋಗವನ್ನು ಎಲ್ಲಿಯವರೆಗೆ ನಾವು ಹೋಗಲಾಡಿಸುವುದಿಲ್ಲವೋ ಅಲ್ಲಿಯವರೆಗೆ ಅಶಾಂತಿ, ಕಳ್ಳತನಗಳು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತವೆ. ಆದರೆ ಒಂದು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ವೆಸ್ಟ್‌ಬಂಗಾಳ್‌ನಲ್ಲಿ ಈ ನಕ್ಸಲೈಟ್ಸ್ ಮತ್ತು ಸಿ.ಪಿ.ಎಮ್. ಗಲಾಟೆ ಬಹಳಷ್ಟು ಹೆಚ್ಚಿನ ಪ್ರಮಾಣದಲ್ಲಿ 62ರಿಂದ 72 -73 ರವರೆಗೆ ನಡೆಯಿತು. ಆಗ ಅಲ್ಲಿ ಅಶಾಂತಿ ಮತ್ತು ಲೇಬರ್ ಅನ್‌ರೆಸ್ಟ್ ಇದೆ ಎಂದು ಸಾಕಷ್ಟು ಕೈಗಾರಿಕೆಗಳು ಹೈದ್ರಾಬಾದ್ ಮತ್ತು ಬೆಂಗಳೂರಿಗೆ ಶಿಫ್ಟ್ ಆದವು. ಕಾನೂನು ಮತ್ತು ಸುವ್ಯವಸ್ಥೆ ಕಾರಣವೂ ಒಂದು ಕಡೆ ಇಡ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆರ್ಥಿಕ ಸ್ಥಿತಿಗತಿಗಳು ಒಂದು ಕಡೆ ಇದೆ. ಅದೇ ಪ್ರಮಾಣದಲ್ಲಿ ಕಾನೂನು ಸುವ್ಯವಸ್ಥೆ ಕಾರಣವೂ ಇದೆ. ಒಂದು ವೇಳೆ ನಾವು ಕಾನೂನು ಮತ್ತು ಸುವ್ಯವಸ್ಥೆಯನ್ನು ಸರಿಯಾಗಿ ಮೇಂಟೈನ್ ಮಾಡದೇ ಹೋದರೆ ಖಂಡಿತವಾಗಿ ಕೈಗಾರಿಕೋದ್ಯಮಿಗಳು ಇಲ್ಲಿ ಬರುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ಏನು ಹೇಳುತ್ತಾರೆ ಎಂದರೆ ಇಲ್ಲಿ ಗಲಾಟೆಗಳು ಇದೆ, ಲೂಟಿ ಆಗುತ್ತದೆ, ಸ್ಟ್ರೈಕ್ ಆಗುತ್ತದೆ, ಹೀಗೆ ಇದ್ದರೆ ನಮಗೆ ಕಿರಿಕಿರಿ, ಇಲ್ಲಿ ಬೇಡ ಇನ್ನೊಂದು ಕಡೆ ಹೋಗೋಣ ಎಂದು ಹೇಳುತ್ತಾರೆ. ಈಗ ಮತ್ತೆ ವೆಸ್ಟ್ ಬಂಗಾಳನಲ್ಲಿ ಪ್ರಾರಂಭವಾಗಿದೆ.

ಶ್ರೀ ಜೆ.ಹೆಚ್. ಪಟೇಲ್ : ಯಾವಾಗ ಪ್ರೈವೇಟೈಸೇಷನ್ ಶುರುವಾಯಿತು, ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಶುರುವಾಯಿತು, ಟಾಟಾ ಮತ್ತು ಬಿರ್ಲಾರವರು ಕೈಗಾರಿಕೆಗಳನ್ನು ಅಲ್ಲಿ ತೆಗೆಯುವುದಕ್ಕೆ ಹೋದರು ಅಲ್ಲಿ ಆಗ ಮತ್ತೇ ಅನ್‌ರೆಸ್ಟ್ ಇಲ್ಲ, ಅನ್‌ರೆಸ್ಟ್ ನಕ್ಸಲೈಟ್ಸ್ ಕಾಲದಲ್ಲಿ ಇತ್ತು ಆದರ ಅನ್‌ರೆಸ್ಟ್ ಇದ ಎನ್ನುವ ಕಾರಣಕ್ಕೆ ಇನ್‌ವೆಸ್ಟ್‌ಮೆಂಟ್ ಕಡಿಮೆಯಾಗಿತ್ತು. That also I agree.

ಆದರೆ ಈಗ ಇನ್‌ವೆಸ್ಟಿಮೆಂಟ್ ಜಾಸ್ತಿಯಾಗಿ, ಪಂಚತಾರಾ ಹೋಟೆಲ್‌ಗಳು ಜಾಸ್ತಿಯಾಗಿವೆ. ಈಗ ಸಿಸ್ಟಂ ಬಂಗಾಳ್‌ನಲ್ಲೂ ಶಾಂತಿ ಇದೆ.

ಶ್ರೀ ಎಂ.ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ,ಮಾನ್ಯ ಉಪ ಮುಖ್ಯಮಂತ್ರಿಕಗಳು ಹೇಳಿದ್ದರೆಲ್ಲ ಮೂಲಭೂತವಾದಂಥ ತತ್ವವಿದೆ. ಅದಕ್ಕೆ ನಾವು ಯಾರೂ ಕೂಡ ಅಭಿಪ್ರಾಯ ಭೇದ ಮಾಡಲಿಕ್ಕೆ ಸಾಧ್ಯವಿಲ್ಲ. ಅದು ಸೈದ್ಧಾಂತಿಕವಾಗಿ ಸರಿ. ಆದರೆ ತಮಗೆ ಗೊತ್ತದೆ. ಈಗ ಎಲ್ಲಾ ಕಾರ್ಪೊರೇಟ್ ಆಫೀಸ್‌ಗಳು ಇಲ್ಲಿಗೆ ಬರುತ್ತಿವೆ. ಅದೂ ಕೂಡ ಬಾಂಬೆಯಿಂದ ಬರುತ್ತಿವೆ. ಕಲ್ಕತ್ತಾದಿಂದ ಬರುತ್ತಿವೆ. ಏಕೆ. ಎಂದು

ಹೇಳಿದರೆ ಅಲ್ಲಿ ಕಾನೂನಿನ ಸುವ್ಯವಸ್ಥೆ ಸರಿಯಿಲ್ಲದಿರುವುದರಿಂದ ಅವರಿಗೆ ಅಲ್ಲಿ ಭಯ. ಅಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ. ಮಹಾರಾಷ್ಟ್ರದಲ್ಲಿ ಇರುವಷ್ಟು ಒಳ್ಳೆಯ ಆರ್ಥಿಕ ಪರಿಸ್ಥಿತಿ ಎಲ್ಲೂ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲೂ ಅಷ್ಟೇ ಮತ್ತು ಪಟ್ಟಣದಲ್ಲೂ ಅಷ್ಟೆ. ಆದರೆ ಕೇರಳದಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ. ಆದರ ಅಲ್ಲಿ ಯಾರೂ ಕೈಗಾರಿಕೆಗಳನ್ನು ತೆಗೆಯುವುದಕ್ಕೆ ಹೋಗುತ್ತಿಲ್ಲ. ತಮಗೆ ಗೊತ್ತಿರುವ ಪ್ರಕಾರ, ಇವೊತ್ತು ಮಹಾರಾಷ್ಟ್ರ ಗುಜರಾತ್ ಬಿಟ್ಟರೆ ಕೈಗಾರಿಕೆಯಲ್ಲಿ ಮೂರನೆಯ ಸ್ಥಾನ ಕರ್ನಾಟಕದ್ದು. ಈಗ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿದೆ. Foreign investmenvt they prefer Karnataka as No. 1 I think, Mr. Deshpande will agree with me they feel this is no.1

ಏಕೆಂದರೆ ಆ ಸ್ಟೆಬಿಲಿಟಿ ಅಲ್ಲಿಲ್ಲ. ತಮಗೆ ಗೊತ್ತಿದೆ ಯಾವ ಕಾರಣದಿಂದ ಇವೊತ್ತು ಮಹಾರಾಷ್ಟ್ರದಲ್ಲಿ, ಗುಜರಾತ್ ನಲ್ಲಿ ಕೈಗಾರಿಕೆಗಳು ತೆರೆಯುವುದಿಲ್ಲ. ಎಂದು ನಾನು ಇತ್ತೀಚೆಗೆ ಅಂದರೆ 8-10 ತಿಂಗಳ ಹಿಂದೆ ಕಲ್ಕತ್ತಾಗೆ ಹೋಗಿದ್ದ.

ಈಗ ಮಾನ್ಯ ಮುಖ್ಯಮಂತ್ರಿಕಗಳು ನಾವು ಪ್ರೈವೇಟೈಸೇಷನ್ ಮಾಡುತ್ತೇವೆ ಎಂದು ಹೇಳಬಹುದು. ಆದರೆ ಅದರ ಬಗ್ಗೆ ವಿಶ್ವಾಸ ಇನ್ನೂ ದೇಶದ ಬಂಡವಾಳಗಾರರಿಗೆ ಮತ್ತು ವಿದೇಶದ ಬಂಡವಾಳಗಾರರಿಗೆ ಇನ್ನೂ ಹುಟ್ಟಿಲ್ಲ. ಏಕೆಂದರೆ ಕಾನೂನು ಸುವ್ಯವಸ್ಥೆ ಬಗ್ಗೆ ಪ್ರಶ್ನಾರ್ಥಕ ಚಿಹ್ನೆ ಎಲ್ಲಾ ರಾಜ್ಯಗಳಲ್ಲಿ ಇರುವುದರಿಂದ ಇವೊತ್ತು Karnataka is poised to occupy number one place.

ಬಹುಶಃ ಈ ಸ್ಟೆಬಿಲಿಟಿಯನ್ನು ತಾವು ಮುಂದುವರಿಸಿಕೊಂಡು ಹೋಗಬೇಕು ಎನ್ನುವುದು ನನ್ನ ಆಶಯ. ಮುಂದುವರಿಸಿಕೊಂಡು ಹೋಗುತ್ತೀರಿ ಎನ್ನುವ ಒಂದು ವಿಚಾರವನ್ನು ತಾವು ಕೂಡ ಸಾಕಷ್ಟು ವೇದಿಕೆಗಳಲ್ಲಿ ಹೇಳಿದ್ದೀರಿ. ಆ ಬಗ್ಗೆ ನಮಗೆ ಸಂತೋಷವಿದೆ. ಅದಕ್ಕೋಸ್ಕರ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದರೆ ಅದಕ್ಕೆ ಬರೀ ಆರ್ಥಿಕ ಕಾರಣವೇ ಮುಖ್ಯವಲ್ಲ. ಈ ಸ್ಟೆಬಿಲಿಟಿ ಇದೆ. ಏಕೆಂದರೆ ಇಲ್ಲಿ ಪ್ರಾಸ್ಪರಿಟಿ ಆಗಬೇಕಾದರೆ, ಆ ಪ್ರಾಸ್ಪರಿಟಿಗೆ ವಾತಾವರಣ ಯಾವುದು, ಪ್ರಾಸ್ಪರಿಟಿಗೆ ಬೇಕಾದಂಥ ಇಂಡಸ್ಟ್ರಿಯಲ್ ಕ್ಲೈಮೇಟ್ ಬೇಕಾಗುತ್ತದೆ. ಇಂಡಸ್ಟ್ರಿಯಲ್ ಕ್ಲೈಮೆಟ್ ಇವೊತ್ತು ಕೈಗಾರಿಕೆಗಳು ಬರಬೇಕಾದರೆ ಆ ವಾತಾವರಣ ಮೊದಲೇ ಇರಬೇಕೇ ಹೊರತು ಬಂದು ಇಲ್ಲಿ ಅವು ವಾತಾವರಣವನ್ನು ಸೃಷ್ಟಿ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಅದು ಗಣಪತಿ ಮದುವೆಯಾಗುತ್ತದೆ.

Sri J.H. Patel : It is complementary.

Sri M. Veerappa Moily : It is not complementary. This is the basic ಇಂಡಸ್ಟ್ರಿಯಲ್ ಪೀಸ್ ಇಲ್ಲಿ ಬೇಕು. ಕಾನೂನಿನ ಸುವ್ಯವಸ್ಥೆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಬಹಳ ಚೆನ್ನಾಗಿದೆ, ಅದಕ್ಕೋಸ್ಕರ ವಿದೇಶಿ ಬಂಡವಾಳಗಾರರು ಬರುತ್ತಿದ್ದಾರೆ ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತೆ ಸೈದ್ಧಾಂತಿಕವಾಗಿ ತಾವು ಹೇಳಿದಂಥ ವಿಚಾರವನ್ನು ಒಪ್ಪತಕ್ಕಂಥದ್ದು. ಆದರೆ ಈಗ ಕೈಗಾರಿಕೆಗಳನ್ನು ಪ್ರಾರಂಭ ಮಾಡಲಿಕ್ಕೆ ಇರತಕ್ಕಂಥ ವಾತಾವರಣಕ್ಕೆ ಮೂಲಭೂತ ಪ್ರೇರಕ ಶಕ್ತಿಯೆಂದರೆ ಅದು ಕಾನೂನಿನ ಸುವ್ಯವಸ್ಥೆ. ಇದನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದಕ್ಕಾಗಿ ಈ ವಿಷಯವನ್ನು ನಾವು ತೆಗೆದುಕೊಂಡಿದ್ದೇವೆ. ಇದು ಬಹಳ ಪ್ರಾಮುಖ್ಯ. ಕಾನೂನು ಸುವ್ಯವಸ್ಥೆ ಇವೊತ್ತು ಮುಖ್ಯವಾಗಿ ಬೇಕಾಗಿರತಕ್ಕದ್ದು ಬೆಂಗಳೂರಿನಲ್ಲಿ ಮತ್ತು ಬೆಂಗಳೂರಿನ ಸುತ್ತಮುತ್ತ. ಏಕೆಂದರೆ ಯಾವುದೇ ಒಂದು ರಾಜ್ಯದಲ್ಲಿ ಕೈಗಾರಿಕೆ ಆಗಬೇಕಾದರೆ

ಇವೊತ್ತು ವಿದೇಶಿ ಬಂಡವಾಳಗಾರರಾಗಲಿ ಅಥವಾ ಬೇರೆಯವರಾಗಲಿ. They will look to the capital of the State.

ಏಕೆಂದರೆ ಇವೊತ್ತು ಬಾಂಬೆ ಕೆಟ್ಟು ಹೋದರೆ ಇಡೀ ಮಹಾರಾಷ್ಟ್ರ ಕೆಟ್ಟುಹೋಯಿತು ಎಂದರ್ಥ. ಬೆಂಗಳೂರು ಕೆಟ್ಟು ಹೋದರೆ ಇಡೀ ಕರ್ನಾಟಕ ಕೆಟ್ಟು ಹೋಯಿತು ಎಂದರ್ಥ. ತಾವು ಇದರ ಬಗ್ಗೆ ಬಹಳ ಆರ್ಗ್ಯೂಮೆಂಟ್ ಮಾಡಬಹುದು. ಬೇರೆ ಪಟ್ಟಣಗಳು ಇವೆ. ಬೇರೆ ನಗರಗಳು ಇವೆ. ನಾವು ಸಾಕಷ್ಟು ಇನ್‌ಫ್ರಾಸ್ಟ್ರಕ್ಚರ್ ಫಸಿಲಿಟೀಸ್ ಕೊಡಬಹುದು ಎಂದು ಎಷ್ಟೇ ಹೇಳಿದರೂ ಕೂಡ nucleus for acceleration of the industry.

ಅದು ಬೆಂಗಳೂರು ಮತ್ತು ಬೆಂಗಳೂರು ಸುತ್ತಮುತ್ತ ಈ ಕಡೆಯಿಂದ ಹೊರಡುತ್ತದೆ. This is the inspiring nucleus force, ಆದರೂ ಕೂಡ ಇಂಥ ಕಡೆಗಳಲ್ಲಿ ನಾವು ಎಷ್ಟು ಜಾಗೃತ ತೆಗೆದುಕೊಂಡರೂ ಕೂಡ ಅದು ಎಷ್ಟೆಷ್ಟು ಸಾಲದು ಎಂಬುದನ್ನು ತಾವು ಇವೊತ್ತು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದುದು ಅವಶ್ಯಕತೆ ಇದೆ. ಈ ವಿಷಯದಲ್ಲಿ ನಮ್ಮ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಅದನ್ನು ನಾನು ಪುನರುಚ್ಚಾರ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ, ಆದರೂ ಇವೊತ್ತು ಬೆಂಗಳೂರು ನಗರದಲ್ಲಿ ಕೆಲವು ಘಟನೆಗಳು ಏನು ನಡೆಯುತ್ತಿದೆ, ಇದು ಏಕೆ ನಡೆಯುತ್ತದೆ ಎಂಬುದನ್ನು ತಾವು ಸ್ವಲ್ಪ ಹೆಚ್ಚು ವಿಚಾರ ಮಾಡಬೇಕು. ಇವೊತ್ತು ಹೇಳಬಹುದು, ನಿಮ್ಮ ಕಾಲದಲ್ಲಿ ಇದ್ದಂಥ ಪೋಲೀಸ್ ಅಧಿಕಾರಿಗಳೇ ಈಗ ಇದ್ದಾರೆ, ಇದರಲ್ಲಿ ಬದಲಾವಣೆ ಮಾಡಿಲ್ಲ ಎಂದು. ತಾವು ಸ್ವಲ್ಪ ಬದಲಾವಣೆ ಮಾಡಿದ್ದೀರಿ. ಆ ಪ್ರಶ್ನೆ ಒಂದು ಕಡೆ ಇರಲಿ. ಪೋಲೀಸ್‌ರವರನ್ನು ನಾವು ಕ್ರಿಯೇಟ್ ಮಾಡುವುದಿಲ್ಲ, ತಮ್ಮ ಕಾಲದಲ್ಲೇ ಇದ್ದಂಥವರೇ ನಮ್ಮ ಕಾಲದಲ್ಲೂ ಇದ್ದಾರೆ. political will to governance these forces is important. It is a driving force for the development, or maintenance of the law and order situation.

ಇದರ ಬಗ್ಗೆ ಎಲ್ಲಿ ಕೊರತೆಯಾಗಿದೆ ಎಂಬ ಒಂದು ಆತ್ಮಾಲೋಚನ ನಾವು ಮಾಡದೇ ಇದ್ದರೆ, ಹಿಂದೆ ಕೂಡ ಇತ್ತು, ಈಗಲೂ ನಡೆಯುತ್ತದೆ, ನಾಳೆ ಕೂಡ ನಡೆಯುತ್ತದೆ ನಾವು ಏನು ಮಾಡುವುದಕ್ಕೆ ಸಾಧ್ಯವಿದೆ ಎಂಬ ಮಾತನ್ನು ಇವೊತ್ತು ಹೇಳಿದರೆ ಇಡೀ ರಾಜ್ಯ ಇದರಿಂದ ವಿಶೇಷವಾಗಿ ಒಂದು ನಷ್ಟಕ್ಕೆ ಒಳಪಡಬೇಕಾಗುತ್ತದೆ. in process your image will also be destroyed

ಇದನ್ನು ಮರೆಯಬೇಡಿ. ಇದರಿಂದ ನಮಗೆ ಏನಾದರೂ ಹೆಚ್ಚು ವರ್ಚಸ್ಸು ಬರುತ್ತದೆ ಎನ್ನುವುದಾದರೆ I know very well.

ಈ ಆರ್ಡರ್‌ಇಶ್ಯೂನಿಂದ ತಮಗೆ ವರ್ಚಸ್ಸು ಬರುವುದಿಲ್ಲ, ಇದರಿಂದ ನೀವು ಬೇಕಂತಲೇ ಮಾಡುತ್ತೀರಿ ಎನ್ನುವ ಅಭಿಪ್ರಾಯವಲ್ಲ ವರ್ಚಸ್ಸು ಕಡಿಮೆಯಾಗುತದೆ. ತಮಗೂ ಗೊತ್ತಿದೆ, ಇವೊತ್ತು ಕಾನೂನು ಸುವ್ಯವಸ್ಥೆಯಲ್ಲಿ ಒಂದು ಕಡೆ ಎಡವಿದರೆ ಇವತ್ತು ಆ ಸ್ಲೀವ್ ಏನಿದೆ ಅದು ಸ್ಲೀಪ್ ಆಗಿರುತ್ತದೆ. ಚೇತರಿಸಿಕೊಳ್ಳಲಿಕ್ಕೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಇದು 2-3 ದಿನಗಳ ಪ್ರಶ್ನೆಯಲ್ಲ, ವಾರಗಳ ಪ್ರಶ್ನೆಯಲ್ಲ, ತಿಂಗಳುಗಳ ಪ್ರಶ್ನೆಯಲ್ಲ, ಈ ಕಾನೂನು ದುಸ್ಥಿತಿಯ ವಾತಾವರಣ ಏನಿದೆ ಅದು ಬಹಳ ಬೇಗ ನಮ್ಮ ಆಡಳಿತದ ಪ್ರಕ್ರಿಯೆಯನ್ನು ನುಂಗಿಕೊಂಡುಬಿಡುತ್ತದೆ. ಆದ್ದರಿಂದ ಚೇತರಿಸಿಕೊಳ್ಳುವುದಕ್ಕೆ ಬಹಳ ಕಷ್ಟ ಬರಬಹುದು ಎಂಬ ವಿಚಾರವನ್ನು ಮಾತ್ರ ನಾನು ಇವೊತ್ತು ತಮ್ಮ ಗಣನೆಗೆ ತರಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಹಿಂದೆ ಯಾರ ಕಾಲದಲ್ಲಿ ಏನಾಗಿತ್ತು ಎನ್ನುವುದು ಬೇಡ. ಏಕೆ ಹೀಗಾಗಿದೆ ಎಂಬುದು ಕೂಡ This is also a basic question. ನಮ್ಮ

ದೇಶದಲ್ಲಿ ಹೇಳುವಷ್ಟು ಎತ್ತರದ ಧರ್ಮವನ್ನು ಬೇರೆ ಯಾವ ದೇಶದಲ್ಲೂ ಹೇಳುವುದಿಲ್ಲ. ನಿಜವಾಗಿ ಜಪಾನ್‌ನಲ್ಲಿ ಯಾರೂ ಚರ್ಚಿಗೂ ಹೋಗುವುದಿಲ್ಲ ಮತ್ತು ದೇವಸ್ಥಾನಗಳಿಗೂ ಹೋಗುವುದಿಲ್ಲ. Partly due to lake of character of individuals

ಸರ್ಕಾರ ಯಾವುದಾದರೂ ಇರಲಿ, ಮನುಷ್ಯ ಏಕೆ ಇಷ್ಟು ಕ್ಷುದ್ರವಾಗಿದ್ದಾನೆ, ಸುಳ್ಳು ಹೇಳುತ್ತಾನೆ, ಕಳ್ಳತನ ಮಾಡುತ್ತಾನೆ, ಅತ್ಯಾಚಾರ ಮಾಡುತ್ತಾನೆ. ಬಡವ ನಿಜ, ಬಡವರಾಗಿದ್ದು ಕೆಲವು ದೇಶಗಳಲ್ಲಿ ಇಂಥ ಅತ್ಯಾಚಾರ ಮಾಡುವುದಿಲ್ಲ. ತೀರಾ ಅಂದರೆ ಭಾನುವಾರ ಒಂದು ದಿವಸ ಚರ್ಚಿಗೆ ಹೋಗುತ್ತಾರೆ, ಸೋಮವಾರ ಒಂದು ದಿವಸ ಗುಡಿಗೆ ಹೋಗುತ್ತಾರೆಂದರೆ ಅಥವಾ ಇಲ್ಲ.

5.40 ಪಿಎಂ.

ಆದರೆ ನಾವ ಮನುಷ್ಯತ್ವವನ್ನು ಏಕೆ ಕಳೆದುಕೊಂಡಿದ್ದೇವೆ? As a man he is a man. This many not be immediately relevant here for the adjournment motion. This may not be relevant to any man in this House, but we have to apply our mind to this, why are we like this?

ಶ್ರೀ ಎಂ. ವೀರಪ್ಪಮೊಯಿಲಿ : ಇದು ನಮಗೆ ಗೊತ್ತಿದೆ, ಮನುಷ್ಯ ಕ್ರೂರಿಯಾದರೆ ಹುಲಿಗಿಂತಲೂ ಕ್ರೂರಿಯಾಗುತ್ತಾನೆ. That is the nature of man. ಶಿಕ್ಷಣ ಇಷ್ಟು ಹೆಚ್ಚಾದರೂ ಕೂಡ, ಹೆಚ್ಚಾಗಿ ಜನ ಅಕ್ಷರಸ್ಥರಾದರೂ ಕೂಡ ಇವತ್ತು ಏಕೆ ಹೀಗಾಗಿದ್ದಾನೆ? ಇದು ಎಂಥ ವ್ಯವಸ್ಥೆ? ಈ ವ್ಯವಸ್ಥೆಯನ್ನು ಹತೋಟಿಗೆ ತರತಕ್ಕಂತಹ ಒಂದು ಪ್ರಮಾಣ ಇದೆಯಲ್ಲ ಅದು ಮುಖ್ಯ. ಹತೋಟಿಗೆ ತರತಕ್ಕಂಥ ಒಂದು ಪ್ರಕ್ರಿಯೆ ಏನಿದೆ, ಅದು ಸರ್ಕಾರ ಮಾಡತಕ್ಕಂಥದ್ದು. ಸರ್ಕಾರದಲ್ಲಿರತಕ್ಕಂತಹವರ ತಮ್ಮ ಕರ್ತವ್ಯ ಇವತ್ತು ಇಲ್ಲಿ ಬರುತ್ತದೆ. ಇದರಲ್ಲಿ ಸ್ವಲ್ಪ ವ್ಯತ್ಯಾಸವಾದರೆ, ಆ ವ್ಯತ್ಯಾಸ ಸ್ವಲ್ಪದರಲ್ಲಿ ಮುಗಿಯುವುದಿಲ್ಲ. ಅದು ತೀವ್ರವಾಗುತ್ತದೆ ಎಂಬುದನ್ನು ಇವತ್ತು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರಲಿಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ ಪ್ರಾಯಃ ಇದು ಸ್ವಲ್ಪ ಗಹನವಾದ ವಿಷಯವಾಗಿ ಪ್ರಸ್ತಾಪಿಸಲ್ಪಡುತ್ತಿರುವುದರಿಂದ, ನಮ್ಮ ಇತಿಹಾಸದಲ್ಲಿ ಮತ್ತು ಪರಂಪರಾಗತವಾದಂತಹ ವ್ಯವಸ್ಥೆಯಲ್ಲಿ, ನಾವು ವೈಯಕ್ತಿಕವಾಗಿ ಪರಾಕ್ರಮಿಗಳಾಗಿ ಸಮೂಹಿಕವಾಗಿ ಮಹಾಪಿತೂರಿಗಾರರಾಗಿ ಇತಿಹಾಸದ ಉದ್ದಕ್ಕೂ ಸೋತಿದ್ದೇವೆ. ವೈಯುಕ್ತಿಕವಾಗಿ ಶುಚಿಭೂತ್ಯರಾಗಿ, ಸಾಮೂಹಿಕವಾಗಿ ಕೊಳಕರಾಗಿದ್ದೇವೆ. ವೈಯಕ್ತಿಕವಾದಂತಹ ಮಟ್ಟದಲ್ಲಿ ದೈವಭಕ್ತರಾಗಿ, ಸಾಮೂಹಿಕವಾಗಿ ಗುಂಪು ಗಲಭೆಗಳಿಗೆ ಮತ್ತು ಭಾವೋದ್ವೇಗಕ್ಕೆ ಒಳಗಾಗಿದ್ದೇವೆ. ಇದು ಪ್ರಾಯಶಃ ನಮ್ಮಲ್ಲಿರತಕ್ಕಂತಹ ದ್ವಂಧ್ವ ಮತ್ತು ಆಶಾಡಭೂತಿ ತನವೇ ಇದಕ್ಕೆ ಉತ್ತರವೆಂದು ಕಾಣುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ವೈಯಕ್ತಿಕವಾಗಿ ಆಶಾಡಭೂತಿಗಳಾಗಿ ಸಾಮೂಹಿಕವಾಗಿ ಮತ್ತು ವೈಯಕ್ತಿಕವಾಗಿ ಒಳ್ಳೆಯವರಾಗಿರುವುದಿಲ್ಲ. ಆದರೆ ಸಾಮೂಹಿಕವಾಗಿ ಆಶಾಡಭೂತಿತನ ತೋರಿಸುತ್ತೇವೆ. ಅದು ಬಹಳ ಮುಖ್ಯವಾಗಿ. ಬಹುಶಃ ತಾವು ಹೇಳಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ವೈಯಕ್ತಿಕವಾಗಿ ಒಳ್ಳೆಯವರಾಗಿದ್ದು ಸಾಮೂಹಿಕವಾಗಿ ಆಶಾಡಭೂತಿಗಳಾಗಿದ್ದರೆ, ಬಹುಶಃ ಅದನ್ನು ಸುಧಾರಿಸಬಹುದು, ರೆಕ್ಟಿಫೈ ಮಾಡಬಹುದು. ಆದರೆ ವೈಯಕ್ತಿಕವಾಗಿ ಅನೇಕ ರೂಢಮೂಲವಾದಂಥ ಜಾತಿ ವ್ಯವಸ್ಥೆಗಳು, ವ್ಯತ್ಯಾಸಗಳು ನಮ್ಮಲ್ಲಿರತಕ್ಕಂತಹ ಲೋಭಿತನಗಳು ಇದರಿಂದಾಗಿ ಏನಾಗುತ್ತದೆಂದರೆ, ವೈಯಕ್ತಿಕವಾಗಿ ಆ ಮೋಸಗಳು ಇರುವಾಗ ಸಾಮೂಹಿಕವಾಗಿ ಆಶಾಢಭೂತಿತನ ತೋರಿದಾಗ, ಇಡೀ ಕಲ್ಮಶ ಅಲ್ಲಿ ಆಗುತ್ತದೆ. ಇಲ್ಲವೆಂದರೆ ವೈಯಕ್ತಿಕವಾಗಿ ಜನ ಚೆನ್ನಾಗಿದ್ದರು ಸಾಮೂಹಿಕವಾಗಿ

ಆಶಾಡಭೂತಿತನ ಅದು ಬಹಳ ಕಡಿಮೆ. That inference may not be correct.

ಶ್ರೀ ಎಂ.ಪಿ. ಪ್ರಕಾಶ್ : ಸಾಮೂಹಿಕ ಸನ್ನಿವೇಶಕ್ಕೆ ಒಳಗಾಗತಕ್ಕಂತಹ ಪ್ರಬೇದಗಳು ಏನಿವೆ, ವೈಯಕ್ತಿಕವಾಗಿ ಪರಾಕ್ರಮಿಗಳಾಗಿ, ಸಾಮೂಹಿಕವಾಗಿ ಪಿತೂರಿಗಾರರು ಮತ್ತು ಜಾತಿವಾದಿಗಳಾಗಿದ್ದರಿಂದ ಇತಿಹಾಸದ ಪುಟದಲ್ಲಿ ಒಂದೇ ಒಂದು ನಿರ್ಣಾಯಾತ್ಮಕವಾದಂತಹ ಯುದ್ಧವನ್ನು ಈ ದೇಶದಲ್ಲಿ ನಾವು ಗೆದ್ದಿಲ್ಲ, ಆದ್ದರಿಂದ ನಾವು ಸಾಮೂಹಿಕವಾಗಿ ಬೇರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಫಿಲಾಸಾಫಿಕಲಿ ಮಾತನಾಡುವುದಕ್ಕೆ ಒಂದು ಸೆಮಿನಾರ್ ಏರ್ಪಾಡು ಮಾಡೋಣ, ಆದಾಗ ಇವೆಲ್ಲಾ ಮಾತನಾಡೋಣ. ಸದ್ಯಕ್ಕೆ ವಿಷಯಕ್ಕೆ ಬನ್ನಿ.

SRI. M. VEERAPPA MOILY : The society cannot be corrupted. A man can be corrupted. That is more important. It the man is corrupt, then the society cannot help. But, unfortunately.

ತಮ್ಮ ತತ್ವನೇ ಸರಿ ಎಂದು ಹೇಳಿ ಬಹಳ ಸಂತರು ಹೇಳುತ್ತಾ ಬಂದಿದ್ದಾರೆ. ಆದರೆ ಆ ಸಂತರು ಹೇಳಿದಂಥ ಮಾತಿಗೆ ಇವತ್ತು ಪ್ರಶ್ನೆ ಹಾಕಬೇಕಾಗಿದೆ. ಆದುದರಿಂದ ಇವತ್ತು ವೈಯಕ್ತಿಕವಾಗಿ ನಮ್ಮನ್ನೇ ನಾವು ತಿದ್ದಿಬಿಟ್ಟರೆ, ಏತಕ್ಕೆಂದರೆ ತಮಗೆ ಗೊತ್ತಿದೆ, ನಾನು "ಶಾಂತಿ ಎಲ್ಲೆಂದ" ಒಂದು ಪದ್ಯ ಬರೆದಿದ್ದೇನೆ. ಬರೆದು ಶಾಂತಿ ನಮ್ಮ ಒಳಗಡೆನೇ ಇದೆಯೆಂದು ಹೇಳಿ, ಶಾಂತಿ ಹುಡುಕಿದರೆ ಎಲ್ಲಿಯೂ ಸಿಗುವುದಿಲ್ಲ, ಇದ್ದರೆ ಅದು ನಮ್ಮಲ್ಲಿಯೇ ಇರುತ್ತದೆ. ಆ ರೀತಿ ಒಳ್ಳೆಯತನ ನಾವು ನೋಡಬೇಕು, ಸರಿಪಡಿಸಬೇಕು. ನಮ್ಮಲ್ಲಿ, ನಾವು ಸರಿಪಡಿಸಿದರೆ ಆ ಪ್ರಕಾಶ ಬಾಕಿ ಕಡೆ ಕೂಡ ಬೀಳುತ್ತದೆ.ಆದುದರಿಂದ society is by and large, that is only a combination of men who constitute the society. It men are bad, if men are corrupt, if men are perverse, society will will be perverse. Therefore, man can be cruel just like a tiger.

ಆದುದರಿಂದ ಹುಲಿಯಷ್ಟೆ ಅವನು ಕ್ರೂರಿಯಾಗಬಹುದು. ನರಿಗಿಂತಲೂ ಹೆಚ್ಚು ಕುಯುಕ್ತಿಯ ವ್ಯಕ್ತಿಯಾಗಬಹುದು. ಆದರೆ ಸಮಾಜ ಆಗುವುದಿಲ್ಲ. ಆದುದರಿಂದ ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ವಿಚಾರಕ್ಕೆ ಬರದಿದ್ದರೂ ಕೂಡ, ನಾನು ಅನೇಕ ಘಟನೆಗಳನ್ನು ಹೇಳಿದೆ, ಬೇಲೂರು ಕಡೆಯಲ್ಲಿ ಸೀಮೆಎಣ್ಣೆ ಸುರಿದು ಒಬ್ಬ ದಲಿತ ಜನಾಂಗಕ್ಕೆ ಸೇರದವರ ವ್ಯಕ್ತಿ ಮರಣ ಹೊಂದಿದಂತಹ ಪರಿಸ್ಥಿತಿ ಇದೆ. ಮತ್ತು ತಮಗೆ ಗೊತ್ತಿದೆ ಬೆಂಗಳೂರಿನಲ್ಲಿ ಹಾಡುಗಲಿನಲ್ಲೇ ಸಾಮಾನ್ಯವಾದಂತಹ ಕೊಲೆ ಬಹಳ ಬ್ರೂಟಲ್ ಮರ್ಡರ್, ಬಹಳ ಹಿಂಸಾತ್ಮಕವಾದಂಥ ಹಾಗೂ ಬಹಳ ವಿಕೃತವಾದಂತಹ ಕೊಲೆಗಳು ದಿನಬೆಳಗಾದರೆ, ಆಗುತ್ತಿವೆ. ನಿನ್ನೆಯೂ ಕೂಡ ಒಂದು ಕಡೆಯಾಗಿದೆ. ಅವನು ಇನ್ನೂ ಪ್ರಜ್ಞಾವ್ಯಸ್ಥೆಯಲ್ಲಿ ಇದ್ದಾನೆ. ಇವತ್ತು ಗ್ಯಾಂಗ್‌ರೇಪ್, ಗ್ಯಾಂಗ್‌ಮರ್ಡರ್ಸ್ ಆಗುತ್ತಿವೆ. ಟೌನ್‌ಹಾಲ್ ಎದುರಿಗೆ ಒಬ್ಬ ವಿದ್ಯಾರ್ಥಿಯನ್ನು ಬಸ್‌ನಿಂದ ಇಳಿಸಿ, ಬಹಳ ಕ್ರೂರವಾಗಿ ಚೇಡಿಸತಕ್ಕಂತಹ ಒಂದು ಪರಿಸ್ಥಿತಿ ಕೂಡ ಬೆಂಗಳೂರಿನಲ್ಲಿ ನಡೆದಿದೆ. ಇಂತಹದ್ದು ಒಂದು ಘಟನೆಯಲ್ಲ ಬಹಳ ಚೇಡಿಸಿ ಕೊಲೆ ಮಾಡತಕ್ಕಂತಹ ಪ್ರಸಂಗಗಳು ಮತ್ತು ಘಟನೆಗಳು ಅನೇಕ ಕಡೆ ದಿನಬೆಳಗಾದರೆ ಆಗುತ್ತಿವೆ. ನಿನ್ನೆ ಆಗಿತ್ತು ಇವತ್ತು ಏನಾಗಿದೆಯೋ ಗೊತ್ತಿಲ್ಲ. ಇವತ್ತು ಕೋಲಾರದ ಅರಟೆ ಎಂಬಲ್ಲಿ ಕೂಡ ಒಂದು ಚುನಾವಣೆ ಆದ ಕೂಡಲೇ ಚುನಾವಣೆ ಪ್ರತಿಕ್ರಿಯೆಯಾಗಿ ಅದೊಂದು ರಾಜಕೀಯ ಕೊಲೆ ಆಗಿದೆ. ಇವತ್ತು ಹುಬ್ಬಳ್ಳಿಯಲ್ಲಿ ಕೂಡ ಒಂದು ಘಟನೆಯಾಗಿದೆ. I am not going to comment on that.

ಏಕೆಂದರೆ ಅದರ ವಿವರ ನಮ್ಮಲ್ಲಿ ಇಲ್ಲದೆ ಇರುವ ಕಾರಣ. ಅಂತಹ ಘಟನೆಗಳು ಇವತ್ತು ಸಾಕಷ್ಟಾಗಿವೆ. ವಿವರಗಳನ್ನು ಪ್ರಶ್ನೋತ್ತರ ವೇಳೆಯಲ್ಲಿ ಅವರು ಕೊಟ್ಟಿದ್ದಾರೆ. ಆದರೆ ಇವತ್ತು ತಾವು ಒಂದು ಪ್ರಶ್ನೆಯನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಬೆಂಗಳೂರಿನಂತಹ ಪಟ್ಟಣಗಳಲ್ಲಿ ರೋಲ್‌ಕಾಲ್ ಅರೇಂಜ್‌ಮೆಂಟ್ ಅಂತ ಮಾಡುತ್ತಾರೆ. ನಮ್ಮ ಕಾಲದಲ್ಲಿ ಅದು ಪೂರ್ತಿ ನಿಂತು ಹೋಗಿತ್ತು. ಏಕೆಂದರೆ ಅನೇಕ ರೌಡಿಗಳು ಭೂಗತರಾಗಿದ್ದರು ಅಥವಾ ನಮ್ಮ ರಾಜ್ಯ ಬಿಟ್ಟು ಹೋಗಿದ್ದರು ಅಥವಾ ಇನ್ನು ಕೆಲವರು ಪೋಲಿಸರ ಕಾನೂನು ವ್ಯವಸ್ಥೆ ಭಯದಿಂದ ತಾವೇ ಸರೆಂಡ್ ಆಗಿ ಜೈಲಿನಲ್ಲಿದ್ದರು. ಪಟೇಲರೇ, ಒಂದೇ ಒಂದು ಸ್ಮಾಲ್ ಸ್ಯಾಂಪಲ್ ನಮಗೆ ತೆಗೆದುಕೊಡಿ ಇವತ್ತು. ತಮ್ಮ ಸರ್ಕಾರ ಬಂದ ಮೇಲೆ ಇವತ್ತು ಎಷ್ಟು ಜನ ಬೇಲ್ ತೆಗೆದುಕೊಂಡು ಇಂತಹ ರೌಡಿಗಳು ಹೊರಗೆ ಬಂದಿದ್ದಾರೆ. ಇದನ್ನಷ್ಟೆ ಹೇಳಿ. How many people have come, you can make a sample study. ಬಾಕಿ ಅನೇಕ ವಿಚಾರಗಳ ಬಗ್ಗೆ ತಾವು ಅಧ್ಯಾಯನ ಮಾಡಬಹುದು. ಈ ಒಂದು ಸ್ಯಾಂಪಲ್ ಸ್ಟಡಿಯನ್ನು ತಾವು ಮಾಡಿ.

ಈ ರೌಡಿಗಳು ಬೇಲ್ ತೆಗೆದುಕೊಂಡು ಹೊರಗೆ ಬಂದಿದ್ದಾರೆ. ಅವರು ಹೇಗೆ ಬಂದಿದ್ದಾರೆ? ನಮಗೆ ಪೋಲೀಸರ ಭಯವಿದೆ. ನಾವು ನಮ್ಮ ಅಕ್ರಮಗಳನ್ನು ದುಷ್ಕೃತ್ಯಗಳನ್ನು ಹೊರಗಡೆ ಮಾಡುವುದಕ್ಕಾಗುವುದಿಲ್ಲವೆಂದು ತಾವೇ ತಾವಾಗಿ ಬೇಲನ್ನು ತೆಗೆದುಕೊಂಡು ಜೈಲಿನಲ್ಲಿದ್ದ ರೌಡಿಗಳು ಇವತ್ತು ಹೊರಗೆ ಬಂದಿದ್ದಾರೆ. ಬೆಂಗಳೂರಿನಲ್ಲಿ ಹಿಂದೆ ರಾಜಾರೋಷವಾಗಿ ತಿರುಗುತ್ತಿದ್ದರು. ತಮಗೆ ಬೇಕಾದರೆ ಮಾಹಿತಿಯನ್ನು ಕೊಡುತ್ತೇನೆ. ಅವರು ಹಿಂದೆ ಏನು ತಮ್ಮ ಆಫೀಸ್‌ಗಳನ್ನು ತೆರೆದಿದ್ದಾರೆ. ಹತ್ಯೆ, ಅಕ್ರಮ ಮುಂತಾದ ಅವರ ಹಲವಾರು ಕಾರ್ಯಕ್ರಮಗಳು ಏನಿವೆ ಅವುಗಳನ್ನು ನಡೆಸುವುದಕ್ಕೆ ಅವರು ತಮ್ಮ ಆಫೀಸ್‌ಗಳನ್ನು ತೆರೆದಿದ್ದಾರೆ. ರೋಲ್‌ಕಾಲ್‌ನ್ನು ವಸೂಲ್ಮಾಡುವುದರಲ್ಲಿ ಘರ್ಷಣೆ ನಡೆದಿದೆ. ಆದರಿಂದಾಗಿ ಪರಸ್ಪರ ಕೊಲೆಗಳಾಗುತ್ತಿವೆ. ಇದನ್ನು ತಕ್ಷಣ ನಿಲ್ಲಿಸತಕ್ಕ ಪ್ರಯತ್ನ ತಮ್ಮಿಂದಾಗಬೇಕು. ತಮಗೆ ಗೊತ್ತಿರುವಂತೆ ರಾಜಕಾರಣಿಗಳು ಮತ್ತು ಪೋಲೀಸರ ಸಹಕಾರವಿಲ್ಲದೆ ಇಂಥ ಕೃತ್ಯಗಳು ನಡೆಯುವುದಿಲ್ಲ. ಈ ರೌಡಿಗಳ ಹಾವಳಿ ಇವರ ಸಹಾಯವಿಲ್ಲದೆ ನಡೆಯುವುದಿಲ್ಲ. You must find out who are those people, warn them. Even if he is a politician or any group of politics, whichever the party, you put them behind the bar. This is what I am telling you.

ಇದನ್ನು ಮೂಲೋತ್ಪಾಟನೆ ಮಾಡತಕ್ಕ ಧೈರ್ಯ, ಸ್ಥೈರ್ಯವನ್ನು ತಾವು ತೋರಿಸಬೇಕಾಗಿದೆ. ಇವತ್ತು ಅನೇಕ ವಿವರಗಳನ್ನು, ಅನೇಕ ಪ್ರಕರಣಗಳನ್ನು ಇಲ್ಲಿ ಹೇಳಬಹುದು. ಆದರೆ ಈ ರೀತಿ ಹೇಳುವುದರಿಂದ ಮತ್ತೆ ಆ ಪ್ರಕರಣಗಳು ಮರುಕಳಿಸಬಹುದು. ಆದರೆ ಇದನ್ನು ನಿಲ್ಲಿಸುವಂಥ ಮೂಲಭೂತ ಕಾರ್ಯಕ್ರಮಗಳು ಏನು ಅಗತ್ಯವಾಗಿ ಬೇಕು ಅದನ್ನು ತಾವು ವಿಶೇಷವಾಗಿ ಮಾಡಬೇಕಾದ ಅವಶ್ಯಕತೆ ಇದೆ. ಇತ್ತೀಚೆಗೆ ಫ್ಯಾಮಿಲಿ ಕೋರ್ಟ್‌ನಲ್ಲಿ ಎಸ್.ಪಿ. ಆಗಿದ್ದಂಥ ವ್ಯಕ್ತಿ ಕಾನೂನನ್ನು ತನ್ನ ಕೈಗೆ ತೆಗೆದುಕೊಂಡು ವಕೀಲರನ್ನು ಅಟ್ಯಾಕ್‌ಮಾಡಿರುವುದನ್ನು ನಾವು ನೋಡಿದ್ದೇವೆ According to my information and according to the statement appeared the press, it is for you to veryfy the Commissioner of police reached stop after 2 hours after everything was done.

ಈ ಘಟನೆಗಳೆಲ್ಲಾ ನಗರದ ಹೃದಯ ಭಾಗದಂತಿರುವ ಜಾಗದಲ್ಲಿ ನಡೆಯುತ್ತಿವೆ. ಫ್ಯಾಮಿಲಿ ಕೋರ್ಟ್‌ನಲಿ ಆಗುತ್ತಿವೆ. I am told that the Commissioner is nothing against him. But, the quickness with which he has to act, he has not acted,

why? The S.P. would have even died if there was some more delay on the part of the Commissioner. Fortunately he has survived. What he had done was absolutely disaterous.

ನಾವೆಲ್ಲರೂ ಇದನ್ನು ಕಂಡಂ ಮಾಡಬೇಕು. ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ. ನಮ್ಮ ವಿಧಾನ ಸೌಧದಿಂದ ಕೇವಲ ಎರಡು ನಿಮಿಷದ ಹಾದಿಯ ದೂರದಷ್ಟು ಜಾಗದಲ್ಲಿ ಇಂಥ ಘಟನೆಗಳು ನಮ್ಮ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ನಡೆದಿರಬೇಕಾದರೆ ಇದರ ಬಗ್ಗೆ ಎಷ್ಟರ ಮಟ್ಟಿನ ಹತೋಟಿಯನ್ನು ಇಟ್ಟು ಕೊಳ್ಳುವುದಕ್ಕೆ ಸಾಧ್ಯವಿದೆ. ದಯವಿಟ್ಟು ಇದನ್ನು ತಾವು ವಿಚಾರ ಮಾಡಬೇಕು.

Sri J.H. Patel : Do you mean to say that he has represented the degenerated indiviousal?

Sri M. Veerappa Molly : That is what exactly.

Sri J.H. Patel : What happened in the court represented de-generated society.

Sri M.Veerappa Moily : Somashekar represented which mass? Somashekar represented himself. How can he represent degenerated mass ತಾವು ಹೇಳಿದ್ದು ನನಗೆ ಅರ್ಥವಾಯಿತು. ಕೊಲೆ ಮಾಡುವುದೂ ಕೂಡ ಅವನು ಸಮಾಜದ ಒಬ್ಬ ಪ್ರತಿನಿಧಿಯಾಗಿ, ಸಮಾಜಕ್ಕಾಗಿ ಮಾಡುತ್ತಾನೆಂದು ಹೇಳುತ್ತೀರಿ. ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. Is he representing some society where he represents to take power of attorney to kill somebody or to attack somebody.

ಶ್ರೀ ಎಂ.ಪಿ. ಪ್ರಕಾಶ್ : ಇದು ಸಹಿಸಲಾಗದಂಥ ಗುಂಪಾಗಿ ಪರಿವರ್ತನೆಗೊಳ್ಳುತ್ತದೆ. ಕಾನೂನನ್ನು ಭದ್ರವಾಗಿ ಇಟ್ಟುಕೊಳ್ಳುವುದಂಥ, ಅರ್ಥೈಸುವಂಥ ಜನಾಂಗ ಕೂಡ ಒಂದು ಗುಂಪು ಆದಾಗ ಸಮೂಹ ಸನ್ನಿದೆ ತನ್ನ ಹತೋಟಿಯನ್ನು ಕಳೆದುಕೊಳ್ಳುತ್ತದೆ.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ಪ್ರಕಾರ degenerated individual is in the Government.

ಅಂದರೆ ಅಂಥ ಎಷ್ಟು ರೀ ಜನರೇಟೆಡ್ ಇಂಡಿವಿಜುಯಲ್ಸ್ ಇದ್ದಾರೆಂಬುದನ್ನು ನೋಡಿ ಅವರನ್ನೆಲ್ಲಾ ತೆಗೆದುಹಾಕುವುದಕ್ಕೆ ಕ್ರಮ ತೆಗೆದುಕೊಂಡರೆ ಮಾತ್ರ ಇದು ಒಳ್ಳೆಯ ಸಮಾಜ ಆಗಬಹುದೆಂಬ ಅನಿಸಿಕೆ ನನ್ನದು.

Sri J.H. Patel : We will look into that.

ಶ್ರೀ ಎಂ.ವೀರಪ್ಪ ಮೊಯ್ಲಿ : ನಾನು ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ವಿವರಕ್ಕೆ ಹೋಗುತ್ತಿಲ್ಲ. ಈ ವಿಚಾರವನ್ನು ಪ್ರಥಮವಾಗಿ ಏತಕ್ಕೆ ಚರ್ಚೆ ಮಾಡಬೇಕೆಂಬ ಪ್ರಿನ್ಸಿಪಲ್ಸ್ ಬಗ್ಗೆ ನಾನು ತಮಗೆ ಮನಗಟ್ಟು ಮಾಡಿಕೊಡುತ್ತಿದ್ದೇನೆ. ಎಸ್.ಪಿ.ಯವರದ್ದು ಒಂದು ಸಮಾಚಾರವಾದರೆ, ನಮಗೆ ಇನ್ನೊಂದು ವರದಿ ಬಂದಿದೆ. ಅದು ಎಷ್ಟರ ಮಟ್ಟಿಗೆ ನಿಜವೋ ಗೊತ್ತಿಲ್ಲ. ಒಬ್ಬ ಸಚಿವರ ಕಾರು ಒಂದು ಕೊಲೆಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಿಕ್ಕಿದೆ, ಅದರಲ್ಲಿ ರಕ್ತದ ಕಲೆಗಳು ಇತ್ತು ಎಂಬ ಒಂದು ಪ್ರಸಂಗ ವರದಿಯಾಗಿದೆ. ಇದರ ಬಗ್ಗೆ ತಾವು ಇನ್ವೆಸ್ಟಿಗೇಟ್ ಮಾಡಿ ಸದನಕ್ಕೆ ಒಂದು ಹೇಳಿಕೆಯನ್ನು ಕೊಡಬೇಕಾಗುತ್ತದೆ. ನಿಮ್ಮ ರಾಜ್ಯ ಸಚಿವರೊಬ್ಬರ ಕಾರು ಕೊಲೆಗೆ ಸಂಬಂಧಪಟ್ಟಂತೆ ಸಿಕ್ಕಿಹಾಕಿಕೊಂಡಿದೆ. ಅದರಲ್ಲಿ ರಕ್ತದ ಕಲೆಗಳಿವೆ. ಕೊಲೆಗೆ ಸಂಬಂಧಪಟ್ಟಂತೆ ಆ ಕಾರನ್ನು ಉಪಯೋಗಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಬಿ.ಎಸ್. ಬಚ್ಚೇಗೌಡ : ತಾವು ಹೇಳುವುದು ಸರಿಯಲ್ಲ. ಇದನ್ನು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಹೇಳುವುದನ್ನು ಅನಂತರ ಹೇಳಿ. After all, the Government has to be transparent.

ಇದರಿಂದ ಜನರಲ್ಲಿ ವಿಶ್ವಾಸ ಬರುವುದಿಲ್ಲ. If a Minister's car is used for a murder what is the message to the commonman?

ಇದರ ಬಗ್ಗೆ ಮಂತ್ರಿಗಳು ನಿರಾಕರಣೆ ಮಾಡಿದ ಕೂಡಲೇ the police officers have given a statement that this car belongs to a minister and it has been involved. ಎಂದು ಆ ಮಂತ್ರಿ ನಿರಾಕರಣೆ ಮಾಡಿದ್ದರಿಂದ ಅದನ್ನು ನಾವು ನಿಲ್ಲಿಸುವುದಕ್ಕಾಗುವುದಿಲ್ಲ. ಇದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕಾಗುತ್ತದೆ. ಅದರ ವರದಿ ಹೊರಗೆ ಬರಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾಜಿ ಮುಖ್ಯಮಂತ್ರಿಗಳು ಡೆಫನೆಟ್ ಆಗಿ ಹೇಳುತ್ತಿದ್ದಾರೆ. ಕೊಲೆಗೆ ಮಂತ್ರಿಗಳ ಕಾರನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ಪತ್ರಿಕೆಗಳನ್ನು ಬಂದೆದೆ ಎಂದು ಕಡಾಖಂಡಿತವಾಗಿ ಹೇಳುತ್ತಿದ್ದಾರೆ. ಇದು ಸರಿಯಲ್ಲ. ಇದಕ್ಕೂ ನನಗೂ ಯಾವುದೇ ಸಂಬಂಧ ಇಲ್ಲವೆಂದು ಈಗಾಗಲೇ ಆ ಮಂತ್ರಿಗಳು ನಿರಾಕರಣೆ ಮಾಡಿದ್ದಾರೆ. ತಾವು ಅದನ್ನೇಕೆ ಓದುವುದಿಲ್ಲ. ಕೇವಲ ಒಂದನ್ನು ಮಾತ್ರ ಓದುವುದು ಸರಿಯಲ್ಲ. ಇಷ್ಟೊಂದು ಅಗ್ರೆಸಿವ್ ಆಗಿ ತಾವು ಚಾರ್ಜ್ ಮಾಡುವುದು ಸರಿಯಲ್ಲ.ಅದು ಧರ್ಮವೂ ಅಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಎಂ.ವೀರಪ್ಪಮೊಯಿಲಿ : ಇದು ಅಗ್ರೆಸಿವ್ ಪ್ರಶ್ನೆ ಅಲ್ಲ. ಈ ಕಾನೂನು ಸುವ್ಯವಸ್ಥೆಯ ಬಗ್ಗೆ ಸಾರ್ವಜನಿಕರ ಮನಸ್ಸಿನಲ್ಲಿ ಬರಬಹುದಾದ ಶಂಕೆಗಳು. ಏಕೆಂದರೆ ಪೋಲೀಸ್ ಅಧಿಕಾರಿಗಳೇ ಅವರ ಹೇಳಿಕೆಯಲ್ಲಿ ಹೇಳಿದ್ದಾರೆ. ಈ ಕಾರು ಒಬ್ಬ ಸಚಿವರಿಗೆ ಸಂಬಂಧಪಟ್ಟಿದ್ದು ಎಂದು. ಆ ಕಾರಿನ ನಂಬರ್‌ನ್ನು ಹೇಳಿದ್ದಾರೆ. ಆ ಕಾರು ಯಾರದ್ದು ಆ ಮಂತ್ರಿಗಳೂ ಕೂಡ ತಮ್ಮ ನಿರಾಕರಣೆಯನ್ನು ತಿಳಿಸಿದ್ದಾರೆ. ಅದನ್ನೂ ನಾನು ಓದಿದ್ದೇನೆ. ಆದರೆ ಅಷ್ಟು ಸಾಲದು. ಇದರ ಬಗ್ಗೆ ಕೂಲಂಕಷವಾದ, ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕಾಗುತ್ತದೆ. ಪೋಲೀಸ್ ಹೇಳಿಕೆಯನ್ನು ನಂಬಬಾರದು, ಮಂತ್ರಿಗಳ ನಿರಾಕರಣೆಯನ್ನು ನಂಬಬೇಕೆಂದು ತಾವು ಹೇಳುವುದಾದರೆ, ತಾವೇ ಒಂದು ವೇಳೆ ಈ ವಿರೋಧಪಕ್ಷದ ಸ್ಥಾನದಲ್ಲಿ ಇದ್ದಿದ್ದರೆ ಇದನ್ನು ತಾವು ನಂಬುತ್ತಿದ್ದಿರಾ? ನೀವೇ ಹೇಳಿ. ಇದರ ಬಗ್ಗೆ ಸರಿಯಾದಂಥ ತನಿಖೆಯಾಗಿ, ಈ ಆರೋಪ ಸರಿಯಾದುದಲ್ಲ ಎಂದು ಹೇಳುವಂಥ ಒಂದು transparency in the administration will have to be there. ಇದು ಜನರ ಮನಸ್ಸಿನಲ್ಲಿ ನಿಂತು ಹೋಗಿದೆ. ಇದು ಅವರ ಮನಸ್ಸಿನಲ್ಲಿ ನಿಲ್ಲಬಾರದು.

ಸಚಿವರು ನಿರಪರಾಧಿಯಾಗಿದ್ದರೆ ಅವರ ಹೆಸರಿಗೆ ಮಸಿ ಬಳಿಯತಕ್ಕ ಪ್ರಯತ್ನ ಆಗಬಾರದು. ಆದರೆ ಜನರು ಇವತ್ತು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದಾರೆ. ಜನರ ಮನಸ್ಸಿನಲ್ಲಿ ಈ ಶಂಕೆ ಇದೆ. ಅದು ಹೋಗಬೇಕಾದ ಅವಶ್ಯಕತೆ ಇಲ್ಲ, ಮೊಯಿಲಿಯವರೇ ನೀವು ಇದಕ್ಕೆಲ್ಲಾ ಗಮನ ಕೊಡಬೇಡಿ ಎಂದು ಹೇಳುವುದಾದರೆ ನಾನು ಸುಮ್ಮನೆ ಕುಳಿತುಬಿಡುತ್ತೇನೆ. ಜನರ ಮನಸ್ಸಿನಲ್ಲಿ ಏನು ನಿಲ್ಲುತ್ತದೆಯೋ ನಿಂತುಕೊಳ್ಳಲಿ. ನಾವು ನೋಡಿಕೊಳ್ಳುತ್ತೇವೆಂಬ ಧಾಟಿ ನಿಮ್ಮದಾಗಿದ್ದರೆ ನಮ್ಮದೇನೂ ಅಡ್ಡಿ ಇಲ್ಲ. ಅದು ಪ್ರತ್ಯೇಕ ಆದರೆ ಅದರ ಒಟ್ಟು ಪ್ರಮಾಣದ ಪರಿಣಾಮ ಈ ಸಮಾಜದ ಮೇಲೆ ಆಗುತ್ತದೆ. ಈ ಎಲ್ಲಾ ಘಟನೆಗಳ ಒಟ್ಟು ಇಂಪ್ಯಾಕ್ಟ್ ಏನಿದೆ ಅದು ಕ್ರಿಮಿನಲ್‌ಮೈಂಡೆಡ್ ಜನರ ಮೇಲೆ ಆಗುತ್ತದೆ. ಅವರು ಕಾನೂನನ್ನು ತಮ್ಮ

ಕೈಗೆ ತೆಗೆದುಕೊಳ್ಳುತ್ತಾರೆ. ಇದನ್ನು ಮರೆಯಬೇಡಿ. ಈಗ ಮತ್ತೊಂದು ಹೇಳಿಕೆ ಬಂತು. ನಾನು ಮಂತ್ರಿಗಳ ಹೆಸರನ್ನು ಹೇಳುತ್ತೇನೆಂದು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ, ಕ್ಷಮಿಸಬೇಕು. ಒಬ್ಬ ಮಂತ್ರಿ ಹೇಳಿದರು, ನಾನು ಹಿಂದೆ ಸಬ್ ಇನ್‌ಸ್ಪೆಕ್ಟರ್ ಆಗಿದ್ದೆ. ಆಗ ಒಂದು ಸಂದರ್ಭದಲ್ಲಿ ಎಸ್.ಪಿ.ಯವರಿಗೇ ಪಿಸ್ತೂಲನ್ನು ಹಿಡಿದೆ ಎಂದು Let that Minitster at least for the sake of charity let him issue a statement saying that I have not given that statment. If that is the case I would not have raised this issue. Even till today he has not denied it.

ಡಿ.ಸಿ.ಯವರಿಗೆ ಏನೋ ಒಂದು ಮಾತನ್ನು ಹೇಳಿದರೆಂದು. ಸಿದ್ಧರಾಮಯ್ಯನವರ ಮಧ್ಯಸ್ಥಿಕೆಯಿಂದ ಡಿ.ಸಿ.ಯವರಿಗೂ ಅವರಿಗೂ ಒಂದು ರೀತಿಯ ರಾಜಿಯಾಯಿತಂತೆ, ಸಂತೋಷ ಆದರೆ ಪ್ರಶ್ನೆ ಏನೆಂದರೆ ಇದು ಇವತ್ತು ಉಳಿದಿದೆ. ಜನರು ಇವತ್ತು ಮಾತನಾಡುತ್ತಾರೆ. ರಾಜಿ ಆಯಿತು. ಎಂದು ಅವರಿಗೆ ಸಂತೋಷವಾಗಿದೆ. ನಿಮಗೆ ಸಂತೋಷವಾಗಿದೆ, ಈಗ ಆ ಪ್ರಶ್ನೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ದೇಶಪಾಂಡೆಯವರು ಹೇಳಿದರು ನಮ್ಮ ಸರ್ಕಾರದಲ್ಲಿರತಕ್ಕ ಮಂತ್ರಿಗಳು ಬಹಳ ಫ್ರಾಂಕ್ ಇದ್ದಾರೆ ಎಂದು. ಏಕೆಂದರೆ ನಭಿಯವರು ಹಾಗೆ ಹೇಳಿದರು. ಜಯಕುಮಾರ್ ಅವರು ಈ ರೀತಿ ಹೇಳಿದರು. ಇನ್ನೊಬ್ಬರು ಮತ್ತೊಂದು ರೀತಿ, ಎಲ್ಲರೂ ಫ್ರಾಂಕ್ ಆಗಿ ಹೇಳುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ನಾಲ್ಕು ಜನ ಮಂತ್ರಿಗಳನ್ನು ಗೋಳು ಹೋಯ್ದುಕೊಳ್ಳುತ್ತಿದ್ದೀರಲ್ಲ.

ಶ್ರೀ ಎಂ.ವೀರಪ್ಪಮೊಯಿಲಿ : ಅವರೇ ಸರ್ಕಾರವನ್ನು ನಿಭಾಯಿಸಿಕೊಂಡು ಹೊಗತಕ್ಕ ಉಸ್ತುವಾರಿ ತೆಗೆದುಕೊಂಡಿದ್ದರು. ನಾವು ಉಸ್ತುವಾರಿ ನೋಡಿಕೊಂಡು ಮಾಡಿ ಎಂದು ಹೇಳುತ್ತಾರೆ. ಏನೇ ಆಗಲಿ, ಚರ್ಚೆಯಲ್ಲಿ ಗಂಭೀರತೆ ಬೇಕು. ಇವತ್ತಿಗೂ ಕೂಡ ಇವರು ಡಿನೇ ಮಾಡಲಿಲ್ಲ. I have not given that statement ಎಂದು ಆ ಮಂತ್ರಿಗಳಿಗೆ ಕರೆದು ಈ ರೀತಿ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿ.

Atleast let him repent for what he has done. This is not the way to handle. ಇನ್ನೊಬ್ಬ ಸಬ್‌ಇನ್ಸಪೆಕ್ಟರ್ ಈಗ ಎಸ್.ಪಿ.ಗೆ ಹೇಳುತ್ತಾರೆ, ನಿಮ್ಮ ಮಂತ್ರಿಗಳು ಹೇಳಿದ್ದಾರೆ, ನಾನು ಒಂದು ಪಿಸ್ತೂಲ್ ತೋರಿಸುತ್ತೇನೆ ಎಂದು. ಆ ಸಬ್ ಇನ್ಸ್‌ಪೆಕ್ಟರ್ ಮಾಡಿದರೆ ಏನು ಗತಿ? ಮಂತ್ರಿಗಳು ಮಾಡಬಹುದು. ನಾನು ಸಬ್ ಇನ್ಸ್‌ಪೆಕ್ಟರ್ ಮಾಡಬಾರದು ಎಂದು ಹೇಳಿದರೆ? ಅಥವಾ ಅಲ್ಲಿ ಹೆಡ್‌ಕಾನ್‌ಸ್ಟೇಬಲ್ ಪಿ.ಸಿ. ಗನ್ ತೆಗೆದು ನಾನು ಸಬ್‌ಇನ್ಸಪೆಟರ್‌ಗೆ ಹೊಡೆಯುತ್ತೇನೆಂದು ಹೇಳಿದರೆ?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಬಹಳ ಡೀಟೈಲ್ಸ್‌ಗೆ ಹೋಗಿರುವುದರಿಂದ ನಾನು ಹೇಳಬಾರದೆಂದು ಇದ್ದೆ. ಮಾನ್ಯ ನಂಜೇಗೌಡರು ಹೇಳಿದ ಹಾಗೆ ಮಾನ್ಯ ಮಂತ್ರಿಗಳು ಪೊಲೀಸರ ಮೇಲೆ ಹೇಳಿಕೆ ಕೊಡುವುದು ಶಿಷ್ಟಾಚಾರ ಅಲ್ಲ. ಆದರೂ ಹೇಳಿದ್ದಾರೆ. ಏಕೆಂದರೆ ನಮ್ಮವರು ಸೂಟ್ ಮಾಡಿ ಮಾಡಿಲ್ಲವೆಂದು ಹೇಳುವ ಮಂತ್ರಿಗಳು ಅಲ್ಲ. ನಮ್ಮ ಪೊಲೀಸರು ನಮ್ಮನ್ನು ಹೊಡೆದರು ಎಂದು ನಿಜವಾಗಿ ಹೇಳಬಾರದು. ಆದರೆ ಗೊತ್ತಿಲ್ಲ, ನಮ್ಮ ನಾಯಿ ನಮಗೇ ಕಚ್ಚಿತು ಎಂದು ಹೇಳುತ್ತಾರೆ. ನಾಯಿ ಸಾಕಿದ್ದು

ನಾವೇ. ಕೆಲವು ಸಾರಿ ನಮ್ಮ ನಾಯಿ ನಮಗೇ ಕಚ್ಚುತ್ತದೆ. ನಿಮಗೂ ಬಹಳ ಕಚ್ಚಿದ್ದಾವೆ. ಜನ ಏನು ಹೇಳುತ್ತಾರೆ?

ಶ್ರೀ ಎಂ.ವೀರಪ್ಪ ಮೊಯಿಲಿ : ಮಾನ್ಯ ಪಟೇಲರು ತಮಾಷೆಗೆ ಹೇಳಿದ್ದಾರೆ. ಪೊಲೀಸರೇ ನಾಯಿಗಳು ಎಂದು ಅರ್ಥ ಮಾತ್ರ ಕೊಡಬೇಡಿ. ಪೊಲೀಸರು ನಾವು ಸಾಕಿದ ನಾಯಿಗಳು ಎಂದು ಹೇಳತಕ್ಕದ್ದು ಬಹುಶಃ ಸರಿಯಲ್ಲ I hope you don't mean that.

ಶ್ರೀ ಜೆ.ಹೆಚ್. ಪಟೇಲ್ : ಪೊಲೀಸರಿಗೆ ಹೋಲಿಸಲಿಲ್ಲ ನಾನು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಯಿಗಳಿಗೆ ಹೋಲಿಸಿ ಅಗೌರವ ಮಾಡಬೇಡಿ.

ಶ್ರೀ ಜೆ.ಹೆಚ್. ಪಟೇಲ್ : ಇಲ್ಲ ಇಲ್ಲ ನಾಯಿಗಳಿಗೆ ಹೋಲಿಸಲಿಲ್ಲ. ನಾನು ಗಾದೆ ಮಾತು ಹೇಳಿದೆ, ನಮ್ಮ ನಾಯಿಗಳು ನಮಗೆ ಕಚ್ಚುತ್ತವೆ ಎಂದು.

(ನಗು)

ಶ್ರೀ ವಾಟಾಳ್ ನಾಗರಾಜ್ : ತಾವು ಇದನ್ನು ನಗುಸಾರವಾಗಿ ತೆಗೆದುಕೊಳ್ಳತಕ್ಕದ್ದು ಅಲ್ಲ. ನಾಯಿಗಳು ನಿಮ್ಮಲ್ಲಿ ಇವೆಯೋ ನೀವು ಹೇಳಿದ ಪ್ರಕಾರ ಒಪ್ಪಿದ ಹಾಗೆ ಆಯಿತು.

ಶ್ರೀ ಹೆಚ್. ಪಟೇಲ್ : ವಾಚ್ ಡಾಗ್.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ : ನಮಗೆ ಕೆಲವು ಕಡೆ ವರ್ತಮಾನ ಬಂದ ಹಾಗೆ ಎಲ್ಲೋ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಕಾಂಗ್ರೆಸ್‌ನವರು ಇರುವಾಗ ಏನೋ ಮಾಡಿದ್ದಾರೆ, ಆದುದರಿಂದ ಇವತ್ತು ರಕ್ತ ಕಾರಿಸಿಬಿಡಿ ಎಂದು ಹೇಳತಕ್ಕ ಮಾತನ್ನು ಅಧಿಕಾರದಲ್ಲಿದ್ದಂಥ ಜನ ಹೇಳಿದರೆ, ಆ ಪೊಲೀಸರು ಏನು ಮಾಡುತ್ತಾರೆ ಆ ಭಾಷೆ ಹೇಳಬಾರದು? ಕಾಂಗ್ರೆಸ್‌ನವರು ಇರುವಾಗ ನಮ್ಮನ್ನು ಏನೋ ಈ ತರಹ ಮಾಡಿದರು ಆದರೆ ಈಗ ನಾವು ಅವರ ರಕ್ತ ಕಾರಿಸುತ್ತೇವೆ ಎಂದು ಹೇಳಬಾರದು. ಇಂಥ ಮಾತುಗಳನ್ನು ಅದು ಕೂಡ ಪೊಲೀಸ್ ಅಧಿಕಾರಿಗಳಿಗೆ ನೀವು ಹೇಳಿದರೆ ಆ ಪೊಲೀಸ್ ಅಧಿಕಾರಿಗಳು ಏನು ಮಾಡುತ್ತಾರೆ? ಹೌದು ನಮಗೆ ಶಕ್ತಿ ಇದೆ, ರಾಜಕೀಯ ಶಕ್ತಿ ನಮ್ಮ ಬೆನ್ನ ಹಿಂದೆ ಇದೆ ಎಂದು ಇನ್ನೂ ಹಿಂಸೆ ಮಾಡುತ್ತಾರೆ. ಇವತ್ತು ಇನ್ನೂ ಗೊಂದಲವಾಗುತ್ತದೆ. ಇಂಥ ಕೆಲವು ಪ್ರಕರಣಗಳು ಇವತ್ತು ನಡೆದಿದೆ. ಇವತ್ತು ಅದನ್ನು ನಿಲ್ಲಿಸತಕ್ಕ ಒಂದು ಪ್ರಯತ್ನ ಅಧಿಕಾರದಲ್ಲಿ ತಾವು ಯಾರಿರುತ್ತೀರಿ ತಮ್ಮ ಮಾತುಕತೆಗಳಲ್ಲಿ, ತಮ್ಮ ಕೃತಿಗಳಲ್ಲಿ ಬರಬೇಕು, ನಾವು ಅದಕ್ಕೆ ಜುಡಿಸಿಯಲ್ ಎನ್‌ಕ್ವೈರಿ ಮಾಡಿದ್ದೇವೆ. ತಾವು ಏನು ಹೇಳುತ್ತೀರಿ ಅದು ಕುಣಿಗಲ್‌ನಲ್ಲಿ ನಡೆದಂಥ ಪ್ರಕರಣ. ಅದರ ಬಗ್ಗೆ ನಾವು ಜುಡಿಶಿಯಲ್ ಎನ್‌ಕ್ವೈರಿ ಮಾಡಿದ್ದೇವೆ. ಅದನ್ನು ಅಡಗಿಸತಕ್ಕ ಪ್ರಯತ್ನ ಸಪ್ರೆಸ್ ಮಾಡತಕ್ಕ ಪ್ರಯತ್ನವನ್ನು ನಾವು ಎಂದೂ ಮಾಡಿಲ್ಲ. ತಾವು ಜುಡಿಶಿಯಲ್ ಎನ್‌ಕ್ವೈರಿ ಮಾಡುತ್ತೀರೋ ಅಥವಾ ಬೇರೆ ಯಾವುದು ಮಾಡುತ್ತೀರೋ ತಮ್ಮ ವಿಧಾನಕ್ಕೆ ಬಿಡುತ್ತೇನೆ. ಆ ವಿಧಾನಗಳ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಏಕೆಂದರೆ Sometimes it is too early to judge your act as a Government.

ನೋಡೋಣ. ಆದರೆ ಇವತ್ತು 3 ತಿಂಗಳುಗಳಿಂದ ನಡೆದುಕೊಂಡು ಬಂದ ವಿಧಾನ ಏನಿದೆ ಅದು ನಿಮಗೆ ಶೋಭೆ ತರುವುದಿಲ್ಲ. ಈತರಹ ಕ್ರಮದಲ್ಲಿ ತಾವು ಆಡಳಿತ ಮಾಡಿದರೆ ಖಂಡಿತವಾಗಿ ಕರ್ನಾಟಕ ರಾಜ್ಯದ ಕಾನೂನು ವ್ಯವಸ್ಥೆ

ಸಂಪೂರ್ಣವಾಗಿ ಕುಸಿದು ಹೋಗುತ್ತದೆ. ಜನಗಳು ಬೇರೆ ಬೇರೆ ಕ್ಷೇತ್ರದಲ್ಲಿ ಬರುತ್ತಾರೆ. ಮುಂದೆ ಸ್ಟೂಡೆಂಟ್ ಪಾಪ್ಯುಲೇಷನ್‌ನಲ್ಲಿ ಬರುತ್ತದೆ. ಇಂಡಸ್ಟ್ರಿಯಲ್ ವರ್ಕರ್ಸ್ ಮೇಲೆ ಬರುತ್ತದೆ. ಇದು ಸಾರ್ವತ್ರಿಕವಾದ ಒಂದು ಸಾಂಕ್ರಾಮಿಕ ರೋಗ. ದಯವಿಟ್ಟು ತಾವು ತಿಳಿದುಕೊಳ್ಳಬೇಕಾಗುತ್ತದೆ, ಇದೊಂದು ರೀತಿಯ ಸಾಂಕ್ರಾಮಿಕ ರೋಗ. ಇದು ಇಡೀ ಸಮಾಜವನ್ನೇ, ರಾಜ್ಯವನ್ನೇ ಬಲಿ ತೆಗೆದುಕೊಳ್ಳಬಹುದು. ಇದಕ್ಕಿಂತ ದೊಡ್ಡ ಸಾಂಕ್ರಾಮಿಕ ರೋಗ ಇಲ್ಲ. ನಾನು ಇದನ್ನು ಪುನರುಚ್ಚಾರ ಮಾಡುವುದಕ್ಕೆ ಅಪೇಕ್ಷೆ ಇಲ್ಲದಿದ್ದರೂ ಒಂದನ್ನು we have to demand as an Opposition Party, ಏಕೆಂದರೆ ತಮ್ಮ ನಾಯಕನ ಆಯ್ಕೆಯಾಗುವಾಗ ವಿಧಾನಸೌಧದಲ್ಲಿ ಏನು ದಾಂದಲೆ ಆಯಿತು, ಇದರ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಸಾಕಷ್ಟು ಮಾತನಾಡಿದ್ದೇವೆ. ಫ್ಲಾಗ್ ಪೋಸ್ಟ್‌ಗೆ ಏರಿ ಅಲ್ಲಿ ಜನತಾ ದಳದ ಬಾವುಟ ಹಾರಿಸತಕ್ಕ ಪ್ರಯತ್ನ ನಡೆಯಿತು. ಮೆಯಿನ್ ಟೆನಲ್ ಒಡೆದಂಥ ಪ್ರಯತ್ನ, ಸೀಟುಗಳನ್ನು ಒಡೆದಂಥ ಪ್ರಯತ್ನ ಮತ್ತು ಏನು ದಾಂದಲೆ ಆ ದಿವಸ ಏನು ಆಯಿತು; ದೇಶಪಾಂಡೆಯವರ ಮೇಲೆ ಆದಂಥದ್ದು, ಹೆಗಡೆಯವರ ಮೇಲೆ ಆದಂಥ ದಾಂದಲೆ ಏನಿದೆ ಅದರ ವಿವರಕ್ಕೆ ನಾನು ಈಗ ಹೋಗುವುದಿಲ್ಲ. ಅದರ ಬಗ್ಗೆ ತಾವು ಪೋಲೀಸ್ ಕಮಿಷನರ್ ವರದಿ ತರಿಸಿದ್ದಿರಿ. ಆ ವರದಿಯನ್ನು ದಯಮಾಡಿ, You have to place it before the House.

ಆ ಪೋಲೀಸ್‌ಕಮಿಷನರ್ ಕೊಟ್ಟ ವರದಿ ಏನು? ಏಕೆಂದರೆ ತಾವು ಪೋಲೀಸ್‌ಕಮಿಷನರ್ ಅವರನ್ನು ವರ್ಗ ಮಾಡಿದ್ದೀರಿ. ಇದರಿಂದಾಗಿ ಇದಕ್ಕೆ ಪ್ರಾಮುಖ್ಯತೆ ಬರುತ್ತದೆಂದು ತಾವು ಆ ವರದಿಯನ್ನು ಸಭೆಯ ಮುಂದಿಡಬೇಕೆಂದು ಹೇಳುತ್ತೇನೆ. ಏಕೆಂದರೆ ಅದು ಈ ಕ್ರಿಮಿನಲ್‌ಕಲ್ಚರ್‌ಗೆ ಇದು ಮೂಲ ಫೌಂಟನ್ ಆಗಿದೆ. ಮೂಲ ಕಾರಂಜಿ ಆಗಿದೆ. ಆ ಮೂಲ ಕಾರಂಜಿಯನ್ನು ಕಿತ್ತು ಹಾಕಬೇಕು. ಇವತ್ತು ಜನರ ಮನಸ್ಸಿನಲ್ಲಿರತಕ್ಕ ಅನುಮಾನಗಳನ್ನು, ಶಂಕೆಗಳನ್ನು ಹೋಗಲಾಡಿಸಬೇಕಾಗಿದೆ. ಆ ದಿವಸ ಯಾರು ದಾಂದಲೆ ಮಾಡಿದ್ದಾರೆ, ಏಕೆ ಮಾಡಿದ್ದಾರೆ ಎಂಬುದು ನಮಗೆ ಗೊತ್ತಾಗಬೇಕು. ಇವತ್ತು ಪೋಲೀಸ್‌ಕಮಿಷನರ್‌ರವರಿಂದ ಏನು ವರದಿ ಬಂದಿದೆ, ಡಿಜಿಪಿ. ಅವರಿಂದ ಏನು ವರದಿ ಬಂದಿದೆ ಅದನ್ನು ತಾವು ದಯವಿಟ್ಟು ಸದನದ ಮುಂದೆ ಇಡಬೇಕು. ಮೊದಲು ಆ ವರದಿಯನ್ನು ಇಡಿ, ಅದರ ಮೇಲೆ ಏನು ಮಾಡಬೇಕೆಂದು ನಾವು ಸಲಹೆ ಮಾಡುತ್ತೇವೆ. I demand it before the House that report. It is the question of law and order which has collapsed on that day.

ಶ್ರೀ ಜೆ.ಹೆಚ್. ಪಟೇಲ್ : ದಯವಿಟ್ಟು ಕೇಳಿ, ನೀವು ನಿಲುವಳಿ ಸೂಚನೆಯ ಮೇಲೆ ವಾದ ಮಾಡಿದ್ದೀರಿ. ಅದು ಈಗ ನಡೆದಿದೆ. ಮಾನ್ಯ ಮುಖ್ಯ ಮಂತ್ರಿಗಳು ಆಗಲೇ ವಿಷಯವನ್ನು ಪ್ರಸ್ತಾಪ ಮಾಡಿ ತಾವೇ ಪಬ್ಲಿಕ್‌ಗೆ ಅಪಾಲಜಿ ಕೇಳಿಕೊಂಡು ಲಾ ಅಂಡ್ ಆರ್ಡರ್ ಕುಸಿಯಬಾರದಿತ್ತು ಎಂದು ಹೇಳಿದ್ದಾರೆ. ನಾವು ಈ ಸರ್ಕಾರ ಬರುವುದಕ್ಕೆ ಮುಂಚೆ ಇವರು ಎಷ್ಟು ಕೆಡಿಸಿದ್ದರು ಎಂಬುದಕ್ಕೆ ಅಂಥ ವಾತವರಣಗಳು ಇದ್ದವು. ಈಗ ನಾವು ಸರಿ ಮಾಡುತ್ತಿದ್ದೇವೆ. ಒಂದೊಂದೇ ರಿಪೇರಿ ಮಾಡಬೇಕು. ರಿಪೇರಿ ಮಾಡಬೇಕಾದರೆ ಹಿಂದೆ ಕೆಡಿಸಿದ್ದು ಎಷ್ಟು ಎಂದು ಹೇಳುವುದಿಲ್ಲ. ಈಗ ಜುಡಿಶಿಯಲ್ ಎನ್‌ಕ್ವೈರಿ ಮಾಡಿ ಎನ್ನುತ್ತಾರೆ. ಯಾವ ಎನ್‌ಕ್ವೈರಿ ಬೇಡ ಏನೂ ಬೇಡ. ಮೊದಲು ಎಷ್ಟು ಕೆಡಿಸಿದ್ದರು ಎಂದು ನಾವು ಬಿಚ್ಚೆ ಬಿಟ್ಟರೆ ಸಾಕು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ನಾವು ಕೆಡಿಸಿದ್ದೇವೋ ಅಥವಾ 3 ತಿಂಗಳಲ್ಲಿ ಇವರು ಕೆಡಿಸಿದ್ದಾರೋ ಎಂಬುದನ್ನು ಜನರು ನೋಡುತ್ತಾರೆ. (ಗೊಂದಲ) 3

ತಿಂಗಳಿನಿಂದ ಕಾನೂನಿನ ಒಂದು ಕುಸಿತ ಏನಾಗಿದೆ ಅದಕ್ಕೆ ಸಂಪೂರ್ಣವಾದ ಆಶೀರ್ವಾದ ನಿಮ್ಮದು ಇದೆ ಎಂದು ನಾವು ಜನರಿಗೆ ಹೇಳಬೇಕಾಗುತ್ತದೆ. ಇದನ್ನು ಸರಿ ಪಡಿಸಲಿಕ್ಕೆ ನೀವು ತಯಾರಿಲ್ಲ. ಇದೇ ನಮ್ಮ ಮರ್ಜಿ. ಅದೇ ರೀತಿ ನಾವು ನಡೆಯುತ್ತೇವೆಂದು ಹೇಳತಕ್ಕ ರಾಜಕೀಯ ಧೋರಣೆ ಏನಿದೆ I accuse you that you are responsible for all those happenings within these three months. I am accusing you.

ಅದನ್ನು ಹೇಗೆ ಅಡಗಿಸುತ್ತೀರಿ? The matter is not closed. Place the reports of the Police Commissioner and the DGP on the table of this House. Come out. We believe you.

ತಾವು ನಿಜವಾಗಿ ಸತ್ಯವಂತರಾಗಿದ್ದರೆ, ತಮ್ಮದು ಏನೂ ಕೈವಾಡ ಇಲ್ಲದಿದ್ದರೆ ತಾವು ನೇರವಾದ ಮನಸ್ಸಿನ ಮತ್ತು ಕೃತಿಯ ಜನರಾದರೆ Place those reports before this House.

(Interruption)

Sri M. Veerappa Moily : I have not yielded. Those reports will have to be placed this House. ಬಹುಶಃ ವರದಿ ಬಂದಮೇಲೆ ಕೂಡ ಜನರು ನಿಮ್ಮನ್ನು ನಂಬಿದರೆ, ಅದು ಪ್ರತ್ಯೇಕ. ಜನರು ಹೇಗೆ ನಂಬುತ್ತಾರೆ ಬಿಡುತ್ತಾರೆ ಅದು ಬೇರೆ. ಮಾನ್ಯ ರಾಜ್ಯಪಾಲರ ರಿಪೋರ್ಟ್ ಬರುತ್ತದೆ, ಆಗ ನಾವು ಸಾಕಷ್ಟು ವಿವರವಾಗಿದೆ ಹೇಳುತ್ತೇನೆ.

6.10 ಪಿ.ಎಂ.

ಈಗ ನಮಗೆ ಗೊತ್ತಿದೆ. ನಿಮ್ಮ ಸರ್ಕಾರದ ಈ ಕಾನೂನು ವ್ಯವಸ್ಥೆಯನ್ನೇ ಸರಿಯಾದ ವ್ಯವಸ್ಥೆ ಎಂದು ಹೇಳತಕ್ಕ ಉದ್ಧಟತನ ತಮ್ಮಲ್ಲಿದ್ದರೆ we have no words to add. We have to take the issue to the people and not in this House.

ಈ ಸದನ ಏತಕ್ಕೆ? ಸಮರ್ಪಕವಾಗಿ ಉತ್ತರ ಕೊಡುತ್ತೀರಿ, ಇವತ್ತು ಸದನವನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳುತ್ತೀರಿ, ಇಡೀ ಕರ್ನಾಟಕದಲ್ಲಿ ಶಾಂತಿ ನೆಮ್ಮದಿ ಏರ್ಪಾಡು ಮಾಡತಕ್ಕ ದೃಷ್ಟಿಯಲ್ಲಿ ನಾವು ಜೊತೆಯಲ್ಲಿ ಹೋಗೋಣ ಎಂಬ ಸದ್ಭಾವನೆ ತಮ್ಮಲ್ಲಿ ಇಲ್ಲದಿದ್ದರೆ, ಸದ್ಭಾವನೆ ಬದಲು ಉದ್ಧಟತನವನ್ನೇ ತಾವು ಮುಂದುವರೆಸಿಕೊಂಡು ಹೋಗತಕ್ಕ ಒಂದು ಕಾರ್ಯತಂತ್ರ, ಶೈಲಿ ತಮ್ಮದಾದರೆ, we cannot tell you anything. ನಾವು ತಮಗೆ ಹೇಳಬೇಕಾದುದು ಏನೂ ಇಲ್ಲ. ಏಕೆಂದರೆ ತಾವು ಬ್ರಹಸ್ಪರೂಪರು. ತಮಗೆಲ್ಲಾ ಗೊತ್ತಿದೆ. ತಾವು ಮಾಡತಕ್ಕದ್ದೆಲ್ಲಾ ಬೃಹಸ್ಪತಿ ಕೆಲಸಗಳು ಎಂದು ಹೇಳತಕ್ಕ ಸರ್ಟಿಫಿಕೇಟ್ ಜನತೆ ಕೊಟ್ಟಿದ್ದಾರೆ. ಆದ್ದರಿಂದ ನಾವು ಇನ್ನೂ ಹೆಚ್ಚು ಉದ್ಧಟತನದಿಂದ ನಡೆಯಲಿಕ್ಕೆ ಸಾಧ್ಯ ಇದೆ ಎಂಬ ವಿಚಾರ ತಮ್ಮಲ್ಲಿದ್ದರೆ, ನಿಮಗೆ ಹೇಳಲಿಕ್ಕೆ ನಾವು ಅನರ್ಹರು, ಮತ್ತೆ ಕೇಳಿಸಿಕೊಳ್ಳತಕ್ಕ ಅರ್ಹತೆ ಕೂಡ ನಿಮಗಿಲ್ಲ ಎಂದು ನಾವು ಖಂಡಿತವಾಗಿ ತಿಳಿದುಕೊಳ್ಳಬೇಕು. ಇವತ್ತು ಒಂದು ಮಾತು. ನಿನ್ನೆ ಸಚಿವರ ಹೇಳಿಕೆ ಬಂದಿದೆ. ಕೂಡ್ಲಿಗಿಯಲ್ಲಿ ಇಂಥ ಘಟನೆ ನಡೆದಿದೆ ಎಂದು. ಎಸ್.ಪಿ.ಯವರನ್ನು ಸಸ್ಪೆಂಡ್ ಮಾಡಿ ಅಥವಾ ಪೋಲೀಸ್‌ವ್ಯವಸ್ಥೆ ಅಲ್ಲೋ ಕುಸಿದಿದ್ದರೆ ತಾವು ಅದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಿ. ಆದರೆ ಇವತ್ತು ಕಾನೂನಿನ ವ್ಯವಸ್ಥೆಯನ್ನು ಸರಿಯಾಗಿ ಅಥವಾ ನಿಮಗೆ ಅನುಕೂಲವಾಗಲಿಲ್ಲ ನಿಷ್ಪಕ್ಷಪಾತವಾಗಿ ಮಾಡಿದ್ದಾರೆ, ಆದ ಕಾರಣದಿಂದ ಎಸ್.ಪಿ.ಯವರನ್ನು ಸಸ್ಪೆಂಡ್ ಮಾಡಬೇಕು ಎಂಬ ದೌಷ್ಟ್ಯಕ್ಕೆ ತಾವು ಹೋದರೆ ಬಹುಶಃ ಇದು ಶುಭಸೂಚನೆಯಲ್ಲ. ಒಂದು ರೀತಿಯ

ಭಯ. ರಾಮಕೃಷ್ಣ ಅವರೆ, ತಾವು ಆಡಳಿತದಲ್ಲಿದ್ದಿರಿ. This is only to bulldoze the Police Force and to make them act according to your tunes and dance to your tunes and then only you will be happyË ಎಂಬ ಒಂದು ಮೆಸೇಜನ್ನು ಸನ್ಮಾನ್ಯ ಸಚಿವರ ಹೇಳಿಕೆಯಿಂದ ಇವತ್ತು ಹೊರಗೆ ಬರುತ್ತಿದೆ.

That will be disastrous for the maintenance of law and order situation. ಎಂಬುದನ್ನು ನಾನು ಹೇಳಬೇಕಾಗುತ್ತದೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಗಹನವಾದ, ಗಂಭೀರವಾದ ವಿಚಾರ, ಬಾಕಿ ವಿಚಾರಗಳು ಯಾವುದೂ ಗಹನ ಅಲ್ಲ, ಇದು ಪ್ರಾಮುಖ್ಯ. ಇದರ ಬಗ್ಗೆ ವಿಸ್ತಾರವಾದ ಚರ್ಚೆಗೆ ಇವತ್ತು ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ಇಷ್ಟು ಸಮಯ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವೀರಪ್ಪ ಮೊಯಿಲಿಯವರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದರು. ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು. ಒಳ್ಳೆಯ ಸಂಸ್ಕೃತಿಯಿಂದ ರಾಜಕಾರಣ ಮಾಡಿಕೊಂಡು ಬಂದವರು. ಅವರ ಬಗ್ಗೆ ನನಗೆ ಅತ್ಯಂತ ಗೌರವವಿದೆ. ಈ ರಾಜಕೀಯ ಅಧಿಕಾರ ಹಸ್ತಾಂತರ ಆಗತಕ್ಕ ಕಾಲದಲ್ಲಿ ನಡೆದಂಥ ಗಲಾಟೆಗಳಲ್ಲಿ ಒಂದನ್ನು ತಾವು ಪ್ರಸ್ತಾಪ ಮಾಡಿದಿರಿ. ಈಗಿನ ಮುಖ್ಯಮಂತ್ರಿಗಳು ಅಧಿಕಾರ ಸ್ವೀಕಾರ ಮಾಡುವಾಗ ವಿಧಾನಸೌಧದಲ್ಲಿ ದಾಂದಲೆ ಆಯಿತು. ಅದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ತಾವು ಹೇಳಿದಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಕೇಳಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ನೀವು ಕೇಳಲಿಲ್ಲ್. ಎನ್‌ಕ್ವೈರಿ ರಿಪೋರ್ಟ್ ಇಡಬೇಕೆಂದು ಹೇಳಿದಿರಿ. ನಾನು ತಮ್ಮನ್ನು ಒಂದು ಕೇಳುತ್ತೇನೆ, ತಾವು ಈ ರಾಜ್ಯದಲ್ಲಿ ಮುಖ್ಯಮಂತ್ರಿ ಆಗಿದ್ದಿರಿ. ಶಾಸಕಾಂಗ ಪಕ್ಷದಲ್ಲಿ ಶಾಸಕರೇ ನಿಮ್ಮ ಮೇಲೆ ಹಲ್ಲೆ ಮಾಡುವುದಕ್ಕೆ ಬಂದರಲ್ಲಾ ಆಗ ಏನು ಮಾಡಿದಿರಿ? ನಾನು ಹೋಗಿ ಬಿಡಿಸಿದೆನಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದರಲ್ಲಿ ಏನು ಮಾಡಿದ್ದೇನೆ ಎಂಬುದು ತಮಗೆ ಗೊತ್ತಿದೆ. ಏತಕ್ಕೆ ಕೇಳುತ್ತೀರಿ ಮತ್ತ್.

Sri K.N. Nagegowda : Even toËday I appreciate you. ನೀವು ರಿಪೋರ್ಟ್ ಡಿಮ್ಯಾಂಡ್ ಮಾಡುತ್ತಿದ್ದೀರಲ್ಲ, ನೀವು ಚೀಫ್ ಮಿನಿಸ್ಟರ್ ಆಗಿದ್ದಾಗ ನಿಮ್ಮ ಮೇಲೆ ಶಾಸಕರು ಹೊಡೆಯುವುದಕ್ಕೆ ಬಂದಾಗ ಸಹಿಸಿಕೊಂಡಿದ್ದೀರಿ. ಅದರಲ್ಲೂ ವಿಧಾನಸೌಧದಲ್ಲಿ ಸಹಿಸಿಕೊಂಡಿದ್ದೀರಿ. I really appreciate your stand but you are demanding the report....

ಶ್ರೀ ಎಂ. ವೀರಪ್ಪ ಮೊಯಿಲಿ : ಗೊತ್ತಿದೆ. ಅದು ರಾಜಕೀಯ ವಿಷಯ. ಆದರೂ ಕೂಡ ಹೇಳುತ್ತೇನೆ ಕೇಳಿ. ಪೋಲೀಸ್ ವ್ಯವಸ್ಥೆ ರಾಜಕೀಯ ವ್ಯವಸ್ಥೆ ಅಲ್ಲ. ಶಾಸಕರನ್ನು ಸಸ್ಪೆಂಡ್ ಮಾಡಿದ್ದೇವೆ; ಸಸ್ಪೆಂಡ್ ಮಾಡಿ ಕೆಲವು ಮಂತ್ರಿಗಳು ಕೂಡ ರಾಜ್ಯಪಾಲರ ಹತ್ತಿರ ನೇರವಾಗಿ ರಾಜೀನಾಮೆ ಕೊಟ್ಟಾಗ ಕೂಡ, I recommended for removal of thosee Ministers. Of course, I regretted later. I regretted later. I should not have asked the Governor not to accept the resignation. I have committed a mistake and I am regretting for that.

ನಾನು ಅದು ಒಂದು ತಪ್ಪು ಮಾಡಿದ್ದೇನೆ. ಆ ತಪ್ಪಿನಿಂದ ಈ ಶಿಕ್ಷೆ ಅನುಭವಿಸಿದೆ.

ಶ್ರೀ ಕೆ.ಎನ್. ನಾಗೇಗೌಡ : ಒಂದು ಪಾಯಿಂಟನ್ನು ನಾವು ನಿಮಗೆ ಸಜೆಸ್ಟ್ ಮಾಡಿದೆವು. ಮಾನ್ಯ ಸಭಾಪತಿಗಳೇ, ನಾನೇ ಅವರಿಗೆ ಹೆಚ್ಚು ಆಪ್ತನಾಗಿದ್ದೆ, ನಾನು ಸಜೆಸ್ಟ್ ಮಾಡಿದೆ. ಪೋಲೀಸ್ ಕಂಪ್ಲೇಟ್ ಮಾಡಿ, ಲೆಜಿಸ್ಲೇಟರ್ ಇರಲಿ ರಾಮನ್ ಮ್ಯಾನ್ ಇರಲಿ ಯಾರೇ ಇರಲಿ ಅರೆಸ್ಟ್ ಮಾಡಿ ಕೇಸ್ ರಿಜಿಸ್ಟರ್ ಮಾಡಿಸಲಿಕ್ಕೆ ನೀವು ಮುಖ್ಯಮಂತ್ರಿಯಾಗಿ ಡೈರೆಕ್ಟ್ ಮಾಡಿ, ಕೇಸ್ ರಿಜಿಸ್ಟರ್ ಮಾಡಿಸಿದ್ದರೆ, ಆ ಜನರನ್ನು ನೀವು ಅರೆಸ್ಟ್ ಮಾಡಿಸಿದ್ದರೆ ಇವತ್ತು ನಿಮ್ಮ ಡಿಮ್ಯಾಂಡಿಗೆ ನಾವೇ ಹೇಳುತ್ತಿದ್ದೆವು ಮುಖ್ಯಮಂತ್ರಿಗಳಿಗೆ ದಯವಿಟ್ಟು ರಿಪೋರ್ಟ್ ಇಡಿ ಎಂದು.

ಅಧ್ಯಕ್ಷರು : ಮಂಜುನಾಥ ಕುನ್ನೂರ್ ಅವರೆ, ಮೊದಲು ಚಿಮ್ಮನಕಟ್ಟಿಯವರು ಮಾತಾನಾಡುತ್ತಾರೆ. ನಂತರ ನೀವು ಮಾತನಾಡಿ. ಚಿಮ್ಮನಕಟ್ಟಿಯವರೇ, ದಯಮಾಡಿ ಅನ್ಯಥಾ ಭಾವಿಸಬೇಡಿ ಮೊದಲನೇ ಸಾರಿಯೇ ಹೇಳುತ್ತಿದ್ದೇನೆ ಎಂದು. 7Ë30 ಗಂಟೆಗೆ ಸನ್ಮಾನ್ಯ ವಿರೋಧಪಕ್ಷದ ನಾಯಕರು ಎಲ್ಲಾ ವಿರೋಧಪಕ್ಷದ ಶಾಸಕರಿಗೆ ಊಟದ ವ್ಯವಸ್ಥೆ ಮಾಡಿಕೊಂಡಿದ್ದಾರೆ. 7ಗಂಟೆಗೆ ನಾವು ಸದನವನ್ನು ಮುಗಿಸಬೇಕು. ಅದರೊಳಗಾಗಿ ಇವರ ಉತ್ತರ ಆಗಬೇಕು. ಇನ್ನೂ ಎರಡು ಗಮನ ಸೆಳೆಯುವ ಸೂಚನೆಗಳಿವೆ. ವಾಟಾಳ್ ನಾಗರಾಜ್ ಅವರದು ಮತ್ತು ಇನ್ನೊಬ್ಬರದು ಇದೆ. ಅದನ್ನು ಹಾಗೇ ಇಟ್ಟುಕೊಂಡಿದೆ. ಆದ್ದರಿಂದ ಬೇಗ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಗಮನ ಸೆಳೆಯುವ ಸೂಚನೆಗಳನ್ನು ನಾಳೆ ಇಟ್ಟುಕೊಳ್ಳೋಣ.

ಅಧ್ಯಕ್ಷರು : ಬೇಡ. ದಯಮಾಡಿ ಇವತ್ತೇ ಮುಗಿಸೋಣ. ನಾಳೆಗೆ ಕೊಟ್ಟಿರುವವರು ಮತ್ತೆ ಮುಂದಕ್ಕೆ ಹೋಗುತ್ತದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ವಿಶೇಷ ಸಂದರ್ಭ ಎಂದು ಇಟ್ಟುಕೊಳ್ಳಬಹುದು.

ಅಧ್ಯಕ್ಷರು : ಆಯಿತು. ಮಾತನಾಡಿ ಚಿಮ್ಮನಕಟ್ಟಿಯವರೆ.

ಶ್ರೀ ಜೆ.ಎಚ್. ಪಟೇಲ್ :ಇದನನು ಕಂಟಿನ್ಯೂ ಮಾಡುವುದಕ್ಕಿಂತ ಇದನ್ನು ಕ್ಲೋಸ್ ಮಾಡಿ ಇವರೇನು ಹೇಳಬೇಕೆಂದು ವಿಷಯಗಳಿದೆಯೋ ಅದನ್ನು ಗೌರ್ನರ್ಸ್ ಅಡ್ರೆಸ್ ಮೇಲೆ ಮಾತನಾಡಬಹುದು. ಅದಕ್ಕೆ ಬೇರೆ ಯಾವುದೇ ಅಭ್ಯಂತರ ಇಲ್ಲ.

ಅಧ್ಯಕ್ಷರು : ಇಬ್ಬರೇ ಇರುವುದು. ಇನ್ನು ಯಾರೂ ಇಲ್ಲ. ಚಿಮ್ಮನಕಟ್ಟಿ ಮತ್ತು ಮಂಜುನಾಥ್ ಕುನ್ನೂರ್ ಅವರು ಹೆಚ್ಚು ಹೊತ್ತು ಮಾತನಾಡುವುದಿಲ್ಲ. ಅವರ ಲೀಡರ್ಸ್ ಎಲ್ಲಾ ಮಾತನಾಡಿದ್ದಾರೆ. ಅದನ್ನು ಸಮರ್ಥನೆ ಮಾಡಿ ಎರಡು ನಿಮಿಷ ಮಾತನಾಡುತ್ತಾರೆ. ನಂತರ ಉತ್ತರ ಕೊಡಬಹುದು.

+ಶ್ರೀ ಬಿ.ಬಿ. ಚಿಮ್ಮನಕಟ್ಟೆ (ಬಾದಾಮಿ) : ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ಮುಖಂಡರು ತಂದಿರತಕ್ಕ ನಿಲುವಳಿ ಸೂಚನೆಗೆ ಬೆಂಬಲವಾಗಿ ಈ ವಿಚಾರದ ವಿವರವಾದ ವಿವರಣೆಯನ್ನು ಕೊಡುವುದಕ್ಕೆ ಸದನವನ್ನು ಈಗಾಗಲೇ ಕೇಳಿದ್ದಾರೆ. ಅದಕ್ಕೆ ಸಮರ್ಪಕವಾಗಿ ಅದಕ್ಕೆ ಪುಷ್ಟೀಕರಣ ರೀತಿಯಲ್ಲಿ ನಾನು ಎರಡು ವಿಚಾರಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಈ ರಾಜ್ಯದ ಕಾನೂನು ವ್ಯವಸ್ಥೆ ಬಗ್ಗೆ ಮುಖ್ಯಮಂತ್ರಿಗಳು ಕೂಡ ಪ್ರತಿಜ್ಞೆ ಸ್ವೀಕಾರ ಮಾಡಿ ಈ ರಾಜ್ಯದ ಜನತೆಗೆ ರಕ್ಷಣೆಯನ್ನು ಕೊಡುವುದಕ್ಕೆ ನಾವು ಕೂಡ ಯಾವುದೇ ರೀತಿಯಿಂದ ಹಿಂದೇಟು ಹಾಕುವುದಿಲ್ಲ ಎಂದು ಕೊಟ್ಟಿರುವ ಪತ್ರಿಕಾ ಹೇಳಿಕೆಯನ್ನು ನಾನು ನೋಡಿದ್ದೇನೆ. ತದನಂತರ ಮೂರು ತಿಂಗಳಲ್ಲಿ ಆಗಿರತಕ್ಕ ಘಟನೆಗಳು ಒಂದು ಸರ್ಕಾರವನ್ನು ಪ್ರತಿನಿಧಿಸತಕ್ಕ ಸರ್ಕಾರದ ನಿಲುವಿನ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಯಾವ ರಾಜ್ಯದ ಕಾನೂನು ವ್ಯವಸ್ಥೆ ಹದಗೆಡುತ್ತದೋ ಆ ರಾಜ್ಯದ ಜನತೆಯ ವ್ಯವಸ್ಥೆ ಕೂಡ ಹದಗೆಡುತ್ತದೆ. ಅವರ ಬಾಳು ಕೂಡ ಹದಗೆಡುತ್ತದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗಾಗಲೇ ಮೂರು ತಿಂಗಳಲ್ಲಿ ನಡೆದಿರತಕ್ಕ ಅನೇಕ ಘಟನೆಗಳ ಬಗ್ಗೆ ಸನ್ಮಾನ್ಯ ಮೊಯಿಲಿಯವರಾಗಲೀ ಖಾರ್ಗೆಯವರಾಗಲೀ ಅನೇಕ ವಿಚಾರಗಳನ್ನು ಅನೇಕ ದುರ್ಘಟನೆಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನು ಕೂಡ ಸರ್ಕಾರಕ್ಕೆ ಕೇಳುವಂಥದ್ದು ಇಷ್ಟೆ.

ತಾವು ಈಗಾಗಲೇ ಹೇಳಿರಬಹುದು ನಿಮ್ಮ ಸರ್ಕಾರ ಇದ್ದಾಗ ನಿಮ್ಮ ಅವಧಿ ಇದ್ದಾಗ ಅನೇಕ ಘಟನೆಗಳು ಇಂಥದ್ದು ಸಂಭವವಾಗುತ್ತಿತ್ತು, ಅದಕ್ಕೆ ಪ್ರತೀಕಾರವಾಗಿ ನೀವು ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂಬ ಮಾತು ಕೇಳಿದಾಗ ನನಗೂ ಕೂಡ ದುಃಖವಾಗುತ್ತದೆ. ಬಹುಶಃ ಈ ಪ್ರಕರಣಗಳ ಹಿನ್ನೆಲೆಯನ್ನು ನೋಡಿದಾಗ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವುದೇ ಸರ್ಕಾರ ಇರಲಿ ಯಾರದೇ ಅವಧಿ ಇರಲಿ ಎಂಥವರೇ ಇರಲಿ ಆ ಘಟನೆಗಳ ಹಿನ್ನೆಲೆ, ಆ ಘಟನೆಗಳಿಗೆ ಸಂಬಂಧಪಟ್ಟಿರತಕ್ಕ ಕುಟುಂಬಗಳ ಸ್ಥಿತಿಗತಿಗಳನ್ನು ನೋಡಿದಾಗ ನಾವೆಲ್ಲರೂ ಕೂಡ ಅದಕ್ಕೆ ತಲೆಬಾಗತಕ್ಕ ವಿಚಾರವನ್ನು ನಾವು ಮಾಡಬೇಕಾಗುತ್ತದೆ. ಯಾರದೇ ಜವಾಬ್ದಾರಿ ಇರಬಹುದು. ಒಟ್ಟಾರೆ ಮೂರು ತಿಂಗಳಲ್ಲಿ ಘಟನೆಗಳಾಗಿವೆ. ಆಗಿರುವಂಥ ಘಟನೆಗಳ ಬಗ್ಗೆ ಮರುವಿಚಾರ ಮಾಡದೆ ಈಗ ಆಗಿರುವ ಆಗುಹೋಗುಗಳಿಗೆ ಜವಾಬ್ದಾರಿ ಆಗಿರತಕ್ಕ ಸರ್ಕಾರವನ್ನು ಕೂಡ ನಾನು ನೇರವಾಗಿ ಕೇಳಬೇಕಾಗುತ್ತದೆ. ಮಾನ್ಯ ಸಿಂಧ್ಯಾ ಅವರು ಗೃಹಮಂತ್ರಿಗಳಾದ ಮೇಲೆ ಗೃಹಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಮೇಲೆ ನಾನು ಅವರ ಮೇಲೆ ವಿಶೇಷವಾದ ನಂಬಿಕೆಯನ್ನು ಇಟ್ಟಿದ್ದೆ. ಬಹುಶಃ ಅವರು ಬಂದಮೇಲೆ ದಕ್ಷತೆ ಹೆಚ್ಚಾಗಬಹುದು.

ಪೋಲೀಸ್ ಅಧಿಕಾರಿಗಳಿಂದ ಇದು ಕಂಟ್ರೋಲ್ ಆಗಬಹುದು ಎಂದು ಅಂದುಕೊಂಡಿದ್ದೆ. ಆದರೆ ದುರಾದೃಷ್ಟ ಕಡಿಮೆಯಾಗುವ ಬದಲು ಬಹಳ ಹೆಚ್ಚಾಗಿದೆ ಎಂದಾಗ ನಾನು ಕೂಡ ವಿಷಾದದಿಂದ ಈ ಮಾತನ್ನು ಹೇಳಬೇಕಾಗುತ್ತದೆ. ಈಗ ಅವರು ಬಂದಮೇಲೆ ಅನೇಕ ಕ್ರಮಗಳನ್ನು ಕೈಗೊಂಡಿರುವ ವಿಚಾರ ಹೇಳಿದ್ದಾರೆ. ಅದರಲ್ಲಿ ಮುಖ್ಯವಾಗಿ ನಾವು ಕಂಡಲ್ಲಿ ಗುಂಡುಹಾಕುತ್ತೇವೆ. ಮತ್ತೆ ಮೇಲಾಗಿ ಈ ಸಂದರ್ಭಕ್ಕೆ ಹೋಗತಕ್ಕ ಬಸ್ಸುಗಳಿಗೆ ವಿಶೇಷವಾದ ಶಸ್ತ್ರವನ್ನು ಹೊಂದಿರತಕ್ಕ ಪೋಲೀಸ್ ಅಧಿಕಾರಿಗಳನ್ನು ಕಳುಹಿಸುತ್ತೇವೆ ಎಂದು ಹೇಳಿದ್ದೀರಿ. ಬಹುಶಃ ನಾನು ಕೇಳುತ್ತೇನೆ, ಫೆಬ್ರವರಿಯಲ್ಲಿ ಆದೇಶ ಆದಮೇಲೆ ಅನೇಕ ದುರಾದೃಷ್ಟ ಘಟನೆಗಳು ಏನಾಗಿವೆ ಆಗ ಪೋಲೀಸ್ ಅಧಿಕಾರಿಗಳು ಇದ್ದರೋ ಇಲ್ಲವೋ, ಅವರ ರಕ್ಷಣೆ ಕ್ರಮಗಳನ್ನು ಕೈಗೊಂಡರೂ ಕೂಡ ಇಂಥ ಘಟನೆಗಳು ಸಂಭವಿಸಿದೆ ಸರ್ವೇಸಾಮಾನ್ಯವಾಗಿ ಮಾತನಾಡತಕ್ಕ ಜನ ಏನು ಅನ್ನುತ್ತಾರೆ ಅಂದರೆ ಸರ್ಕಾರದ ವೈಫಲ್ಯವಾಗಿದೆ ಎಂಬ ಮಾತನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರತಿ ಜನರೂ ಮಾತನಾಡುತ್ತಿದ್ದಾರೆ. ಆ ದೃಷ್ಟಿಯಿಂದ ಸಂರಕ್ಷಣೆ ವಿಚಾರದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿವೆ ಎಂದರೆ ಮಾನ್ಯ ಮೊಯಿಲಿಯವರು ಹೇಳಿದರು ಪರದೇಶದಿಂದ ಆರ್ಥಿಕವಾಗಿ ಪರಿಣಾಮ ಆಗಬಹುದು, ಬೇರೆ ಬೇರೆ ವಿವಿಧ ರೀತಿಯಲ್ಲಿ ಪರಿಣಾಮ ಆಗಬಹುದು. ಇವತ್ತು ಕಾನೂನು ವ್ಯವಸ್ಥೆ ಎಂಬುದು ಬಹಳ ಮುಖ್ಯ. ಜೀವನಕ್ಕೆ ಉಸಿರು ಎಷ್ಟು ಮುಖ್ಯವೋ ನಮ್ಮ ರಾಜ್ಯಕ್ಕೆ ಕಾನೂನು ವ್ಯವಸ್ಥೆ ಕೂಡ ಅಷ್ಟೇ ಮುಖ್ಯ ಎಂದು ಹೇಳುತ್ತೇನೆ.

ಕಾನೂನು ಸುವ್ಯವಸ್ಥೆಯಲ್ಲಿ ಸರ್ಕಾರದ ವೈಫಲ್ಯತೆಯನ್ನು ತೋರಿಸಿ ಕೊಡುತ್ತದೆ. ಈ ರೀತಿ ಆಗಲಾರದಂತೆ ನೋಡಿಕೊಳ್ಳಲು ಸದನದ ಸಮಿತಿಯನ್ನು ರಚನೆ ಮಾಡುವುದಾಗಲಿ, ಪೋಲೀಸ್ ಅಧಿಕಾರಿಗಳನ್ನು ಒಳಗೊಂಡ ಅಂವರೆ ಅನೇಕ ದಕ್ಷ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ಮಾಡಿ. ಈ ರೀತಿಯ ಮೂಲ ಸಮಸ್ಯೆ

ಏನು ಇದೆ, ಅದನ್ನು ನಿವಾರಣೆ ಮಾಡುವುದಕ್ಕೆ ಯಾವ ರೀತಿಯ ಸ್ಟೆಪ್ ತೆಗೆದುಕೊಳ್ಳಬಹುದೆಂಬುದನ್ನು ನೋಡುವುದಾದರೆ, ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಇದಕ್ಕೆ ಅನೇಕ ಕಾರಣಗಳು ಇರಬಹುದು. ಪೋಲೀಸ್ ಅಧಿಕಾರಿಗಳು ಇರಬಹುದು. ಅವರೇ ಅನೇಕ ಕಡೆ ಶಾಮಿಲಾಗಿ ಅವರ ಜೊತೆ ಡಕಾಯಿತಿ ಮಾಡತಕ್ಕ ಜನಗಳು ಇದ್ದಾರೆಂಬುದು ನಾವು ತಿಳಿದು ಕೊಂಡಿರತಕ್ಕ ವಿಚಾರಗಳು. ಅದರ ಜೊತೆಗೆ ರೋಡ್ ಲೂಟಿ, ರಾಬರಿ ಯಾವುದೇ ಇರಲಿ, ಎಲ್ಲಾ ಘಟನೆಗಳಿಗೆ ಸಂಬಂಧಪಟ್ಟಂತೆ ಪೋಲೀಸ್ ರಕ್ಷಣೆಯನ್ನು ಜನ ಸಾಮಾನ್ಯರಿಗೆ ಕೊಡದಿದ್ದರೆ ಬಹುಶಃ ಇದರಿಂದ ಅನೇಕ ಅನಾಹುತಗಳನ್ನು ನಮ್ಮ ರಾಜ್ಯದಲ್ಲಿ ಎದುರಿಸಬೇಕಾಗುತ್ತದೆಂದು ಮಾತನ್ನು ಹೇಳುತ್ತಿದ್ದೇನೆ. ಮುಂದೆಯೂ ಆಗದಂತೆ ಸರ್ಕಾರ ಹೆಚ್ಚಿನ ರೀತಿಯಲ್ಲಿ ಕಾಳಜಿ ವಹಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

+ ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ರಾಜ್ಯದಲ್ಲಿ ಕಾಯಿದೆ ವ್ಯವಸ್ಥೆ ಕೆಟ್ಟ ಪರಿಸ್ಥಿತಿ ಬಗ್ಗೆ ನಮ್ಮ ನಾಯಕರು ತಮ್ಮ ಗಮನಕ್ಕೆ ತಂದಿದ್ದಾರೆ. ನಮ್ಮ ಜಿಲ್ಲೆಯ ಹುಬ್ಬಳ್ಳಿಯಲ್ಲಿ ಕೊಲೆಯಾದ ರಾಜು ಆಚಾರ್ ಕೇವಲ 26 ವರ್ಷದ ಒಬ್ಬ ಯುವಕ. ಇವತ್ತು ಆ ಯುವಕನ ಕೊಲೆಗೆ ಕಾರಣರಾದ ಆರೋಪಿಗಳನ್ನು ಪತ್ತೆ ಹಚ್ಚುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಫೈಲನ್ನು ಆ ಯುವಕ ಕಾಂಗ್ರೆಸ್‌ನ ಮಿತ್ರರು ನನ್ನ ಕಡೆಗೆ ಕೊಟ್ಟಿದ್ದಾರೆ. ಆ ಯಾವತ್ತೂ ಕಾಗದ ಪತ್ರಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಕಳುಹಿಸಿ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ಅವರು ಒಂದು ಕೇಸನ್ನು ಯುವಕ ಕಾಂಗ್ರೆಸ್‌ನ ಅಧ್ಯಕ್ಷರ ಜೊತೆಗೆ ಉತ್ತಮ ಗ್ರಾಣಕ್ಕೆ ಸಂಬಂಧಿಸಿದ ಸುಮಾರು 11 ಜನ ಯುವಕರು ಇದರ ಆರೋಪಿಗಳನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೂಗು ಕೇಳಿದಾಗ, ಅಂತಹ ಯುವಕರ ಮೇಲೆ ಆರೋಪಿಗಳೆಂಬ ಕೇಸನ್ನು ಮಾಡಿರುವ ಪ್ರಕರಣ ಎಲ್ಲಿಯೂ ಆಗಿರಲಿಕ್ಕಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ಕ್ರಿಮಿನಲ್ ರಿವಿಜನ್‌ಪಿಟೇಷನ್ ನಂ. 59/95 ರಲ್ಲಿ, ಧಾರವಾಡದ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್‌ರ್ ಅಂದರೆ ಅಸಿಸ್ಟೆಂಟ್‌ಕಮಿಷನರ್ ಕೂಡ ಒಂದು ತಪ್ಪು ಆದೇಶ ಮಾಡಿದ್ದರ ಕುರಿತು ತಪ್ಪು ಆದೇಶವನ್ನು ಕೂಡ ಮಾಡಿದ್ದಾರೆ. ಆ ಆರ್ಡರ್‌ನ ಪ್ರತಿಯನ್ನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಈ ಒಂದು ವಿಷಯದಲ್ಲಿ; ಸಿ.ಓ.ಡಿ. ತನಿಖೆಯನ್ನು ಮಾಡಬೇಕೆಂದು ಒತ್ತಾಯ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಅದೇ ಪ್ರಕಾರವಾಗಿ ಧಾರವಾಡ ಜಿಲ್ಲೆ ಆದಂತಹ ಬಸ್ ದರೋಡೆಯನ್ನು ವಿಚಾರಿಸಿದಾಗ ತಮಗೂ ಗೊತ್ತಿದೆ. ಒಂದೇ ಬಾರಿಗೆ 3 ಸರ್ಕಾರಿ ಬಸ್ಸುಗಳು 2 ಲಾರಿಗಳನ್ನು ಸತತವಾಗಿ ಅರ್ಧ ಗಂಟೆಯವರೆಗೆ ಹೆದ್ದಾರಿಯಲ್ಲಿ ದರೋಡೆಯಾಗುತ್ತದೆ ಎಂದರೆ ನಿಜಕ್ಕೂ ಕಾನೂನು ಮತ್ತು ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಹೋಗಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ವಿಚಾರವನ್ನು ಬಹಳಷ್ಟು ಶೀಘ್ರವಾಗಿ ಮತ್ತು ಬಹಳಷ್ಟು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಂತಹ ದರೋಡೆಗಳು ನಿಲ್ಲಬೇಕು. ಈ ದರೋಡೆಗಳು ನಿಲ್ಲದೆ ಹೋದರೆ ಸಾಕಷ್ಟು ಜನ ಭಯಭೀತರಾಗಿ ಲಾರಿ ಮಾಲೀಕರಾಗಲಿ, ಬಸ್ ಸಂಚಾರಿಗಳಾಗಲಿ, ಡ್ರೈವರ್‌ಗಳಾಗಲಿ, ಕ್ಲೀನರ್‌ಗಳಾಗಲಿ ರಾತ್ರಿ ಡ್ಯೂಟಿ ಮಾಡುವುದಕ್ಕೆ ಒಪ್ಪಲಾರರು ಎನ್ನುವ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಆ ಕಾರಣ ಇವತ್ತು ಈ ಒಂದು ದಿಸೆಯಲ್ಲಿ ಸೂಕ್ತ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕು. ಜೊತೆಗೆ ಇನ್ನೊಂದು ಪ್ರಕರಣಗಳಲ್ಲಿ "ಸ್ತ್ರೀವೇಶ ಧರಿಸಿ ದರೋಡೆ" ಎನ್ನತಕ್ಕ ಪ್ರಕರಣ ಪತ್ರಿಕೆಗಳಲ್ಲಿ ಬಂದಿದೆ. ಆದರೆ ನನ್ನ ತಾಲ್ಲೂಕಿನಲ್ಲಿ ಒಂದು ಘಟನೆಯಾಯಿತು.

ಅಧ್ಯಕ್ಷರು : ಇವೇ ತೊಂದರೆ ಬರುವುದು ನಮಗೆ. ನಿಮ್ಮ ನಾಯಕರೂ ಇಲ್ಲ. ಶ್ರೀಮಾನ್ ಮೊಯಿಲಿಯವರೂ ಇಲ್ಲ. ಇದು ನಿಲುವಳಿ ಸೂಚನೆ. ನಿಲುವಳಿ

ಸೂಚನೆ ಮೇಲೆ ಮಾತನಾಡುವಾಗ ಸದನದ ಮುಂದೆ ಇರುವ ಎಲ್ಲಾ ಕಲಾಪವನ್ನು ಬದಿಗೊತ್ತಿ, ಈ ವಿಚಾರವನ್ನು ಸವಿಸ್ತಾರವಾಗಿ ಚರ್ಚೆಗೆ ತೆಗೆದುಕೊಳ್ಳಲು ಪ್ರಾಸ್ತಾವಿಕವಾಗಿ ಭಾಷಣ ಮಾಡುವುದು. ಆದರೆ ನೀವು ಏನು ಮಾಡುತ್ತಿದ್ದೀರಿ. ಡಿಮ್ಯಾಂಡ್ ಇಡುತ್ತಾ ಹೋಗುತ್ತಿದ್ದೀರಿ. ಸಿ.ಓ.ಡಿ. ತನಿಖೆ ಮಾಡಿ, ಅದ್ ಮಾಡಿ ಎಂದು. ಅದಕ್ಕೆ ಕುಳಿತು ಗಂಭೀರವಾಗಿ ಒಂದೊಂದನ್ನು ನೀವು ಅಬ್ಸರ್ವ್ ಮಾಡುತ್ತಾ ಬಂದರೆ, ಇಂತಹ ಸಬ್ಜೆಕ್ಟ್ ಬಂದಾಗ ಈ ನಿಯಮದ ಕೆಳಗೆ ಯಾವ ರೀತಿ ಭಾಗವಹಿಸಬೇಕೆಂಬುದು ನಿಮಗೆ ಅನುಕೂಲವಾಗುತ್ತದೆ. ನಾನೂ ಸ್ವಲ್ಪ ಹೊತ್ತಿನಿಂದ ಕಾದು ಕುಳಿತ್ತಿದ್ದೇನೆ. ಹಾಗಾದರೆ ಏನಾಗುತ್ತದೆ? ಜನ ಏನು ತಿಳಿದುಕೊಳ್ಳುತ್ತಾರೆ? ನಾಳೆ ಹೊರಗಡೆ ಪತ್ರಿಕೆಗಳಲ್ಲಿ ಇದು ರಿಪೋರ್ಟ್ ಆದರೆ; ದಯಮಾಡಿ ಏಕೆ ಸದನದ ಕಲಾಪವನ್ನು ಮುಂದೂಡಬೇಕು ಎಂಬುದರ ಬಗ್ಗೆ ವಿಚಾರವನ್ನು ಸವಿಸ್ತಾರವಾಗಿ ಹೇಳಿ. ಆ ಲೈನಿನಲ್ಲಿ ಮಾತನಾಡಿ ಬೇಗ ಮುಗಿಸಿಬಿಡಿ. ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಆಮೇಲೆ ಸ್ವಲ್ಪ ಕೆಲಸ ಸದನದಲ್ಲಿದೆ. ಅದೆಲ್ಲವನ್ನೂ ಮುಗಿಸಿ ಹೋಗಬೇಕಲ್ಲ 7 ಗಂಟೆಗೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಸ್ತ್ರೀ ವೇಶ ಧರಿಸಿ ಲಾರಿ ದರೋಡೆ ಮಾಡಿದ ಪ್ರಕರಣ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆ ಬಗ್ಗೆ ನಮ್ಮ ನಾಯಕರು ತಮ್ಮ ಗಮನಕ್ಕೆ ತಂದಿದ್ದಾರೆ. ಆದರೆ ನಮ್ಮ ಶಿಗ್ಗಾವಿ ತಾಲ್ಲೂಕಿನ ಬಿಸಿಲಹಳ್ಳಿ ಗ್ರಾಮದ ಹತ್ತಿರ ಇಂತಹದ್ದೇ ಪ್ರಕರಣ ಆಗಿದೆ. ಪೋಲೀಸ್ ಠಾಣೆಯಲ್ಲಿ ಕೇಸು ರಿಜಿಸ್ಟರ್ ಆಗಿದೆ. ಆದರೆ ಅದು ಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ. ಇಂತಹ ಹಲವಾರು ಹೆದ್ದಾರಿಯಲ್ಲಿ ದರೋಡೆಯಾಗತಕ್ಕ ಸಂದರ್ಭ ಇರುವಾಗ ಇವುಗಳನ್ನು ಕೂಡಲೇ ತಡೆಗಟ್ಟತಕ್ಕ ಒಂದು ವ್ಯವಸ್ಥೆ ಮಾಡತತಹದ್ದು ಅವಶ್ಯಕತೆ ಇದೆ ಎನ್ನತಕ್ಕ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೊನೆಯದಾಗಿ ಇವತ್ತು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ರಾಜಕೀಯ ಗುಂಪು ಘರ್ಷಣೆ ಬಗ್ಗೆ ನಾವು ತೀವ್ರವಾಗಿ ವಿಚಾರ ಮಾಡಬೇಕಾಗುತ್ತದೆ. ಇವತ್ತು ಅನೇಕ ಗ್ರಾಮಗಳಲ್ಲಿ ರಾಜಕೀಯ ದುರುದ್ದೇಶದಿಂದ ಗುಂಪು ಗರ್ಷಣೆಗಳು ಆಗುತ್ತಿವೆ. ಜನತಾ ದಳದ ಕಾರ್ಯಕರ್ತರು ನಮ್ಮ ಮತ ಕ್ಷೇತ್ರದಲ್ಲಿ ತುಂಡಸಿ ಎನ್ನತಕ್ಕ ಗ್ರಾಮದಲ್ಲಿ ಒಬ್ಬ ಬೆರಳ್ಳಪ್ಪ ಎಂಬುವವರು. ಇವರು ತಾಲ್ಲೂಕು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾಂಗ್ರೆಸ್‌ನ ಕಾರ್ಯಕರ್ತರು. ಇವರ ಮೇಲೆ ಕ್ರಿಮಿನಲ್ ಕೇಸ್ ಹಾಕಿಸಿದ್ದಾರೆ. ಜೊತೆಗೆ ಅನೇಕ ಕಡೆಗೆ ಅವರ ಸರ್ಕಾರ ಆಡಳಿತಕ್ಕೆ ಬಂದಿದೆ ಎನ್ನುವ ಉದ್ದೇಶದಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಂತಿಯನ್ನು ಕದಡಿದ್ದಾರೆ ಎನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಆ ಕಾರಣ ಆಡಳಿತ ಪಕ್ಷದಿಂದ ಜನತಾ ದಳದವರು, ಸರ್ಕಾರದವರು ಇವತ್ತು ತಮ್ಮ ಕರ್ತವ್ಯವನ್ನು ತಾವು ತಿಳಿದುಕೊಂಡು ತಮ್ಮ ಶಾಸಕರಿಗೆ, ತಮ್ಮ ಪಕ್ಷದ ಕಾರ್ಯಕರ್ತರಿಗೆ ಈ ರೀತಿಯ ಕೆಲಸ ಕಾರ್ಯಗಳು ಆಗದಂತೆ ನೋಡಿಕೊಳ್ಳತಕ್ಕ ಒಂದು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಒಟ್ಟಾರೆ ಈ ಶಾಂತಿ ಮತ್ತು ಸುವ್ಯವಸ್ಥೆ ಕಾಯ್ದುಕೊಂಡು ಹೋಗತಕ್ಕ ಒಂದು ಕೆಲಸ ಮಾಡಬೇಕು ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಕಾಶಪ್ಪನವರ್: ಮಾನ್ಯ ಅಧ್ಯಕ್ಷರೆ,

Mr. Speaker : Where do we stop?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ 5 ನಿಮಿಷ ಕೊಡಿ. ಅವರಿಗೇ ತೊಂದರೆಯಾಗಿದೆ. ಗೌರ್ನರ್ಸ್ಅಡ್ರಸ್ ಮೇಲೆ ಮೋಷನ್ಆಫ್‌ತ್ಯಾಂಕ್ಸ್‌ನ ಮೋಷನ್ ಆಫ್‌ತ್ಯಾಂಕ್ಸ್‌ನ ಮೋಷನ್‌ಮೂವ್ ಮಾಡಿಬಿಡುತ್ತಾರೆ. ಸರ್ಕಾರ ಕುಳಿತರೆ ಅಪೋಜಿಷನ್ ಲೀಡರ್, ನಿಮ್ಮನ್ನು ಊಟಕ್ಕೆ ಕರೆದಿದ್ದಾರೆ. ಊಟ ತಣ್ಣಗಾಗಿ ಬಿಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 2 ನಿಮಿಷ ಕೊಡಿ.

+ ಶ್ರೀ ಎನ್.ಆರ್. ಕಾಶಪ್ಪನವರ್(ಹುನಗುಂದ) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 12-3-95 ರಂದು ನನ್ನ ತಾಲ್ಲೂಕಿನಲ್ಲಿ ಅಂದು ಸಂಜೆ ಮಳೆಯಾಗಿ ಸಿಡಿಲು ಬಡಿದು ನಾಲ್ಕು ಜನರಿಗೆ ಗಾಯಗಳಾಗಿವೆ ಎಂದು ತಿಳಿದು ಮೇಲೆ ಮ್ಯಾಗ್ನೂರು ಹಾಗೂ ಹಡಗಲಿ ಎಂಬ ಗ್ರಾಮಗಳಲ್ಲಿ ಈ ಘಟನೆ ಸಂಭವಿಸಿತ್ತು. ಆ ಸ್ಥಳಕ್ಕೆ ಭೇಟಿಕೊಟ್ಟು ಹಿಂತಿರುಗಿ ಬರುವಾಗ ಚಿತ್ತರಗಿ ಗ್ರಾಮದ ಹತ್ತಿರ ರಸ್ತೆಗೆ ಕಲ್ಲುಗಳನ್ನು ಹೊಟ್ಟಿ (ಅಡ್ಡಲಾಗಿಟ್ಟು) 10-12 ವಾಹನಗಳನ್ನು ತೆಗೆದುಕೊಂಡು ಬಂದರು ಜನತಾದಳದ ಕಾರ್ಯಕರ್ತರು. ನನ್ನ ಗಾಡಿಯಲ್ಲಿದ್ದವರಿಗೆ ಹಾಗೂ ನನ್ನ ಮೇಲೆ ಕಲ್ಲುಗಳಿಂದ ಹೊಡೆದರು. ಕೊಲೆ ಮಾಡಲು ಪ್ರಯತ್ನ ಮಾಡಿದರು. ಮತ್ತೆ ವಾಹನ ಮುಂದೆ ಹೋಗದಂತೆ ಅಡ್ಡಲಾಗ ಕಲ್ಲು ಹೊಡ್ಡಿದರು. ಅಂತಹ ವೇಳೆಯಲ್ಲಿ ಹೊಡೆತ ತಾಳಲಾರದೆ ವಾಹನ ಚಾಲಕ ಕಲ್ಲಿನ ಮೇಲೆಯೇ ಗಾಡಿಯನ್ನು ಜಂಪ್ ಮಾಡಿಸಿಕೊಂಡು ಬರುವ ಪ್ರಸಂಗ ಬಂತು. ಮುಂದೆ ಇಷ್ಟಾಗಿದಕ್ಕೂ ಅವರು ವಾಹನಗಳನ್ನು ತೆಗೆದುಕೊಂಡು ನಮ್ಮನ್ನು ಫಾಲೋ ಮಾಡಿದರು. ಮುಂದೆ ಪೋಲೀಸ್ ಸ್ಟೇಷನ್ ಸಿಗೋವರೆಗೂ ಬಂದರು. ಪೋಲೀಸ್ ಸ್ಟೇಷನ್‌ನಲ್ಲಿ ನಾವು ಕಂಪ್ಲೇಂಟ್ ಕೊಟ್ಟು, ಎಸ್.ಪಿ.ಯವರಿಗೆ ಅಲ್ಲಿಂದಲೇ ಫೋನ್ ಮಾಡಿದರು, ಆ ಎಸ್.ಪಿ.ಯವರು, ಆ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಈ ವಿಷಯದಲ್ಲಿ ಪುನಃ ಹೋಮ್ ಮಿನಿಸ್ಟರ್ ಜೊತೆ ಫೋನ್ ಮೂಲಕ ಮಾತನಾಡಿ ತಿಳಿಸಿದ್ದೇನೆ. ಮತ್ತೆ ಡಿ.ಐ.ಜಿ. ಹಾಗೂ ಡಿ.ಜಿ.ಪಿ.ಯವರಿಗೂ ಫೋನ್ ಮೂಲಕ ತಿಳಿಸಿದ್ದೇನೆ. ಆದರೆ ಇಂದಿನವರೆಗೂ ಆ ವ್ಯಕ್ತಿಗಳ ಮೇಲೆ ಯಾವುದೇ ಕ್ರಮವನ್ನಾಗಲಿ, ಅಥವಾ ಅವರನ್ನು ಬಂಧಿಸುವುದಾಗಲಿ ಮಾಡಿಲ್ಲ. ಅಂದು ನನಗೆ ಗಾಯಗಳಾಗಿದ್ದರಿಂದ ನನ್ನನ್ನು ಆಸ್ಪತ್ರೆಗೆ ಆಡ್ಮಿಟ್ ಆಗಿರುವಾಗಲೂ ಫಿರ್ಯಾದುಗಳನ್ನು ದಾಖಲು ಮಾಡಿದ್ದಾರೆ. 2-3 ಜನ ಕಂಪ್ಲೇಂಟ್ ಹಾಕಿದ್ದಾರೆ ಜನತಾ ದಳದ ಕಾರ್ಯಕರ್ತರು, ಪುನಃ ನಮ್ಮನ್ನು ಆಸ್ಪತ್ರೆಯಲ್ಲಿದ್ದಾಗ್ಯೂ ಕೂಡ ಅರೆಸ್ಟ್ ಮಾಡಬೇಕೆಂದು ಧರಣಿ ಕುಳಿತರು. ಧರಣಿ ಕುಳಿತಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ.ಯವರು ಸ್ಥಳಕ್ಕೆ ವಿಸಿಟ್ ಮಾಡಿದರು. ಆ ಸಂದರ್ಭದಲ್ಲಿ ನಾನು ಆಸ್ಪತ್ರೆಯಲ್ಲಿ ಇದ್ದರೂ ಕೂಡ ನನ್ನನ್ನು ಭೇಟಿಯಾಗಲಿಲ್ಲ. ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ.ಯವರು ಸ್ಥಳಕ್ಕೆ ಬಾರದೆ ಹಾಗೆ ಹೋದರು. ಮುಂದೆ ನಾನು ಹುಬ್ಬಳ್ಳಿಯ ಶಿವಕೃಪ ಆಸ್ಪತ್ರೆಯಲ್ಲಿ 3 ದಿವಸ ಅಡ್ಮಿಟ್ ಆಗಿದ್ದು ಉಂಟು. ನನ್ನ ಕಣ್ಣಿಗೆ ಹಾಗೂ ತಲೆಗೆ ಏಟುಗಳು ಬಿದ್ದಿವೆ. ನನ್ನ ಎದೆಗೆ ಸಾಕಷ್ಟು ಕಡೆ ಕಲ್ಲಿನಿಂದ ಚಚ್ಚಿದ್ದಾರೆ. ಇಷ್ಟಾಗಿದ್ದರೂ ಕೂಡ ಹೋಮ್ ಮಿನಿಸ್ಟರ್‌ಗೆ, ಡಿ.ಜಿ.ಪಿ.ಯವರಿಗೆ ಎಲ್ಲರಿಗೂ ಹೇಳಿದರೂ ಕೂಡ ಏನೂ ಮಾಡಲಿಲ್ಲ. ಮುಂದೆ ನಮ್ಮ ಪಕ್ಷದ ಕಾರ್ಯಕರ್ತರು ನಿರಪರಾಧಿಗಳಾಗಿದ್ದರೂ ಕೂಡ ಅವರುಗಳನ್ನು ಅರೆಸ್ಟ್ ಮಾಡಿ 3 ದಿವಸಗಳವರೆಗೆ ಜೈಲಿನಲ್ಲಿಟ್ಟಿದ್ದರೂ ಆಗಿದೆ. ಇಷ್ಟೆಲ್ಲಾ ನಮ್ಮ ಕಾರ್ಯಕರ್ತರ ಮೇಲೆ ಆಗಿದೆ. ಅನೇಕ ಕಡೆ ಚಹದ ಅಂಗಡಿಗಳನ್ನು ಸುಟ್ಟಿದ್ದಾರೆ. ಅನೇಕ ಕಾರ್ಯಕರ್ತರನ್ನು ಅರೆಸ್ಟ್ ಮಾಡಿದ್ದಾರೆ. ಆದರೆ ಜನತಾ ದಳದ ಕಾರ್ಯಕರ್ತರು ಯಾರನ್ನೂ ಅರೆಸ್ಟ ಮಾಡಬಾರದು ಎನ್ನತಕ್ಕ ಎಸ್.ಪಿ.ಯವರ ಫೋನ್ ಕ್ರಾಸಿಂಗ್ ಆದದ್ದನ್ನೂ ಕೂಡ ನಮ್ಮ ಕಾರ್ಯಕರ್ತರು ಹಾಗೂ ನಾನು ಕೇಳಿದ್ದುಂಟು. ನಮ್ಮಲ್ಲಿ ಏನಾಗಿದೆ ಎಂದರೆ ಟವರ್ ಆಗದೆ ಎಲ್ಲೇ ಮಾತನಾಡಿದರೂ ಕೂಡ ತಕ್ಷಣ ಫೋನ್ ಕ್ರಾಸ್ ಆಗಿಬಿಡುತ್ತದೆ. ಆ ರೀತಿಯಾಗಿ ಎಸ್.ಪಿ.ಯವರು ಜನತಾದಳದ ಕಾರ್ಯಕರ್ತರನ್ನು ಚುನಾವಣೆಯ ಎಣಿಕೆ ಮುಗಿಯುವವರೆಗೂ ಮಾಡಬಾರದು ಅಂತ ಹೇಳಿದರು. ಇಷ್ಟೆ ಅಲ್ಲ, ಮತ್ತು ಎಣಿಕೆ ಆಗುವಾಗ ಮತ ಪತ್ರಗಳು ಸಿಕ್ಕಾಪಟ್ಟೆ ಎಲ್ಲಿ ಬೇಕೆಂದರಲ್ಲಿ ಟೇಬಲ್ ಕೆಳಗಡೆ ಎಲ್ಲ ಕಡೆ ಹೊಗೆದಿದ್ದರು. ಅವುಗಳು ಅನೇಕವು ಸಿಕ್ಕಿವೆ. ಸಿಕ್ಕಿದಾಗ ಕೂಡ ಆರ್.ಓ. ರವರು ಅವುಗಳನ್ನು ಸೀಜ್ ಮಾಡಲಿಲ್ಲ. ಪ್ರಮಾಣ ಪತ್ರವನ್ನು ಕೊಡುವ ವಿಚಾರದಲ್ಲೂ ಕೂಡ ಎಣಿಕೆ ರಿಪೋರ್ಟ್ ಪೂರ್ಣವಾಗಿದಿದ್ದರೂ ಕೂಡ ಪ್ರಮಾಣ ಪತ್ರವನ್ನು ಕೊಟ್ಟಿದ್ದುಂಟು. ಈ ರೀತಿ

ಅನೇಕ ದೌರ್ಜನ್ಯ ಕೃತ್ಯಗಳು ನಡೆಯುತ್ತಿವೆ. ಇಂದು ರಾಜ್ಯದಲ್ಲಿ ಸಂಪೂರ್ಣವಾಗಿ ಕಾನೂನು ವ್ಯವಸ್ಥೆ ಕುಸಿದು ಹೋಗಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಯಾವುದೂ ಬೇಕಾಗಿಲ್ಲ.

ಅದು ಅಲ್ಲದೇ ಸ್ಥಳೀಯ ಪೋಲೀಸ್ ಅಧಿಕಾರಿಗಳು ನಮ್ಮ ಕಾರ್ಯಕರ್ತರನ್ನು ಎಳೆದುಕೊಂಡು ಹೋಗುತ್ತದೆ ಹೊಡೆಯುತ್ತಾರೆ ಬಡಿಯುತ್ತಾರೆ. ಈ ವಿಷಯವನ್ನು ಎಸ್.ಪಿ.ಗೆ ಹೇಳೋಣ ಫೋನ್ ಕೊಡಿ ಅಂತ ಕೇಳಿದರೆ ಫೋನ್ ಕೊಟ್ಟು ಟಕ್ ಅಂತ ಬಂದ್ ಮಾಡುತ್ತಾರೆ. ಅವರು ನೂರಾರು ಜನರ ಮೇಲೆ ಕಂಪ್ಲೆಂಟ್ ಕೊಟ್ಟರೆ ನಾವು ಹೇಗೇ ಹೇಳುವುದಕ್ಕೆ ಆಗುವುದಿಲ್ಲ ಅವರನ್ನು ನಾವು ಎಳೆದು ತರುವುದಕ್ಕೂ ಆಗುವುದಿಲ್ಲ ಎನ್ನತಕ್ಕಂಥ ಒಂದು ಸ್ಪಷ್ಟವಾದ ಉತ್ತರವನ್ನು ಕೊಡುತ್ತಾರೆ ಅದು ಅಲ್ಲದೆ ಸ್ಥಳೀಯ ಪೋಲೀಸ್ ಅಧಿಕಾರಿಗಳು ಹೇಳುತ್ತಾರೆ ನಮ್ಮ ಎಸ್‌ಪಿ ಯವರು ಏನು ಹೇಳುತ್ತಾರೋ ಅದನ್ನು ನಾವು ಮಾಡಬೇಕಾಗುತ್ತದೆ ಹೀಗೆ ಇರತಕ್ಕಂಥ ಮಾತನ್ನು ಅಧಿಕಾರಿಗಳು ಹೇಳುವಂತಹ ಒಂದು ವಾತಾವರಣ ನಿಜವಾಗಿಯೂ ನಮ್ಮಲ್ಲಿ ಬಂದಿದೆ ನಮ್ಮಲ್ಲಿ ಕಾನೂನು ಸಂಪೂರ್ಣವಾಗಿ ಕುಸಿದಿದೆ ಅಷ್ಟೇ ಅಲ್ಲ ಜನರು ಭಯಭೀತರಾಗಿದ್ದಾರೆ, ಜನತಾದಳದ ಕಾರ್ಯಕರ್ತರು ಎಷ್ಟೋ ಜನರ ಮೇಲೆ ನಮ್ಮ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ ಪಕ್ಷಾಂತರ ಮಾಡಿ ನೀವು ಈ ಕಡೆ ಬನ್ನಿ ನೀವು ನಮ್ಮ ಪಕ್ಷದ ಪರವಾಗಿ ಪ್ರಚಾರ ಮಾಡಿದಿದ್ದರೆ, ನಿಮ್ಮ ಪ್ರಾಣಕ್ಕೆ ಸಂಚಕಾರ ಬರಬಹುದು ಎನ್ನುವಂತಹ ಭಯ ಮೂಡಿಸುವುದು. ಇಂತಹ ದುರ್ಘಟನೆಗಳು ಇವತ್ತು ನಮ್ಮ ತಾಲ್ಲೂಕಿನಲ್ಲಿ ನಡೆದಿದ್ದು, ಇದರ ಬಗ್ಗೆ ಸಂಪೂರ್ಣವಾಗಿ ಒಂದು ಸಿಓಡಿ ತನಿಖೆ ಆಗಬೇಕು ಇದೇ ರೀತಿ ಅನೇಕ ಸಲ ನಡೆದಿದೆ, ಇದಕ್ಕಿಂತ ಮುಂಚೆ ಮೂರು ದಿವಸಗಳ ಹಿಂದೆ ಸುಮಾರು 12 ವಾಹನಗಳನ್ನು ತಂದು ನನಗೆ ಜೀವ ಭಯ ಹಾಕಿದ್ದು ಉಂಟು. ಆದ್ದರಿಂದ ಮಾನ್ಯ ಅಧ್ಯಕ್ಷರೇ ತಾವು ನನಗೆ ಪ್ರೊಟೆಕ್ಷನ್ ಕೊಡಬೇಕು ಅಂದ್ರರೆ ಸೆಕ್ಯುರಿಟಿ ಕೊಡಬೇಕು ಎನ್ನುವ ಮಾತನ್ನು ನಾನು ಹೇಳತ್ತೇನೆ. ಯಾವಾಗ ಯಾರು ಏನು ಮಾಡುತ್ತಾರೋ ಎನ್ನತಕ್ಕಂಥ ಭಯ ನನಗೆ ಇದೆ. ಆದ್ದರಿಂದ ತಾವು ತಕ್ಷಣ ನನಗೆ ಸೆಕ್ಯುರಿಟಿ ಕೊಡಬೇಕು. ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಅಂತ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಈ ಬಗ್ಗೆ ಒಂದು ಸದನದ ಸಮಿತಿ ಕೂಡ ಮಾಡಬೇಕು, ಹಾಗೂ ಇದರ ಬಗ್ಗೆ ಪ್ರತ್ಯೇಕವಾಗಿ ಒಂದು ಆಯೋಗ ಮಾಡಿ ವಿಚಾರಣೆ ಮಾಡಬೇಕು ಅಂತ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಒಬ್ಬ ಶಾಸಕರ ಸ್ವಂತ ರಕ್ಷಣೆ ವಿಚಾರದಲ್ಲಿ ಪೋಲೀಸ್‌ನವರು ಆಗಲಿ ಅಥವಾ ಬೇರೆ ಅಧಿಕಾರಿಗಳು ಆಗಲಿ ಅವರ ಗೌರವಕ್ಕೆ ಚ್ಯುತಿ ತರತಕ್ಕಂಥ ವಿಚಾರದಲ್ಲಿ ತಾವು ಅವರ ರಕ್ಷಣೆಗೆ ಬರಲೇಬೇಕಾಗುತ್ತದೆ. ತಾವು ದಯವಿಟ್ಟು ಅವರ ಮನವಿಯನ್ನು ಪರಿಗಣಿಸಿ ಅವರು ತಮ್ಮ ಜವಾಬ್ದಾರಿಯಲ್ಲಿದ್ದಾರೆ. ಈ ಮನೆಯ ಸದಸ್ಯರಿಗೆ ರಕ್ಷಣೆ ಕೊಡುವುದು ತಮ್ಮದು ಅಂತ ಹೇಳಿ ನಾನು ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಕನಿಷ್ಟ ಪಕ್ಷ ಮಾನ್ಯ ಸದಸ್ಯರಾದ ಕಾಶ್ಯಪ್ಪನವರ ಪ್ರಕರಣ ಇದೆ ಇದಕ್ಕೆ ಏನಾದರೂ ಒಂದು ವಿಚಾರಣೆಯನ್ನು ತಮ್ಮ ಮುಖಾಂತರ ಆದರೂ ಮಾಡಿ. ಅವರು ಒಬ್ಬ ಶಾಸಕರಾಗಿ ಹಳ್ಳಿಯಲ್ಲಿ ಕಾರ್ಯಕ್ರಮಕ್ಕೆ ಹೋದರೆ ಜೀಪ್ ನಿಲ್ಲಿಸಿ ಕಲ್ಲಿನಿಂದ ಹೊಡೆದು, ಬೇಕಾದರೆ ತಾವು ಸ್ವಂತ ನೋಡಿ ಅವರ ಕೈ ಮೈ ಮುಖ ಗಾಯಗಳಾಗಿವೆ. ಈ ರೀತಿ ಅಟ್ಯಾಕ್ ಮಾಡಿದರೆ ಹೇಗೆ? ನೀವು ಪೊಲಿಟಿಕಲ್ ಆಗಿ ಏನು ಬೇಕಾದರೂ ಮಾಡಿ. ನೀವು ಏನು ಪ್ರಚಾರ ಮಾಡಬೇಕೋ ಮಾಡಿಕೊಳ್ಳಿ ಅವರು ಏನು

ಹೇಳಬೇಕೋ ಹೇಳಿಕೊಳ್ಳಲಿ ಅವರು ಪಿಜಿಕಲ್ ಅಟ್ಯಾಕ್ಸ್ ಮಾಡಿದ್ದಾರೆ ಅವರ ಮೇಲೆ ಪೋಲೀಸ್‌ನವರು ಮತ್ತು ಎಸ್.ಪಿ.ಯವರು ಯಾವ ಕ್ರಮ ತೆಗೆದುಕೊಂಡಿಲ್ಲ ಅಂದ್ರೆ ಇದು ನಾಳೆ ಬೇರೆಯವರಿಗೂ ಕೂಡ ಆಗುತ್ತದೆ. ಇವತ್ತು ಅವರ ಪ್ರಭಾವ ಇದೆ ಅವರು ಮಾಡುತ್ತಾರೆ ನಾಳೆ ಇನ್ನೊಬ್ಬರು ಬಂದರು ಅಂದ್ರೆ ಅವರು ಮಾಡುತ್ತಾರೆ. ಆದರೆ ಎಸ್.ಪಿ. ಸರಿ ಇಲ್ಲ ಅಂತ ಹೇಳಿ ಹಾಸನದಿಂದ ವಿಜಾಪುರಕ್ಕೆ ಮುಖ್ಯಮಂತ್ರಿಗಳೇ ವರ್ಗಾವಣೆ ಮಾಡಿದ್ದಾರೆ. ಅವನು ಎದುರಿಕೊಂಡು, ಯಾವುದೇ ಶಾಸಕರು ಇರಲಿ ಎಂ.ಪಿ.ಗಳು ಇರಲಿ ಯಾರಿಗೂ ಅಟ್ಯಾಕ್ ಮಾಡಿದರೂ ಕೂಡ ಅವನನ್ನು ಕೇಳುವುದಿಲ್ಲ ಅವರು ತಮ್ಮಲ್ಲಿದ್ದಂತಹವನಿಗೆ ತೆಗೆದು ಅಲ್ಲಿ ಹಾಕಿದ್ದಾರಾ. ಮತ್ತೇ ಅವರು ಒಳ್ಳೆಯವರಿದ್ದರೆ ಅವರೇ ಇಟ್ಟುಕೊಳ್ಳಬಹುದಿತ್ತು. ಮಾನ್ಯ ಅಧ್ಯಕ್ಷರೇ ನಿಮಗೆ ಎಂಬ್ರಾಸ್‌ಮೆಂಟ್ ಆಗಬಾರದು ಅಂತ ತಿಳಿದುಕೊಂಡೆ ನಾನು ಮಾತನಾಡುತ್ತಿದ್ದೇನೆ ತಾವು ಕರೆದರೂ ಇನ್ನು ಅವರು ಹೊರಗಡೆಯೇ ಇದ್ದಾರೆ ಅಲ್ಲಿಯವರೆಗೂ ಕನಿಷ್ಟಪಕ್ಷ ತಮ್ಮ ರಕ್ಷಣೆಗೆ ನಾನು ಬರುತ್ತಿದ್ದೇನೆ. ಇದಕ್ಕೆ ತಾವು ಏನಾದರೂ ಸಹಾಯ ಮಾಡುತ್ತಿರೇನೋ ಅಂತ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ನನಗೂ ಕೂಡ ತಮ್ಮ ಬಗ್ಗೆ ಗೌರವ ಇದೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಪೋಲೀಸ್ ಪ್ರೊಟೆಕ್ಷನ್ ಮತ್ತು ಸರಿಯಾಗಿ ತನಿಖೆ ಮಾಡುವುದಕ್ಕೆ ತಾವು ಸರ್ಕಾರಕ್ಕೆ ನಿರ್ದೇಶನ ಕೊಡಬೇಕಾಗುತ್ತದೆ.

ಅಧ್ಯಕ್ಷರು : ನಾವು ಒಂದು ಕೆಲಸ ಮಾಡೋಣ ಮುಖ್ಯಮಂತ್ರಿಗಳು ಬರುವುದು ನಿಧಾನ ಆದರೆ ರಾಜ್ಯಪಾಲರ ಭಾಷಣದ ಮೇಲಿನ ನಿರ್ಣಯವನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಭಾಧ್ಯಕ್ಷರೇ ನಾಳೆ ಉತ್ತರ ಕೊಡಿಸಿ.

ಅಧ್ಯಕ್ಷರು : ನಾವು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಪ್ರಸ್ತಾವವನ್ನು ತೆಗೆದುಕೊಳ್ಳೋಣ.

ಶ್ರೀ ಎಸ್.ಆರ್. ಕಾಶಪ್ಪನವರ್ : ಮಾನ್ಯ ಅಧ್ಯಕ್ಷರೇ ಕಳೆದ 3 ತಿಂಗಳಿಂದ ನನಗೆ ಮೇಲಿಂದ ಮೇಲೆ ಜೀವ ಭಯ ಹಾಕುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಸರ್ಕಾರದಿಂದ ಉತ್ತರ ಇಲ್ಲ ಅದಕ್ಕೆ ತಾವು ಆಲೋ ಮಾಡಿ ನಾಳೆ ಚರ್ಚೆ ಮಾಡೋಣ.

ಅಧ್ಯಕ್ಷರು : ಮಾನ್ಯ ಖರ್ಗೆಯವರೇ ತಾವು ಇಂತಹ ಸಲಹೆಗಳನ್ನು ಕೊಡಬೇಡಿ. ನಾಳೆ ಅಧ್ಯಕ್ಷರಾಗಿ ಬರುವವರು ಅದನ್ನೇ ಮಾಡುತ್ತಾರೆ ಆಗ ತೊಂದರೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೌದು. ಮುಂದೆ ನೋಡೋಣ. ಸಂದರ್ಭ ಬಂದಾಗಾ ನಾವು ಅದೇ ರೀತಿ ಆಕ್ಟ್ ಮಾಡೋಣ. ಆದರೆ ಅವರಿಗೆ ತಮ್ಮ ಹೇಳಿಕೆ ಮೇಲೆ ಅವರಿಗೆ ಏನೋ ಕೆಲಸ ಇದೆ. ಅಂತ ಹೇಳಿದರು ತಾವು ಒಪ್ಪಿಕೊಂಡಿದ್ದೇವೆ. ಮತ್ತೆ ಅವರು ಹೋದರು ಎಷ್ಟು ಹೊತ್ತು ಕಾಯ್ದುಕೊಂಡು ಕೂರುವುದಕ್ಕೆ ಆಗುತ್ತದೆ. ತಾವೇ ಹೇಳಿ. ಇದು ಸರಿ ಅಂದ್ರೆ, ನಾನು ಒಪ್ಪಿಕೊಂಡು ಕೂರುತ್ತೇನೆ. ಏಕೆಂದರೆ ಸಿಂಧ್ಯಾರವರು ಇಲ್ಲ ಅಂದಿರಿ ನಾವು ಒಪ್ಪಿಕೊಂಡಿದ್ದೇನೆ. ಆದರೆ ಉತ್ತರ ಕೊಡುವುದಕ್ಕೂ ಇಲ್ಲ. ಹೋಗಲಿ ನೀವು ಇದನ್ನು ಅಲೋ ಮಾಡಿ ಇಲ್ಲ ಅಂದರೆ ಈ ಮನೆಯನ್ನು ಮುಂದಕ್ಕೆ ಹಾಕಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಸದನದ ಸದಸ್ಯರ ಹಕ್ಕನ್ನು ಕಾಪಾಡತಕ್ಕಂಥ ಹೊಣೆಗಾರಿಕೆ ತಮ್ಮ ಮೇಲೆ ಇದೆ. ಇದರ ಬಗ್ಗೆ ದಯಮಾಡಿ ಒಂದು ಕೂಲಂಕಷವಾದ ತನಿಖೆ ಮಾಡಲಿಕ್ಕೆ ಸರ್ಕಾರಕ್ಕೆ ಸರಿಯಾದ ಸೂಚನೆಯನ್ನು ಕೊಡಿ. ಎರಡನೆಯದು ಅವರಿಗೆ ರಕ್ಷಣೆಯನ್ನು ಕೂಡ ಒದಗಿಸಿಕೊಡಬೇಕಾಗುತ್ತದೆ. ಅದರಲ್ಲಿ ಹಿಂದು ಮುಂದು ನೋಡತಕ್ಕಂಥಾದ್ದು ಸೂಕ್ತ ಅಲ್ಲ. ಅವರ ಹಕ್ಕನ್ನು ರಕ್ಷಣೆ ಮಾಡಬೇಕಲ್ಲ.

ಅಧ್ಯಕ್ಷರು : ರಾಮಸ್ವಾಮಿಯವರೇ ಕಾಶ್ಯಪ್ಪನವರೇ ತಾವು ದಯಮಾಡಿ ಕುಳಿತುಕೊಳ್ಳಿ ತಾವೆಲ್ಲ ಹೇಳಿದ್ದೀರಿ. ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿದೆ. ಸರ್ಕಾರ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಕಾಶ್ಯಪ್ಪನವರ ಪ್ರಾಣಕ್ಕೆ ಕರ್ತವ್ಯಕ್ಕೆ ಸಹಾಯ ಮಾಡದೇ ಹೋದರೆ, ಆಗ ನಾನು ನನ್ನ ಕರ್ತವ್ಯವನ್ನು ಮಾಡುತ್ತೇನೆ. ನಾನು ಹಿಂದುಮುಂದು ನೋಡುವುದಿಲ್ಲ, ಸನ್ಮಾನ್ಯ ಸಭಾನಾಯಕರು ಉತ್ತರ ಕೊಡಲಿ. ಸರ್ಕಾರ ಅವರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಒಬ್ಬ ಸದಸ್ಯರ ಮೇಲೆ ಈ ರೀತಿ ಹಲ್ಲೆ ವಿಷಯ ಬಂದಾಗ ಅದಕ್ಕೆ ರಕ್ಷಣೆ ಕೊಡಬೇಕಾದವರು ತಾವು. ಸದಸ್ಯರ ಮೇಲೆ ಬೆದರಿಕೆ ಬಂದು ಅವರ ಪ್ರಾಣಕ್ಕೆ ಅಪಾಯ ಬಂದಾಗ ರಕ್ಷಣೆ ತಾವು ಕೊಡಬೇಕು.

ಅಧ್ಯಕ್ಷರು : ಅವರು ಭಯ ಪಡಬಾರದು ಅಂತ ನಾನು ಒಂದು ಕಡೆಯ ಮಾತು ಹೇಳಿದು ನಾನು ಈಗ ಸರ್ಕಾರದ ಉತ್ತರವನ್ನು ಗಮನಿಸುತ್ತೇನೆ. ಸರ್ಕಾರದಿಂದ ಅವರಿಗೆ ರಕ್ಷಣೆ ಕೊಡುವ ಬಗ್ಗೆ ಸ್ಪಷ್ಟವಾದ ಉತ್ತರ ಬಾರದಿದ್ದರೆ ಆಗ ತಾವು ನಾನು ಏನು ಮಾಡುತ್ತೇನೆ ಎನ್ನುವುದನ್ನು ನೋಡಬಹುದು. ನನಗೆ ತಾವು ಒಂದು ಅವಕಾಶ ಕೊಡಬೇಕಲ್ಲ ಸರ್ಕಾರದವರು ಆ ಕೆಲಸ ಮಾಡದೇ ಹೋದರೆ, ಆಗ ನಾನು ನನ್ನ ಶಾಸಕರ ರಕ್ಷಣೆ ಮಾಡುವುದಕ್ಕೆ ಮುಂದಾಗುತ್ತೇನೆ. ಅವರ ಕೆಲಸವನ್ನು ನಾನು ಮಾಡಲೇ? ಅವರು ಮಾಡದೇ ಹೋದರೆ ನನ್ನ ಕೆಲಸವನ್ನು ಕರ್ತವ್ಯವನ್ನು ನಾನು ಮಾಡುತ್ತೇನೆ.

6.40 ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಏನು ಮಾನ್ಯ ಖರ್ಗೆಯವರು ಇತರೆ ಮಾನ್ಯ ಸದಸ್ಯರು.....

ಅಧ್ಯಕ್ಷರು : ತಾವು ಸಭೆಯಲ್ಲಿರಲಿಲ್ಲ, ಎರಡು ನಿಮಿಷ ಹೊರಗೆ ಹೋಗಿದ್ದೀರಿ, ಈ ಮನೆಯ ಸದಸ್ಯರ ಜೀವಕ್ಕೆ ಅಪಾಯ ಒದಗಿದೆ, ಅವರ ಹಲ್ಲೆ ಮಾಡುವ ಪ್ರಯತ್ನ ನಡೆದಿದೆಯೆಂದು ಹೇಳಿದ್ದಾರೆ, ತಾವು ಉತ್ತರ ಹೇಳುವಾಗ ಆ ಮಾಹಿತಿ ಇಲ್ಲದಿದ್ದರೆ ದಯಮಾಡಿ ತರಿಸಿಕೊಂಡು ಅದನ್ನು ಸೇರಿಸಿಕೊಂಡು ಉತ್ತರ ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಉತ್ತರವನ್ನು ಈಗಲೇ ಕೊಡಬೇಕೆಂದು ಗೊತ್ತಿರಲಿಲ್ಲ. ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಹಲ್ಲು ನೋವಿನಿಂದ ಹೊರಗೆ ಹೋಗಿದ್ದೆ. ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಇದು ಬರಲಿಕ್ಕೆ ಸಾಧ್ಯವಿಲ್ಲ. ಹಲವಾರು ಸಾರಿ ಈ ಸಭೆಯಲ್ಲಿ ಹಿಂದೆ ನಿರ್ಣಯ ರೂಲಿಂಗ್ ಕೊಟ್ಟಿರುವುದು ಇದೆ. ಮುಂದೆ ತಾವೇನು ನಿರ್ಣಯ ಮಾಡುತ್ತಿರೋ ಅದಕ್ಕೆ ನಾವು ತಲೆಬಾಗುತ್ತೇವೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಲುವಳಿ ಸೂಚನೆಯನ್ನು ಕೊಡಲಾಗಿದೆ, ಅದನ್ನು ಸಮರ್ಥನೆ ಮಾಡಲಿಕ್ಕೆ ಕಳೆದ ನಾಲ್ಕೈದು ತಿಂಗಳುಗಳಿಂದ ನಡೆದ ಘಟನೆಗಳನ್ನು ಮಾನ್ಯ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ

ಖರ್ಗೆಯವರು, ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ಈ ಸಭೆಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಕೆಲವು ವಿಷಯಗಳನ್ನು ಈಗ ತಾನೇ ಹೇಳಿದ್ದಾರೆ. ಮಾನ್ಯ ಸದಸ್ಯರ ಮೇಲೆ ಹಲ್ಲೆ ನಡೆದಿದೆಯೆಂದು ಹೇಳಿದ್ದಾರೆ ಆ ವಿಷಯದ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಸಭೆಗೆ ಉತ್ತರ ಕೊಡದಿದ್ದರೆ ನನ್ನ ಮನಸ್ಸಿಗೆ ಸಮಾಧಾನವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಳೆ ಸಮರ್ಪಕವಾದ ಉತ್ತರವನ್ನು ಕೊಟ್ಟರೆ ನಮ್ಮದೇನು ಅಭ್ಯಂತರವಿಲ್ಲ, ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಒಂದು ನಿಮಿಷ ಯೀಲ್ಡ್ ಆದರೆ, ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಮೂಲಕ ತಮ್ಮ ಮನ ಒಲಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ತಾವು ಈಗ ನಿಲುವಳಿ ಸೂಚನೆಯನ್ನು ಪರಿವರ್ತನೆ ಮಾಡಿ ಅದಕ್ಕೆ ಅವಕಾಶ ಕೊಡುತ್ತೀರೋ ಅಥವಾ ತಳ್ಳಿಹಾಕುತ್ತೀರೋ ಅದನ್ನು ತಾವು ಈಗಲೇ ಹೇಳಬೇಕಾಗುತ್ತದೆ. ಉತ್ತರ ಕೊಡಲಿಕ್ಕೆ ಇದು ನಾಳೆ ಮುಂದೆ ಹೋಗುತ್ತದೆಂದರೆ, ಇದುವರೆಗಿನ ನನ್ನ 12 ವರ್ಷಗಳ ಅನುಭವದಲ್ಲಿ ನಿಲುವಳಿ ಸೂಚನೆಯನ್ನು ಒಪ್ಪದೆ ಒಂದು ಸಾರಿಯೂ ಅದು ಮುಂದೆ ಹೋಗಿ ಅದಕ್ಕೆ ಉತ್ತರ ಕೊಟ್ಟ ಉದಾಹರಣೆ ಇಲ್ಲ. ಒಮ್ಮೆ ನಿಲುವಳಿ ಸೂಚನೆ ಬಂದರೆ ಅದನ್ನು ಸಭಾನಾಯಕರು ಒಪ್ಪಿಕೊಳ್ಳುತ್ತಾರೋ ತಾವು ಅದಕ್ಕೆ ಅನುಮತಿಯನ್ನು ಕೊಡುತ್ತಾರೆಂದರೆ ಸರಿ ತಾವು ಅನುಮತಿಯನ್ನು ಕೊಡುವುದಿಲ್ಲವೆಂದರೆ ಅವರು ಏನು ಉತ್ತರ ಕೊಡುತ್ತಾರೋ ಕೊಡಲಿ. ಇನ್ನು ಅರ್ಧಗಂಟೆ ಕುಳಿತುಕೊಳ್ಳೋಣ ಇದನ್ನು ಮುಗಿಸೋಣ. ಇದನ್ನು ತಾವು ಪರಿಶೀಲನೆ ಮಾಡಿ ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಹೆಚ್.ಡಿ. ದೇವೇಗೌಡ : ಗೃಹಮಂತ್ರಿಗಳು ಇಲ್ಲ. ಅರ್ಧಗಂಟೆ ಟೈಮ್ ಕೊಟ್ಟರೆ ಎಷ್ಟು ಮಾಹಿತಿಯನ್ನು ಕಲೆಕ್ಟ್ ಮಾಡುವುದಕ್ಕೆ ಆಗುತ್ತದೋ ಅಷ್ಟು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಮಗೆ ಬೇಕಾಗಿರುವುದು ಸಮರ್ಪಕವಾದ ಉತ್ತರ. ನಾನೊಂದು ಪ್ರೊಸಿಡಿಂಗ್ಸ್‌ನ್ನು ಸೆಷನ್‌ಕೋರ್ಟ್ ಜಡ್ಜ್ ಕೊಟ್ಟಂತಹ ಆರ್ಡರ್ ಇದೆ. ಅದನ್ನು ಕೂಡ ಓದಿ ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಸದಸ್ಯರಾದ ಕಾಶಪ್ಪನವರ ಇನ್ಸಿಡೆಂಟ್ ಇದೆ. ಮಾನ್ಯ ಮಂತ್ರಿಗಳಾದ ಎನ್.ಎಂ. ನಬೀಯವರು ಸ್ವತಹ ಹೇಳಿಕೆ ಕೊಟ್ಟಿದ್ದಾರೆ. ಈ ತರಹ ಅನೇಕ ವಿಷಯಗಳಿವೆ. ಸವಿಸ್ತಾರವಾದ ಉತ್ತರವನ್ನು ಸರ್ಕಾರದಿಂದ ಬಯಸುತ್ತೇವೆ. ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಸಮಾಧಾನಕರವಾದ ಸಮರ್ಪಕವಾದ ಉತ್ತರ ನಮಗೆ ಬೇಕು ಆ ಉತ್ತರ ಸಿಗಲಿಲ್ಲವೆಂದರೆ ಬರೀ ನಾವು ಕೇಳಿಕೊಂಡು 5-10 ನಿಮಿಷದಲ್ಲಿ ಸಿಕ್ಕಿದಷ್ಟು ಉತ್ತರ ಹೇಳಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾವು ಇದನ್ನ್ನು ತಂದಿರುವ ಉದ್ದೇಶ ಸಮರ್ಪಕವಾದ ಉತ್ತರಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಗೃಹಮಂತ್ರಿಗಳು ಇವತ್ತು ಅನಿರೀಕ್ಷಿತವಾಗಿ ನಡೆದ ಘಟನೆಯಿಂದ ಅವರು ಹುಬ್ಬಳ್ಳಿಗೆ ಹೋಗಿದ್ದಾರೆ. ಇದನ್ನು ಅವಾಯ್ಡ್ ಮಾಡಬೇಕೆಂದು ನಮ್ಮ ಮುಂದೆ ಏನೂ ಇಲ್ಲ. ಅವರು ಒಪ್ಪಿಕೊಂಡಿದ್ದಾರೆ, ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ ಆ ವಿಷಯಕ್ಕೆ ಇಷ್ಟು ಹೇಳುತ್ತೇನೆ. ಹಿಂದೆ ಕೂಡ ಮಾರನೆಯ ದಿವಸ ರಿಪ್ಲೈ ಕೊಟ್ಟಿದ್ದಾರೆ. ಕೊನೆಯವರೆಗೂ ಡಿಸ್‌ಕಷನ್ ಮಾಡಿ ಮಾರನೆಯ ದಿವಸ ಉತ್ತರ ಕೊಡಲಾಗಿದೆ. ಮಾನ್ಯ ಅಧ್ಯಕ್ಷರು ಈ ಸದನಕ್ಕೆ ಹೊಸಬರೇನು ಅಲ್ಲ, ಅದು ತಮಗೂ ಗೊತ್ತಿದೆ.

ಚರ್ಚೆ ಸಂಜೆಯವರೆಗೆ ರಾತ್ರಿ ನಡೆದು ಬೆಳಿಗ್ಗೆ ಉತ್ತರ ಕೊಟ್ಟದ್ದು ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾ ನಾಯಕರು ಹೇಳಿದಂತೆ ಸಭೆಯನ್ನು ಮುಂದೂಡಿ ಈಗ 9 ಗಂಟೆಯ ಮೇಲೆ ಉತ್ತರ ಕೊಡಲಿ.

ಶ್ರೀ ಹೆಚ್.ಡಿ. ದೇವೇಗೌಡ : ನಡೆದಿದೆಯೆಂದು ಹೇಳಿದ್ದೇನೆ. ಉತ್ತರವನ್ನು ಮಾರನೆಯ ದಿವಸ ಕೊಟ್ಟಂತಹ ನಿದರ್ಶನಗಳಿವೆ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಪ್ರಸ್ತಾಪಿಸಿದಂತೆ ಎರಡು ಮೂರು ದಿವಸ ಚರ್ಚೆ ನಡೆದಿದೆ ಆಮೇಲೆ ಉತ್ತರ ಬಂದಿದೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಹೆಚ್ಚು ಸಮಯ ಈ ಸಭೆ ನಡೆಯಬೇಕು ಇದರ ಬಗ್ಗೆ ಇನ್ನು ಎರಡು ತಾಸು ಚರ್ಚೆ ಮಾಡಬೇಕೆಂದರೆ ಅಷ್ಟರಲ್ಲಿ ನಾನು ಉತ್ತರ ಹೇಳಲಿಕ್ಕೆ ಸಿದ್ಧನಿದ್ದೇನೆ. ಆದರೆ ನನ್ನ ಮನಸ್ಸಿಗೆ ಸಮಾಧಾನವಿಲ್ಲ. Unless I get full information to place before the House, it is not right on our part to reply. ನೀವು ಹೇಗೆ ಹೇಳುತ್ತೀರೋ ಹಾಗೆ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೇ, ನಾಳೆ ಪ್ರಶ್ನೋತ್ತರದ ನಂತರ ಅವರು ಸಮರ್ಪಕವಾದ ಉತ್ತರವನ್ನು ಕೊಡಲಿ ನಂತರ I will givee my Ruling either way. We will go to the neext subjeect. ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಅಲ್ಲಿ ಏನು ನಡೆದಿದೆ ಅದನ್ನು ಈ ಸ್ಟೇಜಿನಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾಳೆ ಪ್ರಮುಖವಾದ ವಿಷಯವನನು ಚರ್ಚೆಗೆ ತೆಗೆದುಕೊಳ್ಳುತ್ತಾ ಇದ್ದೇವೆ. ನಾನು ಹೇಳುವುದು, ಸಮಯವನ್ನು ಬೆಳಿಗ್ಗೆಯೇನು ನಿಗದಿ ಮಾಡಿದ್ದೀರಿ ಅದು ಸರಿಯಲ್ಲ. ಬೆಳಿಗ್ಗೆ ಏನು ಕಾರ್ಯಕಲಾಪಗಳಿವೆ ಅದಕ್ಕೆ ಮಹತ್ವ ಕೊಡುವುದು ಅಗತ್ಯವಿದೆ. ಸಾಯಂಕಾಲ 5 ಗಂಟೆಯ ಮೇಲೆ ಒಂದು ಸಮಯ ನಿಗದಿ ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ. ತಮಗೆ ಏನು ಸರಿ ಅನಿಸುತ್ತದೆ ಅದನ್ನು ಮಾಡಿ.

ಅಧ್ಯಕ್ಷರು : ನಿಲುವಳಿ ಸೂಚನೆಯನ್ನು ಮಂಡಿಸಿ ಅವರು ತಮ್ಮ ವಾದವನ್ನು ಮಂಡಿಸಿದ್ದಾರೆ. ಸರ್ಕಾರದವರು ಅದಕ್ಕೆ ಏನು ಉತ್ತರ ಕೊಡಬೇಕೋ ಆ ಹೊಣೆ ಅವರ ಮೇಲಿದೆ. ಮುಖ್ಯಮಂತ್ರಿಗಳ ಆರೋಗ್ಯ ಸರಿಯಿರಲಿಲ್ಲ ಅವರು ಸ್ವಲ್ಪ ತಡವಾಗಿ ಬಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ನಿಲುವಳಿ ಸೂಚನೆಯನ್ನು ಒಪ್ಪಿಕೊಂಡಿದ್ದೀರೋ.

ಅಧ್ಯಕ್ಷರು : ತಮ್ಮ ವಾದವನ್ನು ತಾವು ಮಂಡಿಸುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಅದನ್ನು ನನಾ ಅಂಗೀಕಾರ ಮಾಡಬೇಕೇ ಅಥವಾ ಬೇರೆ ಏನಾದಾರೂ ಮಾಡಬೇಕೇ ಎನ್ನುವುದನ್ನು ಸರ್ಕಾರದ ಉತ್ತರ ಕೇಳಿದ ಮೇಲೆ ನಿರ್ಣಯ ಮಾಡುತ್ತೇನೆ. ಈಗ ಸರ್ಕಾರ ಉತ್ತರ ಕೊಡಬೇಕು. ಅದರ ಬಗ್ಗೆ ನಾನು ಈಗಲೇ ಅಲೋ ಮಾಡಿ ಹೇಳುವ ಅಗತ್ಯ ಏನಿದೆ? ನಾಳೆ ಅವರು ಉತ್ತರ ಕೊಡಲಿ ಅಷ್ಟೇ ಬೇಗ ನಾನು ನನ್ನ ತೀರ್ಪನ್ನು ಕೊಡುತ್ತೇನೆ. ಮುಂದಿನ ವಿಷಯಕ್ಕೆ ತಕ್ಷಣ ಹೋಗೋಣ. ಮಾನ್ಯ ವಾಟಾಳ್ ನಾಗರಾಜ್‌ರವರು ಏನೋ ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ಈ ನಿಲುವಳಿ ಸೂಚನೆ ನಾಳೆಯವರೆಗೆ ಜೀವಂತವಾಗಿರುತ್ತದೆ ನಾಳೆ ನಮಗೂ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ.

ಅಧ್ಯಕ್ಷರು : ತಾವು ಮಾತನಾಡುವ ಅಪೇಕ್ಷೆ ಇದ್ದರೆ ಈಗ ಮಾತನಾಡಿ ಅದನ್ನು ಸೇರಿಸಿಕೊಂಡು ಸಭಾನಾಯಕರು ಉತ್ತರ ಕೊಡುತ್ತಾರೆ. ನಾಳೆ ಮತ್ತೆ ಭಾಷಣ ಬೇಡ.

ಶ್ರೀ ವಾಟಾಳ್ ನಾಗರಾಜ್ : ತಾವು ಅಪ್ಪಣೆ ಕೊಡಿಸಿರುವ ಪ್ರಕಾರ ಊಟಕ್ಕೆ ಹೋಗಬೇಕೆಂದು ಹೇಳಿದ್ದೀರಿ.

ಅಧ್ಯಕ್ಷರು : ಊಟಕ್ಕೆ ನನ್ನನ್ನು ಕರೆದಿಲ್ಲ, ಮಾನ್ಯ ಯಡಿಯೂರಪ್ಪನವರನ್ನು ಕೇಳಿ? ಅವರು ನನ್ನನ್ನು ಕರೆದಿದ್ದಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಏಕೆ ಗುಟ್ಟನ್ನು ಬಹಿರಂಗ ಮಾಡುತ್ತೀರಿ? ನನ್ನನ್ನು ಊಟಕ್ಕೆ ಕರೆದಿಲ್ಲವೆಂದು ನೀವು ಅವರನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಾ ಇದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ವಿರೋಧಪಕ್ಷದ ಸ್ನೇಹಿತ ಶಾಸಕರನ್ನೆಲ್ಲ ಕರೆದು ಅವರ ಮನಸ್ಸಿನಲ್ಲಿರುವ ವಿಷಯವನ್ನು ಈ ಸರ್ಕಾರ ಇಂತಹ ಸ್ಥಿತಿಗೆ ಬಂದಿರುವುದನ್ನು ಹತೋಟಿಗೆ ತರುವುದಕ್ಕೆ ಊಟ ಮಾಡುವಾಗ ಚರ್ಚೆ ಮಾಡಬೇಕೆಂದು ಅವರನ್ನು ಕರೆದಿದ್ದೇನೆ. ತಮ್ಮನ್ನು ಅಲ್ಲಿಗೆ ಕರೆಸಿ ಸಂದಿಗ್ಧಸ್ಥಿತಿಗೆ ಸಿಕ್ಕಿಸುವುದು ಬೇಡವೆಂದು ತಮ್ಮನ್ನ್ ಕರೆದಿಲ್ಲ. ಮತ್ತೊಮ್ಮೆ ಎಲ್ಲರನ್ನು ಕರೆದು ಊಟ ಹಾಕಿಸುವ ಪ್ರಯತ್ನ ಮಾಡುತ್ತೇನೆ ಅದು ನಮ್ಮ ಜವಾಬ್ದಾರಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮನ್ನು ನಾನು ಏನು ಕೇಳುತ್ತೇನೆಂದರೆ, ನಾನು ನಿಲುವಳಿ ಸೂಚನೆಯ ಬಗ್ಗೆ ಜಾಸ್ತಿ ಮಾತಾನಾಡುತ್ತಾ ಹೋದರೆ ಅವರಿಗೆ ತೊಂದರೆಯಾಗುತ್ತದೆ. ತಾವು ಹೇಳಿದ ಪ್ರಕಾರ ನಮಗೆ ಇಬ್ಬರಿಗೆ ನಾಳೆ ಈ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿರುವ ವಿಚಾರವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತೆ ನಾಳೆ ತಮ್ಮ ಭಾಷಣ ಆದ ಮೇಲೆ ಉತ್ತರ ಅಂದರೆ ದೊಡ್ಡ ತಪ್ಪು ಮಾಡಿದ ಹಾಗೆ ಆಗುತ್ತದೆ ನನ್ನ ಮನಸ್ಸು ಒಪ್ಪುತ್ತಿಲ್ಲ. ತಾವು ಮಾತನಾಡುವುದು ಇದ್ದರೆ ಇವತ್ತೇ ಮಾತನಾಡಿ ನಾಳೆ ಬೆಳಿಗ್ಗೆ ಭಾಷಣ ಬೇಡ.

ಶ್ರೀ ವಾಟಾಳ್ ನಾಗರಾಜ್ : ನಾನು ಮಾತನಾಡುವುದಕ್ಕೆ ಹೋದರೆ ಜಾಸ್ತಿ ಸಮಯವಾಗುತ್ತದೆ.

ಅಧ್ಯಕ್ಷರು : ನಿಮ್ಮಲ್ಲಿ ಒಗ್ಗಟ್ಟೆ ಇಲ್ಲ, ನೀವು ಏಕೆ ಹೀಗೆ?

ಶ್ರೀ ವಾಟಾಳ್ ನಾಗರಾಜ್ : ನಾವು ಎಲ್ಲ ಊಟಕ್ಕೆ ಒಟ್ಟಿಗೆ ಹೋಗುತ್ತಿದ್ದೇವೆ.

ಅಧ್ಯಕ್ಷರು : ಅದರ ಪ್ರತೀಕ ಕಾಣಿಸುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರು ಕರೆದಿರತಕ್ಕ ಊಟಕ್ಕೆ ನಾವು ಯಾವುದೇ ಭೇದಭಾವ ಇಲ್ಲದೆ ಹೋಗುತ್ತಿದ್ದೇವೆ. ಅದರಲ್ಲಿ ಏನೂ ಅನುಮಾನವಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಒಂದೇ ಮನೆಯವರನ್ನು ಒಗ್ಗಟ್ಟಿನಲ್ಲಿ ತರುವುದಕ್ಕೆ ಸಾಧ್ಯವಿಲ್ಲ, ಇನ್ನು ನೂರೆಂಟು ಮನೆಯವರನ್ನು ಹೇಗೆ ಒಗ್ಗಟ್ಟಿನಲ್ಲಿ ತರುವುದಕ್ಕೆ ಸಾಧ್ಯವಿದೆ ಹೇಳಿ?

ಅಧ್ಯಕ್ಷರು : ನಾಳೆ ಮಾತನಾಡುತ್ತೇವೆಂದರೆ ತೊಂದರೆಯಾಗುತ್ತದೆ, ತಾವು ಈಗ ಮಾತನಾಡಿ ಮುಗಿಸುವುದಾದರೆ 10 ನಿಮಿಷ ಕುಳಿತುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ತಾವು ಇಕ್ಕಟ್ಟಿಗೆ ಸಿಕ್ಕಿಸುತ್ತಾ ಇದ್ದೀರಿ.

ಅಧ್ಯಕ್ಷರು : ನಾಳೆ ಪತ್ರಿಕೆಯ ತುಂಬಾ ವಾಟಾಳ್‌ನಾಗರಾಜ್‌ರವರೇ ಇರುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ಪತ್ರಿಕೆಯ ತುಂಬಾ ಬರತಕ್ಕ ವಿಚಾರವಲ್ಲ, ನನ್ನನ್ನು ಈ ತರಹ......

ಅಧ್ಯಕ್ಷರು : ಆ ರೀತಿಯ ಅಭಿಪ್ರಾಯದಲ್ಲ್ ಹೇಳಲಿಲ್ಲ, ಇವತ್ತು 4 ಗಂಟೆ ಚರ್ಚೆ ನಿಮ್ಮದ್ದೇ ಆಗಿದೆ ಮತ್ತೆ ಏಕೆ ಅವಕಾಶ ಕೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾಗೇಗೌಡರು ಮಾಡಿದ ತಪ್ಪಿಗೆ ನಾನು ಹೊಣೆಯಲ್ಲ, ನಮಗೆ ಸಮಯ ಕೊಡುವುದಿಲ್ಲವೆಂದು ತೀರ್ಮಾನ ಮಾಡಿದ್ದೀರಿ ಹೋಗಲಿ ಬಿಡಿ.

ಅಧ್ಯಕ್ಷರು : ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ಈಗ ಸಭೆಯನ್ನು ನಾಳೆಗೆ ಮುಂದೂಡುತ್ತೇನೆ.

(ಸಭೆಯು 6 ಗಂಟೆ 50 ನಿಮಿಷಗಳಿಗೆ ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 11 ಗಂಟೆಗೆ ಸಭೆ ಸೇರಲು ತೀರ್ಮಾನಿಸಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)